ಶುಕ್ರವಾರ, ಮೇ 19, 2023 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಂಬಲ...
ನವದೆಹಲಿಯ ಜಂತರ್ ಮಂತರ್‌ನಲ್ಲಿ ಮಹಿಳೆಯೊಬ್ಬರು ಕುಸ್ತಿಪಟು ಸಾಕ್ಷಿ ಮಲಿಕ್ ಅವರನ್ನು ಅಪ್ಪಿಕೊಂಡು ಪ್ರತಿಭಟನೆಗೆ ಬೆಂಬಲ ಸೂಚಿಸಿದರು



ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ

ಕಬ್ಬನ್ ಉದ್ಯಾನವನ, ಬೆಂಗಳೂರು





ಪ್ರಮಾಣವಚನ ಸ್ವೀಕರಿಸುತ್ತಿರುವ

ಸನ್ಮಾನ್ಯ ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ನೌಕರರ ಭರವಸೆ • 7ನೇ ವೇತನ ಆಯೋಗ ಅನುಷ್ಠಾನ • ಹಳೆ ಪಿಂಚಣಿ ಯೋಜನೆ ಜಾರಿ

ರಾಜ್ಯದ ಸಮಸ್ತ ಸರ್ಕಾರಿ ನೌಕರರ ಪರವಾಗಿ ತುಂಬುಹೃದಯದ ಅಭಿನಂದನೆಗಳು



ಸಿ.ಎಸ್. ಷಡಾಕ್ಷರಿ, ರಾಜ್ಯಾಧ್ಯಕ್ಷರು

ಶುಭ ಕೋರುವವರು



ಟಿ. ಶ್ರೀನಿವಾಸ್ – ಪ್ರಧಾನ ಕಾರ್ಯದರ್ಶಿ
ಆರ್. ಶ್ರೀನಿವಾಸ್ – ರಾಜ್ಯ ಖಜಾಂಚಿ
ಮಲ್ಲಿಕಾರ್ಜುನ ಬಿ.ಬಳ್ಳಾರಿ – ಕಾರ್ಯಾಧ್ಯಕ್ಷರು
ಬಿ.ಹೆಚ್. ವೆಂಕಟೇಶಯ್ಯ – ಗೌರವಾಧ್ಯಕ್ಷರು
ಎಂ.ವಿ. ರುದ್ರಪ್ಪ – ಹಿರಿಯ ಉಪಾಧ್ಯಕ್ಷರು
ಎಸ್. ಬಸವರಾಜು – ಹಿರಿಯ ಉಪಾಧ್ಯಕ್ಷರು
ಡಾ.ನೆಲ್ಕುದ್ರಿ ಸದಾನಂದ – ರಾಜ್ಯ ಕಾರ್ಯದರ್ಶಿ

ಉಪಾಧ್ಯಕ್ಷರುಗಳು



ಸುರೇಶ್ ಸಿ. ಶೆಡಶ್ಯಾಳ, ನಾಗರಾಜು ಜುಮ್ಮಣ್ಣನವರ್, ಎನ್. ನರಸಿಂಹರಾಜು, ರಾಜೇಂದ್ರಕುಮಾರ್ ಗಂದಗೆ, ಸಂಜೀವಕುಮಾರ್ ನಾಯಕ್, ರವಿ ಎಲ್. ಗುಂಜೀಕರ್, ಆರ್. ಮೋಹನ್ ಕುಮಾರ್, ಹರ್ಷ ಎ.ಎಸ್., ಸಿದ್ದೇಶ್ವರ ಎಸ್., ಗಿರಿಗೌಡ ಹೆಚ್., ಡಾ. ಎಸ್. ಸಿದ್ಧರಾಮಣ್ಣ, ಮಾಲತೇಶ ಎನ್., ದಿನೇಶ್ ಬಿ.ಡಿ., ಹೇಮಲತಾ ಹೆಚ್.ಎಸ್, ಹೆಚ್. ಬಾಲಕೃಷ್ಣ

ಜಿಲ್ಲಾಧ್ಯಕ್ಷರುಗಳು



ರಾಜು ಲೆಂಗಟಿ – ಕಲಬುರಗಿ
ಎಸ್.ಎಫ್. ಸಿದ್ಧನಗೌಡರ – ಧಾರವಾಡ
ಅಮೃತಗೌಡ ಪಾಟೀಲ – ಹಾವೇರಿ
ದೇವೇಂದ್ರ – ಚಿಕ್ಕಮಗಳೂರು
ಎಂ. ಶಿವಾಜಿರಾವ್ – ಬಳ್ಳಾರಿ
ಚಂದ್ರಶೇಖರ್ – ಚಾಮರಾಜನಗರ
ಈ. ಕೃಷ್ಣೇಗೌಡ – ಹಾಸನ
ಜಿ. ಹರೀಶ್ – ಚಿಕ್ಕಬಳ್ಳಾಪುರ
ಮಹಿಪಾಲರೆಡ್ಡಿ – ಯಾದಗಿರಿ
ಪಿ.ಕೆ. ಕೃಷ್ಣ – ದಕ್ಷಿಣ ಕನ್ನಡ



ಶಂಭುಗೌಡ. ಎಸ್ – ಮಂಡ್ಯ
ಜಿ. ಸುರೇಶ್ ಬಾಬು – ಕೋಲಾರ
ಜೆ. ಗೋವಿಂದರಾಜ್ – ಮೈಸೂರು
ಭೀಮಣ್ಣ ನಾಯಕ – ರಾಯಚೂರು
ಜಿ. ಮಲ್ಲಿಕಾರ್ಜುನಗೌಡ – ವಿಜಯನಗರ
ಶ್ರೀನಿವಾಸ – ಮಡಿಕೇರಿ
ಕೆ. ಸತೀಶ್ – ರಾಮನಗರ
ಬಸವರಾಜ ಟಿ. ರಾಯವ್ವಗೋಳ – ಬೆಳಗಾವಿ
ಕೆ. ಅಂಪಾರು ದಿನಕರ ಶೆಟ್ಟಿ – ಉಡುಪಿ
ಕೆ.ಟಿ. ತಿಮ್ಮಾರೆಡ್ಡಿ – ಚಿತ್ರದುರ್ಗ
ವೀರೇಶ ಎಸ್. ಒಡೇನಪುರ – ದಾವಣಗೆರೆ

ಹಾಗೂ ಬೆಂಗಳೂರು ನಗರ ರಾಜ್ಯ ಪರಿಷತ್ ಸದಸ್ಯರು, ತಾಲ್ಲೂಕು/ಯೋಜನಾ ಶಾಖೆಯ ಅಧ್ಯಕ್ಷರು, ಎಲ್ಲಾ ಹಂತದ ಪದಾಧಿಕಾರಿಗಳು ಮತ್ತು ರಾಜ್ಯದ ಎಲ್ಲಾ ಇಲಾಖೆಗಳ ವೃಂದ ಸಂಘಗಳ ಅಧ್ಯಕ್ಷರು-ಪದಾಧಿಕಾರಿಗಳು

‘ಕೈ’ ತೇರು ಎಳೆಯುವ ‘ಜೋಡೆತ್ತು’ಗಳು

ಸಿ.ಎಂ. ಗಾದಿಗೆ ಗತ್ತಿನಿಂದೇರಿದ ಹಳ್ಳಿ ಹೈದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜವಾದಿ ಸಿದ್ಧಾಂತದ ಕುಲುಮೆಯಲ್ಲಿ ನಾಯಕನಾಗಿ ಅರಳಿದ ಸಿದ್ದರಾಮಯ್ಯ, ಒಂದುಕಾಲಕ್ಕೆ ಕಾಂಗ್ರೆಸ್ ವಿರೋಧಿ ರಾಜಕಾರಣದಿಂದಲೇ ಗುರ್ತಿಸಿಕೊಂಡವರು. ಈಗ ಅದೇ ಪಕ್ಷದಿಂದ ಎರಡನೇ ಬಾರಿಗೆ ಮುಖ್ಯಮಂತ್ರಿಯ ಪಟ್ಟ ಏರುತ್ತಿರುವುದು ಅವರು ಸವೆಸಿದ ಕವಲುದಾರಿಯೇ ಹೊತ್ತುತಂದಿರುವ ‘ಕಾಣಿಕೆ’. ಒಂದು ಕಾಲದಲ್ಲಿ ‘ರಾಜಕೀಯದ ಸಹವಾಸವೇ ಸಾಕು. ನಾನು ಮತ್ತೆ ಸಿದ್ದರಾಮನಹುಂಡಿಗೆ ಹೋಗುತ್ತೇನೆ. ಮೈಸೂರಿನಲ್ಲಿ ವಕೀಲಿ ವೃತ್ತಿ ಮಾಡುತ್ತೇನೆ’ ಎಂದು ರಾಜಕೀಯ ಸನ್ಯಾಸಕ್ಕೆ ಮುಂದಾಗಿದ್ದ ಸಿದ್ದರಾಮಯ್ಯ ತಮ್ಮ ರಾಜಕೀಯ ಜೀವನದ ಬಹುದೊಡ್ಡ ಕನಸನ್ನೀಗ ಎರಡನೇ ಸಲ ನನಸು ಮಾಡಿಕೊಂಡವರು.

1996ರಲ್ಲಿಯೇ ಮುಖ್ಯಮಂತ್ರಿ ಗಾದಿಯ ಹತ್ತಿರಕ್ಕೆ ಬಂದಿದ್ದರೂ ಅವರಿಗೆ ಅದು ಸಿಗಲಿಲ್ಲ. ಸ್ವಲ್ಪದರಲ್ಲಿಯೇ ತಪ್ಪಿಹೋಗಿ ಆಗ ಉಪಮುಖ್ಯಮಂತ್ರಿಯಾಗಿದ್ದರು. ನಂತರ 2004ರಲ್ಲಿ ಕೂಡ ಅವರು ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಯಾಗಿದ್ದರು. ಆಗಲೂ ಅವರು ಉಪ ಮುಖ್ಯಮಂತ್ರಿಯಾಗಲು ಮಾತ್ರ ಸಾಧ್ಯವಾಯಿತು. ಈಗ ಎರಡನೇ ಬಾರಿಗೆ ಆ ಹುದ್ದೆ ಅಲಂಕರಿಸುವ ಮೂಲಕ ಈ ಹಿಂದೆ ಎರಡು ಬಾರಿ ಅವಕಾಶ ತಪ್ಪಿದ್ದರ ಲೆಕ್ಕ ಚುಕ್ತಾ ಮಾಡಿದ್ದಾರೆ.

ಜಾತ್ಯತೀತ ಸಮಾಜ, ಸಾಮಾಜಿಕ ನ್ಯಾಯ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣದ ಮಾತುಗಳನ್ನು ಆಡುತ್ತಾ ಬಂದ ಅವರ ನಾಲ್ಕು ದಶಕಗಳ ರಾಜಕೀಯ ಜೀವನದಲ್ಲಿ ಹಲವಾರು ಏಳುಬೀಳುಗಳಿವೆ. ಅವೆಲ್ಲವನ್ನೂ ಮೆಟ್ಟಿನಿಂತ ಅವರು ಈಗ ಬದಲಾಗಿದ್ದಾರೆ. ರಾಜಕೀಯದ ಆರಂಭದ ಕಾಲದಲ್ಲಿ ಇದ್ದ ಪ್ಯಾಂಟ್, ಷರ್ಟ್, ಬೂಟು ಮುಂತಾದ ಪೋಷಾಕು ಈಗ ಇಲ್ಲ. ಅಡ್ಡಪಂಚೆ, ತುಸು ಉದ್ದದ ನಿಲುವಂಗಿ, ಮೇಲೊಂದು ರೇಷ್ಮೆ ಶಲ್ಯದ ದಿರಿಸು ತೊಡುವ ಸಿದ್ದರಾಮಯ್ಯನವರದು ಪಕ್ಕಾ ಹಳ್ಳಿಗಾಡಿನ ರೈತನ ಶೈಲಿ–ಮಾತಿನ ವರಸೆ. ಮೇಲ್ನೋಟಕ್ಕೆ ಹಳ್ಳಿ ಹೈದನಂತೆ ಕಂಡರೂ ಒಳಕ್ಕೆ ಗಟ್ಟಿ ಮನುಷ್ಯ. ಯಾವುದಕ್ಕೂ ಹೆದರದ, ಹಿಡಿದ ಕೆಲಸವನ್ನು ಪಟ್ಟು ಹಿಡಿದು ಮಾಡುವ ಛಲಗಾರ.

ಎಪ್ಪತ್ತೈದರ ಏರು ವಯಸ್ಸಿನಲ್ಲೂ ಇಪ್ಪತ್ತೈದರ ಉತ್ಸಾಹ, ಉಮೇದಿನಲ್ಲಿರುವ ಸಿದ್ದರಾಮಯ್ಯ ಕರ್ನಾಟಕ ಕಂಡ ಅಪರೂಪದ ರಾಜಕಾರಣಿ. ಮಾತಿಗೆ ನಿಂತರೆ ಕೇಳುಗರ ಮನದಾಳವನ್ನು ಕೆಣಕಿ, ಅವರ ಹೃದಯವನ್ನು ತಲುಪಬಲ್ಲ ವಾಕ್‌ಪಟು. ಸಣ್ಣದೊಂದು ಚೀಟಿಯೂ ಇಲ್ಲದೇ ಅಂಕಿಅಂಶಗಳನ್ನು ಕರಾರುವಾಕ್ಕಾಗಿ ಸಭಿಕರ ಮುಂದೆ ಇಟ್ಟು, ಸತ್ಯದ ಒಳಗನ್ನು ಅವರು ತೆರೆದಿಡುವ ಪರಿ ವಿಭಿನ್ನ. ಹಾಗಾಗಿಯೇ ಸಿದ್ದರಾಮಯ್ಯ ಮಾತಿಗೆ ಜನರಿಗೆ ಮೈಯೆಲ್ಲ ಕಿವಿಯಾಗುವ ತವಕ.

ಸಿದ್ದರಾಮಯ್ಯನವರ ಮಾತಿನಲ್ಲಿ ವಿಷ ಇರುವುದಿಲ್ಲ; ವಿಷಯ ಇರುತ್ತದೆ. ಸತ್ಯದ ಕಹಿ ಇರುತ್ತದೆ. ‘ಸತ್ಯವನ್ನೇ ಹೇಳಬೇಕು, ಪ್ರಿಯವಾದುದನ್ನೇ ಹೇಳಬೇಕು, ಅಪ್ರಿಯವಾದ ಸತ್ಯವನ್ನು ಹೇಳಬಾರದು’ ಎಂಬ ಮಾತನ್ನು ಸಿದ್ದರಾಮಯ್ಯ ಪಾಲಿಸುವುದಿಲ್ಲ. ಅಪ್ರಿಯವಾದರೂ ಪರವಾಗಿಲ್ಲ; ಸತ್ಯವನ್ನೇ ಹೇಳುತ್ತೇನೆ ಎಂದು ನಂಬಿಕೊಂಡವರು ಅವರು. ಹಾಗಾಗಿ, ಅನೇಕರಿಗೆ ಸಿದ್ದರಾಮಯ್ಯನವರನ್ನು ಕಂಡರಾಗದು.

ಕನ್ನಡದಲ್ಲಿ ವಿಶಿಷ್ಟ ಶೈಲಿಯ ಭಾಷಣಕ್ಕೆ ಕೆಲವರಷ್ಟೇ ಹೆಸರುವಾಸಿ. ಹಾ.ಮಾ. ನಾಯಕ, ಪ್ರೊ. ಎಂ.ಡಿ. ನಂಜುಂಡಸ್ವಾಮಿ ಹಾಗೂ ಯು.ಆರ್. ಅನಂತಮೂರ್ತಿಯವರಿಗೆ ಇಂತಹ ಅಪೂರ್ವವಾದ ಭಾಷಣ ಕಲೆ ಇತ್ತು. ರಾಜಕೀಯ ನೇತಾರ ಎಸ್. ಬಂಗಾರಪ್ಪನವರು ಈ ಮಾತುಗಾರಿಕೆಯನ್ನು ರೂಢಿಸಿಕೊಂಡಿದ್ದರು. ಪ್ರೊ. ಎಂಡಿಎನ್ ಒಡನಾಟದಿಂದಲೇ ರಾಜಕೀಯಕ್ಕೆ ಬಂದ ಸಿದ್ದರಾಮಯ್ಯನವರು ಅದೇ ಮಾತುಗಾರಿಕೆಯ ಕಲೆಯನ್ನು ದಕ್ಕಿಸಿಕೊಂಡವರು.


ಇಡೀ ದೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರನ್ನು ಎದುರು ಹಾಕಿಕೊಂಡು ಏರಿದ ಧ್ವನಿಯಲ್ಲಿ ಮಾತನಾಡಿದ ಮುಂಚೂಣಿ ನಾಯಕರಲ್ಲಿ ಸಿದ್ದರಾಮಯ್ಯ ಕೂಡ ಒಬ್ಬರು. ಕೋಮುವಿಷ ಹೇಗೆ ದೇಶಕ್ಕೆ, ದೇಶಿಗರ ಭವಿಷ್ಯಕ್ಕೆ ಮಾರಕವಾದದು ಎಂಬುದನ್ನು ಸಾಮಾನ್ಯರಿಗೂ ಅರ್ಥವಾಗುವಂತೆ ಸರಳ, ಆಕರ್ಷಕ ಮಾತುಗಳಲ್ಲಿ ವಿವರಿಸುವುದು ಸಿದ್ದರಾಮಯ್ಯನವರಿಗೆ ಮಾತ್ರ ಸಾಧ್ಯವೇನೋ.

ಮೌಢ್ಯಗಳು ಜನರನ್ನು ಹಾಳು ಮಾಡುತ್ತವೆ; ವೈಭವೋಪೇತ ಮದುವೆಗಳು ಜನರ ಆರ್ಥಿಕತೆಗೆ ತೊಂದರೆ ಕೊಡುತ್ತವೆ; ಖಾಸಗಿ ಆಸ್ಪತ್ರೆಗಳು ಜನರನ್ನು ಸುಲಿಗೆ ಮಾಡುತ್ತವೆ ಎಂಬುದನ್ನು ಅರ್ಥ ಮಾಡಿಕೊಂಡಿದ್ದ ಅವರು, ಇವೆಲ್ಲವನ್ನೂ ನಿಯಂತ್ರಿಸಲು ಕಾಯ್ದೆ ಜಾರಿಗೊಳಿಸುವ ಯತ್ನ ಮಾಡಿದರು. ಒಳಮೀಸಲಾತಿಯ ಜಾರಿಗೆ ಸತತ ಪ್ರಯತ್ನ ಮಾಡಿದರು. ಸಿದ್ದರಾಮಯ್ಯನವರ ವೈಚಾರಿಕ ಪ್ರಖರತೆಗೆ ಇವು ಸಾಕ್ಷಿ. ವಿವಾದಗಳಿಗೂ ಅವರು ಹೊರತಾದವರಲ್ಲ. ಮುಖ್ಯಮಂತ್ರಿಯಾಗಿದ್ದಾಗ ಹಲವು ವಿವಾದಗಳು ಅವರನ್ನು ಸುತ್ತಿಕೊಂಡಿದ್ದವು. ತೀರಾ ವಿಷಮವಾದ ಸನ್ನಿವೇಶದಲ್ಲಿ, ಜಿದ್ದಾಜಿದ್ದಿ ಸವಾಲಿನಲ್ಲಿ ಮುಖ್ಯಮಂತ್ರಿ ಹುದ್ದೆಯನ್ನು ಗಿಟ್ಟಿಸಿಕೊಂಡಿರುವ ಸಿದ್ದರಾಮಯ್ಯ ಮತ್ತೊಂದು ಅಗ್ನಿಪರೀಕ್ಷೆ ಎದುರಿಸಲು ಸಜ್ಜಾಗಿದ್ದಾರೆ.

‘ಅಹಿಂದ’ದ ತಲ್ಲಣ ಬಲ್ಲವರು...

‘ಅಹಿಂದ’ ಸಮುದಾಯದ ತಲ್ಲಣಗಳನ್ನು ಬರೀ ಮಾತಿನಲ್ಲಿ ಬಣ್ಣಿಸುತ್ತಾ, ಮೊಸಳೆ ಕಣ್ಣೀರು ಸುರಿಸುವ ಜಾಯಮಾನ ಅವರದಲ್ಲ. ಬಡವರು ಒಂದು ಹೊತ್ತೂ ಹಸಿದು ಮಲಗಬಾರದು ಎಂಬ ಸಂಕಲ್ಪಬಲವನ್ನು ಅನುಷ್ಠಾನಕ್ಕೆ ತಂದ ಹೆಗ್ಗಳಿಕೆ ಅವರದ್ದು. ಅನ್ನಭಾಗ್ಯ, ಕ್ಷೀರಭಾಗ್ಯ, ವಿದ್ಯಾಸಿರಿ, ಇಂದಿರಾ ಕ್ಯಾಂಟೀನ್ ಕಲ್ಪನೆ ಹುಟ್ಟಿಕೊಂಡಿದ್ದೇ, ಅವರು ಬಾಲ್ಯದಲ್ಲಿ ಹಸಿವನ್ನು ಉಂಡು, ಹಸಿವುಂಡು ಮಲಗುತ್ತಿದ್ದವರ ಕಡುಕಷ್ಟ ನೋಡಿಯೇ.

ವಿಧಾನಸಭೆ ಅಧಿವೇಶನದಲ್ಲಿ ಅನ್ನಭಾಗ್ಯ ಯೋಜನೆ ಕುರಿತು ಆಕ್ಷೇಪಿಸಿದ್ದ ಬಿಜೆಪಿಯ ಚಂದ್ರಕಾಂತ ಬೆಲ್ಲದ, ‘ಪುಕ್ಕಟೆ ಅಕ್ಕಿ ಕೊಡುವುದರಿಂದ ಜನರೆಲ್ಲ ಸೋಮಾರಿಗಳಾಗಿದ್ದಾರೆ. ಹೊಲ–ಮನೆ ಕೆಲಸಕ್ಕೆ ಯಾರೂ ಬರುತ್ತಿಲ್ಲ’ ಎಂದಿದ್ದರು. ಸಿಟ್ಟಿನಿಂದ ಎದ್ದ ಸಿದ್ದರಾಮಯ್ಯ, ‘ಹಿರಿಯರಿದೀರಿ; ಈ ರೀತಿ ಎಲ್ಲ ಮಾತನಾಡಬಾರದು. ಅವರು ಇಷ್ಟು ವರ್ಷ ನಿಮಗಾಗಿ ದುಡಿದಿದ್ದಾರೆ. ನೀವು ಕುಳಿತು ತಿಂದಿದ್ದೀರಿ. ಇನ್ನಷ್ಟು ವರ್ಷ ಅವರು ಕುಳಿತು ತಿನ್ನಲಿ. ನೀವು ದುಡಿದು ತಿನ್ನಿ’ ಎಂದು ಖಾರವಾಗಿಯೇ ಹೇಳಿದ್ದರು. ಸಿದ್ದರಾಮಯ್ಯನವರಿಗೆ ಇರುವ ಬದ್ಧತೆ ಅಂತಹದ್ದು.



ಕಲೆ: ಸಂತೋಷ್ ಸಸಿಹಿತ್ಲು

ಟ್ರಬಲ್ ಶೂಟರ್, ತಂತ್ರಗಾರಿಕೆ ನಿಪುಣ

• ಆರ್. ಜಿತೇಂದ್ರ

ರಾಮನಗರ: ಸಂದಿಗ್ಧ ಪರಿಸ್ಥಿತಿಗಳಲ್ಲಿ ರಾಜ್ಯ ಕಾಂಗ್ರೆಸ್ ಪಾಲಿಗೆ ‘ಬಂಡೆ’ಯಂತೆ ನಿಂತು ಪಕ್ಷ ನಿಷ್ಠೆ ಪ್ರದರ್ಶಿಸಿದ, ಈ ಬಾರಿಯ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಹೆಗಲು ಕೊಟ್ಟು ದುಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಹಟಕ್ಕೆ ಬಿದ್ದು ಉಪಮುಖ್ಯಮಂತ್ರಿ ಹುದ್ದೆಯನ್ನು ದಕ್ಕಿಸಿಕೊಂಡಿದ್ದಾರೆ.

‘ಟ್ರಬಲ್ ಶೂಟರ್’ ಎಂದೇ ಖ್ಯಾತಿಯಾದ ಡಿಕೆಶಿ ನಾಲ್ಕು ದಶಕಗಳಿಂದ ರಾಜಕಾರಣದಲ್ಲಿದ್ದು, ಕಾಂಗ್ರೆಸ್‌ನಲ್ಲಿ ಸಾಮಾನ್ಯ ಕಾರ್ಯಕರ್ತನಿಂದ ಯಾತ್ರೆ ಆರಂಭಿಸಿ ಕೆಪಿಸಿಸಿ ಅಧ್ಯಕ್ಷರ ಹುದ್ದೆಯವರೆಗೆ ಏರಿದವರು. ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್‌ನ ತಂತ್ರಗಾರಿಕೆಯ ನೇತೃತ್ವವನ್ನೂ ವಹಿಸಿದವರು. 2020ರ ಮಾರ್ಚ್‌ನಲ್ಲಿ ಕೆಪಿಸಿಸಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಶಿವಕುಮಾರ್ ಪಕ್ಷ ಸಂಘಟನೆಯಲ್ಲಿ ಈವರೆಗೆ ಹಿಂತಿರುಗಿ ನೋಡಿದ್ದಿಲ್ಲ. ಧಾಡಸಿ ಮನೋಭಾವದ ಅವರ ಮಾತು, ರಾಜ್ಯದ ಇತರ ನಾಯಕರ ‘ಪಾಲಿಷ್ಡ್’ ರೀತಿಯದಲ್ಲ. ಅದೇನಿದ್ದರೂ ನೇರಾನೇರ. ಎದುಗಿರುವವರನ್ನು ಆ ಮಾತು ನಾಟಿದರೂ ಚಿಂತೆಯಿಲ್ಲ, ಅಂದುಕೊಂಡಿದ್ದನ್ನು ನಾಟಿ ಶೈಲಿಯಲ್ಲಿ ಹೇಳಿಯೇ ಸಿದ್ಧ ಎನ್ನುವ ಮನೋಭಾವ ಅವರದು.

ಒಕ್ಕಲಿಗ ಸಮುದಾಯದ ಪ್ರಭಾವಿ ನಾಯಕರಾದ ಶಿವಕುಮಾರ್‌ರದ್ದು ರಾಜ್ಯ ರಾಜಕಾರಣದಲ್ಲಿ ಪರಿಚಿತ ಹೆಸರು. ಹಿಂದಿನ ಸಾತನೂರು ವಿಧಾನಸಭಾ ಕ್ಷೇತ್ರ ಹಾಗೂ ಹಾಲಿ ಕನಕಪುರ ಕ್ಷೇತ್ರದಿಂದ ಸತತ ಎಂಟನೇ ಬಾರಿ ಶಾಸಕರಾಗಿ ಆಯ್ಕೆಯಾದ ಕೀರ್ತಿ ಅವರದ್ದು. ಈ ಬಾರಿ 1.22 ಲಕ್ಷ ಮತಗಳ ಅಂತರದಿಂದ ಗೆದ್ದಿರುವುದು ಅವರ ಜನಪ್ರಿಯತೆ ಮತ್ತು ತಂತ್ರಗಾರಿಕೆಗೆ ಸಾಕ್ಷಿ.

ದೇವರಾಜ ಅರಸು ಕಾಲದಲ್ಲಿ ರಾಜಕಾರಣ ಪ್ರವೇಶ ಮಾಡಿದ ಶಿವಕುಮಾರ್ ವಿದ್ಯಾರ್ಥಿ ಮತ್ತು ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ರಾಜಕೀಯದ ಇನ್ನಿಂಗ್ಸ್ ಆರಂಭಿಸಿದವರು. ಅವರು ಮೊದಲ ಬಾರಿಗೆ ಚುನಾವಣೆ ಎದುರಿಸಿದ್ದು 1985ರಲ್ಲಿ. ಸಾತನೂರು ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾದ ಅವರಿಗೆ ಸ್ಪರ್ಧಿಯಾಗಿದ್ದು ಜನತಾ ಪಕ್ಷದ ಅಭ್ಯರ್ಥಿ ಎಚ್.ಡಿ. ದೇವೇಗೌಡ. ಮೊದಲ ಚುನಾವಣೆಯಲ್ಲೇ ಗೌಡರ ವಿರುದ್ಧ ಸೋಲು ಕಂಡ ಶಿವಕುಮಾರ್, ಮುಂದೆ ಜಿಲ್ಲಾ ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯಿತಿಗೆ ಸಾತನೂರು ಕ್ಷೇತ್ರದಿಂದ ಸದಸ್ಯರಾಗಿ ಆಯ್ಕೆಯಾದರು. 1989ರ ವಿಧಾನಸಭೆ ಚುನಾವಣೆಯಲ್ಲಿ ಸಾತನೂರು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಮತ್ತೆ ಕಣಕ್ಕೆ ಇಳಿದು ಗೆಲುವಿನ ನಗೆ ಬೀರಿದರು. ಅಲ್ಲಿಂದ ಇಲ್ಲಿಯವರೆಗೆ ಅವರು ತಿರುಗಿ ನೋಡಿದ್ದಿಲ್ಲ. 1994ರ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ವಂಚಿತರಾದಾಗಲೂ ಪಕ್ಷೇತರರಾಗಿ ಸ್ಪರ್ಧಿಸಿ ಗೆಲುವು ಕಂಡವರು. 1999ರ ಚುನಾವಣೆಯಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರಂತಹ ನಾಯಕನನ್ನೂ ಮಣಿಸಿದ್ದರು. 2004ರ ಲೋಕಸಭಾ ಚುನಾವಣೆಯಲ್ಲಿ ದೇವೇಗೌಡರ ವಿರುದ್ಧ ತೇಜಸ್ವಿನಿ ಅವರನ್ನು ನಿಲ್ಲಿಸಿ, ಘಟಾನುಘಟಿಗೇ ಸೋಲುಣಿಸಿದ ಛಲವಂತ ನಾಯಕನಾಗಿಯೂ ಹೆಸರಾದವರು.

ಮಾಗಿದ ವ್ಯಕ್ತಿತ್ವ: ಎದುರಾಳಿಯ ಮುಖಕ್ಕೆ ಹೊಡೆದಂತೆ ಮಾತನಾಡುವುದು ಶಿವಕುಮಾರ್ ವ್ಯಕ್ತಿತ್ವಕ್ಕೆ ಸಹಜವಾಗಿತ್ತು. ರಾಜ್ಯದ ಭೂಗತ ಜಗತ್ತನ್ನೇ ತನ್ನ ಕೈಯಳತೆಯಲ್ಲಿಟ್ಟುಕೊಂಡಿದ್ದ ರೌಡಿ ಕೊತ್ವಾಲ್ ರಾಮಚಂದ್ರನ ಜತೆ ಅವರ ನಂಟಿತ್ತು ಎಂದು ವಿರೋಧಿಗಳು ಆಪಾದಿಸುವುದುಂಟು. ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸಚಿವರಾಗುವುದಕ್ಕೂ ಮುನ್ನ, ಪೂರ್ವಾಶ್ರಮದ ಒರಟುತನ, ಮಾತಿನಲ್ಲಿ ಧಿಮಾಕು ಅವರ ವ್ಯಕ್ತಿತ್ವಕ್ಕೆ ಅಂಟಿಕೊಂಡಿತ್ತು. ತಮ್ಮ ‘ಶಿಲೆ’ಯಂತಹ ಮೈಮಾಟ–ಮಾತುಗಾರಿಕೆಗೆ ಕಲೆಯ ಕುಸುರಿಗಾರಿಕೆ ತಂದುಕೊಳ್ಳಬೇಕೆಂದು ನಿಶ್ಚಯಿಸಿದ ಅವರು, ಮಾಗತೊಡಗಿದರು. ಸಂಸ್ಕೃತ ಹಾಗೂ ಸಾಹಿತ್ಯವನ್ನು ಗುರುಮುಖೇನ ಕಲಿತ ಶಿವಕುಮಾರ್, ಹೋದಲ್ಲೆಲ್ಲ ಸಂಸ್ಕೃತ ಶ್ಲೋಕ, ಸಾಹಿತ್ಯದ ಉದಾಹರಣೆಗಳನ್ನು ಉಲ್ಲೇಖಿಸಿ ತಮ್ಮ ಶೈಲಿಯನ್ನೇ ಬದಲಿಸಿಕೊಂಡರು. ಮಾತಿನಲ್ಲಿದ್ದ ಕಠಿಣತೆ, ಧಿಮಾಕುಗಳು ಕಾಣೆಯಾಗಿ ಸೌಜನ್ಯ–ತಾಳ್ಮೆ ಅವರ ಶಾರೀರದಲ್ಲಿ ಕಾಣತೊಡಗಿತು. ಕೆಪಿಸಿಸಿ ಅಧ್ಯಕ್ಷರಾದ ಬಳಿಕ ಪೂರ್ಣ ಮಾಗುವಿಕೆಗೆ ಅವರ ದೇಹ–ಭಾಷೆ ಪಳಗಿತಾದರೂ ಆಗೊಮ್ಮೆ–ಈಗೊಮ್ಮೆ ಹಳೆಯ ದರ್ಪಗಳೂ ಇಣುಕಿ ಮರೆಯಾಗುತ್ತಿದ್ದವು.

ಮಂತ್ರಿ ಪದವಿ: ಎಸ್.ಬಂಗಾರಪ್ಪ ಮತ್ತು ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆಗಿದ್ದಾಗ ಬಂದಿಖಾನೆ, ಸಹಕಾರ, ನಗರಾಭಿವೃದ್ಧಿ ಸಚಿವರಾಗಿ ಕಾರ್ಯ ನಿರ್ವಹಿಸಿದ ಅನುಭವ ಶಿವಕುಮಾರ್ ಅವರದ್ದು. ಈ ಇಬ್ಬರೂ ನಾಯಕರ ‘ಬ್ಲ್ಯೂ ಐ ಬಾಯ್’ ಎಂದೂ ರಾಜಕಾರಣದಲ್ಲಿ ಗುರುತಿಸಲ್ಪಟ್ಟವರು. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಇಂಧನ ಸಚಿವರಾಗಿ ಹಾಗೂ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಜಲ ಸಂಪನ್ಮೂಲ ಸಚಿವರಾಗಿ ಕಾರ್ಯ ನಿರ್ವಹಿಸಿದ ಅನುಭವಿ. ಕೆಪಿಸಿಸಿ ಕಾರ್ಯದರ್ಶಿಯಾಗಿ, ಕಾರ್ಯಾಧ್ಯಕ್ಷರಾಗಿ, ಪ್ರಚಾರ ಸಮಿತಿ ಅಧ್ಯಕ್ಷರಾಗಿಯೂ ಜವಾಬ್ದಾರಿ ನಿರ್ವಹಿಸಿದ್ದರು.

ರೆಸಾರ್ಟ್ ಆತಿಥ್ಯದಿಂದ ವಿಶ್ವಾಸ ಗಳಿಕೆ: ಎರಡೂವರೆ ದಶಕಗಳ ರಾಜಕಾರಣವನ್ನು ನೀವು ಬಲ್ಲಿರಾದರೆ 2002ರಲ್ಲಿ ಮಹಾರಾಷ್ಟ್ರದ ವಿಲಾಸರಾವ್ ದೇಶಮುಖ್ ನೇತೃತ್ವದ ಸರ್ಕಾರ ಬೀಳದಂತೆ ಅದರ ನೆರವಿಗೆ ಧಾವಿಸಿದವರು ಡಿಕೆಶಿ. ಹತ್ತು ದಿನಗಳವರೆಗೆ ಮಹಾರಾಷ್ಟ್ರದ ಕಾಂಗ್ರೆಸ್ ಶಾಸಕರಿಗೆ ಬೆಂಗಳೂರಿನಲ್ಲಿಯೇ ಆತಿಥ್ಯ ಒದಗಿಸಿದ್ದರು.

2017ರಲ್ಲಿ ಗುಜರಾತ್‌ನಲ್ಲಿ ನಡೆದ ರಾಜ್ಯಸಭೆ ಚುನಾವಣೆಯಲ್ಲಿ 44 ಗುಜರಾತ್ ಶಾಸಕರನ್ನು ಬಿಜೆಪಿ ಸರ್ಕಾರ ಹೈಜಾಕ್ ಮಾಡಲು ಯತ್ನಿಸಿದಾಗ, ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ಅವರಿಗೆ ಕರ್ನಾಟಕದಲ್ಲಿ ಆತಿಥ್ಯ ಮತ್ತು ರಕ್ಷಣೆ ನೀಡಿದ್ದು ಇದೇ ಡಿ.ಕೆ. ಶಿವಕುಮಾರ್. ಇದೇ ಕಾರಣಕ್ಕೆ ಅವರು ಈಗಲ್‌ಟನ್ ರೆಸಾರ್ಟ್‌ನಲ್ಲಿ ಇದ್ದಾಗಲೇ ಐ.ಟಿ. ದಾಳಿ ಎದುರಿಸಬೇಕಾಯಿತು.

2018ರಲ್ಲಿ ರಾಜ್ಯ ರಾಜಕಾರಣದಲ್ಲಿ ಅತಂತ್ರ ಸನ್ನಿವೇಶ ಎದುರಾದಾಗ ‘ಟ್ರಬಲ್ ಶೂಟರ್’ ಆಗಿ ಕಾರ್ಯ ನಿರ್ವಹಿಸಿದ್ದು ಇದೇ ಶಿವಕುಮಾರ್. ಹೈಕಮಾಂಡ್ ಸೂಚನೆಗೆ ತಲೆಬಾಗಿ, ಎಚ್.ಡಿ. ದೇವೇಗೌಡರ ಕುಟುಂಬದ ಜೊತೆಗಿನ ರಾಜಕೀಯ ವೈಷಮ್ಯವನ್ನು ಬದಿಗೊತ್ತಿ ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರದ ರಚನೆಯಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಒಂದೂವರೆ ವರ್ಷದ ಬಳಿಕ ಸರ್ಕಾರ ಬಿದ್ದು ಹೋಗುವ ಸಂದರ್ಭದಲ್ಲೂ ಮುಂಬೈನ ಬೀದಿಯಲ್ಲಿ ನಿಂತು ಅತೃಪ್ತ ಶಾಸಕರ ಮನವೊಲಿಕೆಗೆ ಪ್ರಯತ್ನಿಸಿದ್ದು ಅವರ ಛಲದ ರಾಜಕಾರಣಕ್ಕೆ ಸಾಕ್ಷಿ.

ರಾಜ್ಯದಲ್ಲಿ ಕಾಂಗ್ರೆಸ್ ವತಿಯಿಂದ ನಡೆದ ಅನೇಕ ಹೋರಾಟಗಳ ಮುಂಚೂಣಿಯನ್ನೂ ಅವರು ವಹಿಸಿದ್ದಾರೆ. ವರ್ಷಗಳ ಹಿಂದೆ ತಮ್ಮದೇ ತವರೂರಿನಲ್ಲಿ ನಡೆದ ಮೇಕೆದಾಟು ಪಾದಯಾತ್ರೆ, ಚುನಾವಣೆ ಹೊಸ್ತಿಲಲ್ಲಿನ ಪ್ರಜಾಧ್ವನಿ ಯಾತ್ರೆಗಳ ಯಶಸ್ಸು ಅವರ ಸಂಘಟನಾ ಸಾಮರ್ಥ್ಯಕ್ಕೆ ಸಾಕ್ಷಿ. ಭಾರತ್ ಜೋಡೊ ಯಾತ್ರೆ ಸೇರಿದಂತೆ ಪಕ್ಷದ ಕಾರ್ಯಕ್ರಮಗಳು– ಹೋರಾಟಗಳಿಗೆ ಸದಾ ಹೆಗಲು ಕೊಟ್ಟು ದುಡಿದಿದ್ದಾರೆ.

ಕೆಪಿಸಿಸಿಯ ಶ್ರೀಮಂತ ಅಧ್ಯಕ್ಷ

ಕೆಪಿಸಿಸಿ ಇತಿಹಾಸದಲ್ಲೇ ಅತ್ಯಂತ ಶ್ರೀಮಂತ ಅಧ್ಯಕ್ಷ ಎನ್ನುವ ಕೀರ್ತಿ ಶಿವಕುಮಾರ್ ಅವರದ್ದು. ಈ ಬಾರಿಯ ಚುನಾವಣೆಯಲ್ಲಿ ಘೋಷಿಸಿಕೊಂಡಂತೆ ಡಿಕೆಶಿ ಕುಟುಂಬದ ಒಟ್ಟು ಆಸ್ತಿ ಮೌಲ್ಯ ₹ 1,414 ಕೋಟಿ.

ಅಕ್ರಮ ಆಸ್ತಿ ಗಳಿಕೆ ಆರೋಪದ ಮೇಲೆ ಶಿವಕುಮಾರ್ 2019ರಲ್ಲಿ ಎರಡು ತಿಂಗಳ ಕಾಲ ಸೆರೆವಾಸವನ್ನೂ ಅನುಭವಿಸಿದ್ದಾರೆ. ಈಗಲೂ ಅವರು ಹಾಗೂ ಸಹೋದರ ಡಿ.ಕೆ. ಸುರೇಶ್ ಮೇಲೆ ಐ.ಟಿ. ಮತ್ತು ಇ.ಡಿ.ಯಲ್ಲಿ ಅನೇಕ ಪ್ರಕರಣಗಳು ವಿಚಾರಣೆ ಹಂತದಲ್ಲಿ ಇವೆ.

ಮಧ್ಯರಾತ್ರಿಯ ಕರೆ; ಜಂಗೀಕುಸ್ತಿಗೆ ಕೊನೆ

• ಮಂಜುನಾಥ ಹೆಬ್ಬಾರ್

ನವದೆಹಲಿ: ಕರುನಾಡ ಮುಖ್ಯಮಂತ್ರಿಯಾಗಲು ಕಾಂಗ್ರೆಸ್ ಹೈಕಮಾಂಡ್ ಅಂಗಳದಲ್ಲಿ ಮೂರು ದಿನಗಳ ಕಾಲ ನಡೆದ ಜಂಗೀಕುಸ್ತಿಯಲ್ಲಿ ಹಲವು ಪಟ್ಟುಗಳನ್ನು ಪ್ರಯೋಗಿಸಿದ ಹಿರಿಯ ನಾಯಕ ಸಿದ್ದರಾಮಯ್ಯ ಅವರ ಕೈಮೇಲಾಗಿದೆ. ಹೈಕಮಾಂಡ್ ಒಲವು ಒಂದಿನಿತೂ ಕದಲದಂತೆ ನೋಡಿಕೊಂಡ ಅವರನ್ನು ಎರಡನೇ ಬಾರಿಗೆ ಕರ್ನಾಟಕದ ಮುಖ್ಯಮಂತ್ರಿ ಹುದ್ದೆ ಅರಸಿಕೊಂಡು ಬಂದಿದೆ.

ಫಲಿತಾಂಶ ಪ್ರಕಟಗೊಂಡ ದಿನದಿಂದಲೇ ಅತ್ತು ಕರೆದ, ಹೊಣೆ ವಹಿಸುವ ಸಂದರ್ಭದಲ್ಲಿ ನೀಡಿರುವ ವಾಗ್ದಾನದಂತೆ ಕೂಲಿ ಕೊಡುವ ಭರವಸೆ ನೆನಪಿಸಿದ, ವರಿಷ್ಠರನ್ನು ಬೆದರಿಸುವ ತಂತ್ರ ಪ್ರಯೋಗಿಸಿದ ಹಾಗೂ ಹಲವು ಭಾವನಾತ್ಮಕ ಬಾಣಗಳನ್ನು ಎಸೆದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಬೇಡಿಕೆ ಹಾಗೂ ಷರತ್ತುಗಳಿಗೆ ಭಾಗಶಃ ಮಣಿದ ಹೈಕಮಾಂಡ್, ಮುಂದಿನ ದಿನಗಳಲ್ಲಿ ಉಡುಗೊರೆ ನೀಡುವ ಭರವಸೆ ನೀಡಿ ಸಮಾಧಾನಪಡಿಸಿದೆ. ಮಧ್ಯರಾತ್ರಿಯ ಸಂಧಾನಕ್ಕೆ ಕೊನೆಗೂ ಮಣಿದ ರಾಜ್ಯ ಕಾಂಗ್ರೆಸ್‌ನ ಸಾರಥಿ ಉಪಮುಖ್ಯಮಂತ್ರಿ ಸ್ಥಾನವನ್ನು ಒಪ್ಪಿಕೊಂಡಿದ್ದಾರೆ.

ಎರಡೂವರೆ ವರ್ಷಗಳ ಅಧಿಕಾರ ಹಂಚಿಕೆಯ ಸೂತ್ರಕ್ಕೂ ಸ್ಪಷ್ಟ ಭರವಸೆ ನೀಡದ ವರಿಷ್ಠರು, ‘ಒಗ್ಗಟ್ಟಿನಿಂದ ಕೆಲಸ ಮಾಡಿ ಮುಂಬರುವ ಚುನಾವಣೆಗಳು, ಲೋಕಸಭಾ ಚುನಾವಣೆಯಲ್ಲಿ ಪಕ್ಷವನ್ನು ಗೆಲ್ಲಿಸಿಕೊಂಡು ಬನ್ನಿ. ಮುಂದೆ ನೋಡೋಣ’ ಎಂಬ ಅಡ್ಡಗೋಡೆಯ ಮೇಲೆ ದೀಪ ಇಟ್ಟಿದ್ದಾರೆ. ಈಗಲೇ ಎರಡೂವರೆ ವರ್ಷಗಳ ಅಧಿಕಾರ ಹಂಚಿಕೆಯ ಸೂತ್ರ ಹೆಣೆದರೆ ಆಡಳಿತ ಯಂತ್ರದ ಮೇಲೆ ಕೆಟ್ಟ ಪರಿಣಾಮ ಬೀರಲಿದೆ ಎಂದು ಭಾವಿಸಿದ ಹೈಕಮಾಂಡ್, ಜಾಣ್ಮೆಯ ಹೆಜ್ಜೆ ಇಟ್ಟಿದೆ.

‘ಕೈ’ಪಾಳಯಕ್ಕೆ ಸೇರಿದ ದಿನದಿಂದ ಎಲ್ಲ ರೀತಿಯ ಅಧಿಕಾರ ಅನುಭವಿಸಿರುವ ಸಿದ್ದರಾಮಯ್ಯ ಅವರಿಗೆ ಈ ಸಲ ರಾಜ್ಯದ ಚುಕ್ಕಾಣಿ ನೀಡಲೇಬಾರದು’ ಎಂದು ಹಟ ಹಿಡಿದು ಕೂತಿದ್ದ ಶಿವಕುಮಾರ್ ಅವರನ್ನು ಸಮಾಧಾನಪಡಿಸಲು ಹೈಕಮಾಂಡ್‌ನ ನಾಯಕರು ಎಲ್ಲ ಬಗೆಯ ತಂತ್ರಗಳನ್ನು ಪ್ರಯೋಗಿಸಿದರು. ಒಂದು ಹಂತದಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಮಾತಿಗೂ ಶಿವಕುಮಾರ್ ಸೊಪ್ಪು ಹಾಕಲಿಲ್ಲ. ಮೂರು ದಿನಗಳ ಕಾಲ ನಡೆಸಿದ ಮನವೊಲಿಕೆಗೂ ಅವರು ಬಗ್ಗಲಿಲ್ಲ. ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರ ನಿರ್ದೇಶನದ ಮೇರೆಗೆ ಕೆ.ಸಿ.ವೇಣುಗೋಪಾಲ್ ಅವರು ಬುಧವಾರ ರಾತ್ರಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರೊಂದಿಗೆ ಮಾತುಕತೆ ನಡೆಸಿದರು. ಶಿವಕುಮಾರ್ ಅವರೊಂದಿಗೆ ರಾತ್ರಿ 11ರಿಂದ ಸುಮಾರು ಮೂರು ಗಂಟೆ ಸಮಾಲೋಚಿಸಿದರು. ಅವರ ಎಲ್ಲ ಷರತ್ತುಗಳನ್ನು ಆಲಿಸಿದರು. ಹೈಕಮಾಂಡ್ ಮುಂದಿರುವ ಸೂತ್ರಗಳನ್ನು ಮುಂದಿಟ್ಟರು.

‘ನನಗೆ ಸೋನಿಯಾ ಅವರೇ ವಾಗ್ದಾನ ನೀಡಿದ್ದಾರೆ. ಅವರ ಜತೆಗೆ ಈಗ ಮಾತನಾಡಬೇಕು’ ಎಂದು ಶಿವಕುಮಾರ್ ಹೇಳಿಕೊಂಡರು. ಮಧ್ಯರಾತ್ರಿಯಲ್ಲಿ ಸೋನಿಯಾ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆಗೂ ವ್ಯವಸ್ಥೆ ಮಾಡಲಾಯಿತು. ಮುಂದಿನ ದಿನಗಳಲ್ಲಿ ನಡೆಯಲಿರುವ ಚುನಾವಣೆಗಳು, ಲೋಕಸಭಾ ಚುನಾವಣೆಯಲ್ಲಿ ಉತ್ತಮ ಸಾಧನೆ ಮಾಡುವ ಅನಿವಾರ್ಯತೆಗಳ ಕುರಿತು ಈ ವೇಳೆ ಚರ್ಚೆಯಾಯಿತು. ಮುಂದಿನ ದಿನಗಳಲ್ಲಿ ‘ಕೂಲಿ’ ಕೊಡುವ ಖಚಿತ ಭರವಸೆಯೂ ರಾಷ್ಟ್ರೀಯ ನಾಯಕರಿಂದ ಸಿಕ್ಕಿತು. ಸದ್ಯಕ್ಕೆ ಮುಖ್ಯಮಂತ್ರಿ ಹುದ್ದೆ ಬಿಟ್ಟು ಎಲ್ಲ ಭರವಸೆಗಳನ್ನು ಈಡೇರಿಸಲು ಪಕ್ಷವು ಒಪ್ಪಿತು. ‘ಪಕ್ಷ ನಿಷ್ಠ’ ಶಿವಕುಮಾರ್ ಅವರು ನಡುರಾತ್ರಿಯಲ್ಲಿ ವರಿಷ್ಠ ನಾಯಕರ ಮಾತಿಗೆ ಬೆಣ್ಣೆಯಂತೆ ಕರಗಿದರು. ನಾಲ್ಕು ಉಪಮುಖ್ಯಮಂತ್ರಿಯ ಹೈಕಮಾಂಡ್‌ನ ಸೂತ್ರಕ್ಕೆ ಶಿವಕುಮಾರ್ ಸುತಾರಂ ಒಪ್ಪಲಿಲ್ಲ. ನಾನೊಬ್ಬನೇ ಉಪಮುಖ್ಯಮಂತ್ರಿ ಇರಬೇಕು ಎಂದು ಕೊನೆಯ ಅಸ್ತ್ರ ಎಸೆದರು. ಇದಕ್ಕೆ ಹೈಕಮಾಂಡ್ ಸೈ ಎಂದಿತು. ಮುಖ್ಯಮಂತ್ರಿ ಗಾದಿಗಾಗಿ ನಾಲ್ಕು ದಿನಗಳಿಂದ ನಡೆದಿದ್ದ ಹಗ್ಗಜಗ್ಗಾಟಕ್ಕೆ ತೆರೆ ಬಿತ್ತು.

ದೆಹಲಿಗೆ ಬಂದ ನಂತರ ಪರಸ್ಪರರ ಮುಖ ನೋಡದ, ಉತ್ತರ ಧ್ರುವ ದಕ್ಷಿಣ ಧ್ರುವದಂತಿದ್ದ ಇಬ್ಬರು ನಾಯಕರು ಗುರುವಾರ ಬೆಳಿಗ್ಗೆ ವೇಣುಗೋಪಾಲ್ ಮನೆಯಲ್ಲಿ ಉಪಾಹಾರ ಕೂಟಕ್ಕೆ ಹಸನ್ಮುಖರಾಗಿ ಹಾಜರಾದರು. ತಿಂಡಿ ತಿಂದು ಒಂದೇ ಕಾರಿನಲ್ಲಿ ಖರ್ಗೆ ಮನೆಗೆ ತೆರಳಿದರು. ಅಲ್ಲಿ ಖರ್ಗೆ ಅವರು ಇಬ್ಬರು ಕೈ ಎತ್ತಿ ಇಬ್ಬರಲ್ಲಿ ಒಗ್ಗಟ್ಟು ಇದೆ ಎಂಬುದನ್ನು ತೋರಿಸಲು ಪ್ರಯತ್ನಿಸಿದರು. ನಂತರ ವೇಣುಗೋಪಾಲ್ ಅವರು ಪತ್ರಿಕಾಗೋಷ್ಠಿ ನಡೆಸಿ ಮುಖ್ಯಮಂತ್ರಿಯ ಹೆಸರನ್ನು ಅಧಿಕೃತವಾಗಿ ಪ್ರಕಟಿಸಿದರು.

ಸಿದ್ದರಾಮಯ್ಯ ಆಯ್ಕೆ ಏಕೆ?

- ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆ ಪ್ರಜಾಸತ್ತಾತ್ಮಕವಾಗಿಯೇ ನಡೆಯಬೇಕು ಎಂದು ರಾಹುಲ್ ಗಾಂಧಿ ಬಯಸಿದ್ದು
- ಹೆಚ್ಚಿನ ಸಂಖ್ಯೆಯ ಶಾಸಕರು ಸಿದ್ದರಾಮಯ್ಯ ಬೆಂಬಲಕ್ಕೆ ನಿಂತಿದ್ದು
- ಕಾಂಗ್ರೆಸ್ ಪ್ರಕಟಿಸಿರುವ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಸಿದ್ದರಾಮಯ್ಯ ಅವರೇ ಸೂಕ್ತ ಎಂದು ಹೈಕಮಾಂಡ್ ಭಾವಿಸಿದ್ದು
- 2013ರಿಂದ 2018ರ ನಡುವೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅನ್ನಭಾಗ್ಯ, ಇಂದಿರಾ ಕ್ಯಾಂಟೀನ್‌ನಂತಹ ಯೋಜನೆಗಳ ಪರಿಣಾಮಕಾರಿ ಜಾರಿ
- ಹಿಂದುತ್ವದ ಹುಸಿ ಕಾರ್ಯಸೂಚಿಯನ್ನು ಬಯಲುಗೊಳಿಸಿ, ಸರ್ವ ಜನಾಂಗದ ಶಾಂತಿಯ ತೋಟವಾಗಿಸುವ ಕನಸು ಹಂಚಿಕೊಂಡಿದ್ದು
- 13 ಬಜೆಟ್‌ಗಳನ್ನು ಮಂಡಿಸಿದ ಅನುಭವ ಇರುವುದು

ಡಿಕೆಶಿ ಹಟ ಬಿಟ್ಟಿದ್ದು ಏಕೆ?

- ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಕರೆ ಮಾಡಿ ಮನವೊಲಿಸಿದ್ದು
- ಪಕ್ಷ ನಿಷ್ಠೆ, ಸಂಘಟನಾ ಚಾತುರ್ಯಕ್ಕೆ ಭವಿಷ್ಯದಲ್ಲಿ ದೊಡ್ಡ ಉಡುಗೊರೆ ಸಿಗಲಿದೆ ಎಂದು ಹೈಕಮಾಂಡ್ ಅಭಯ ನೀಡಿದ್ದು
- ಸಚಿವ ಸಂಪುಟದಲ್ಲಿ ಒಬ್ಬರೇ ಉಪಮುಖ್ಯಮಂತ್ರಿ ಇರಬೇಕು, ಕೆಪಿಸಿಸಿ ಅಧ್ಯಕ್ಷರನ್ನಾಗಿ ಮುಂದುವರಿಸಬೇಕು, ಎರಡು ಪ್ರಬಲ ಖಾತೆ (ಜಲಸಂಪನ್ಮೂಲ, ಇಂಧನ ಅಥವಾ ಬೆಂಗಳೂರು ಅಭಿವೃದ್ಧಿ) ನೀಡಬೇಕು, ತಮ್ಮ ಗುಂಪಿಗೆ ಕನಿಷ್ಠ 10 ಸಚಿವ ಸ್ಥಾನಗಳನ್ನು ನೀಡಬೇಕು ಎಂಬ ಬೇಡಿಕೆಗಳಿಗೆ ಹೈಕಮಾಂಡ್ ಒಪ್ಪಿದ್ದು
- ಹೆಚ್ಚಿನ ಸಂಖ್ಯೆಯ ಶಾಸಕರು ಡಿಕೆಶಿ ಜತೆಗೆ ಗುರುತಿಸಿಕೊಳ್ಳದೆ ಇದ್ದಿದ್ದು
- ವರಿಷ್ಠರ ಪೈಕಿ ಹೆಚ್ಚಿನವರ ಒಲವು ಸಿದ್ದರಾಮಯ್ಯ ಕಡೆಗೆ ಇದ್ದಿದ್ದು
- ಅಭೂತಪೂರ್ವ ಜಯದ ಅವಕಾಶವನ್ನು ಕಾಂಗ್ರೆಸ್‌ಗೆ ತಪ್ಪಿಸಬಾರದೆಂಬ ಪಕ್ಷ ನಿಷ್ಠೆ



ನಾಯಕರಿಗೆ ಸ್ವಾಗತ

ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ಗುರುವಾರ ದೆಹಲಿಯಿಂದ ಬಂದಿಳಿದ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರನ್ನು ಕಾಂಗ್ರೆಸ್ ಕಾರ್ಯಕರ್ತರು ಪುಷ್ಪವೃಷ್ಟಿ ಮಾಡಿ ಸ್ವಾಗತಿಸಿದರು
ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ವೇಣುಗೋಪಾಲ್ ‘ಸಿದ್ಧ’ ಸೂತ್ರ

ನವದೆಹಲಿ: ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರು ಆರಂಭದಿಂದಲೂ ಸಿದ್ದರಾಮಯ್ಯ ಪರವಾಗಿ ಪ್ರಬಲವಾಗಿ ನಿಂತರು. ವೇಣುಗೋಪಾಲ್ ಹೆಣೆದ ‘ಸಿದ್ಧ’ ಸೂತ್ರವೇ ಸಿದ್ದರಾಮಯ್ಯ ಅವರ ಕೈ ಮೇಲಾಗಲು ಕಾರಣವಾಯಿತು.

ಬೆಂಗಳೂರಿನಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಮುಖ್ಯಮಂತ್ರಿ ಆಯ್ಕೆ ಹೊಣೆಯನ್ನು ಹೈಕಮಾಂಡ್‌ಗೆ ಬಿಡುವ ತೀರ್ಮಾನಕ್ಕೆ ಬರಲಾಯಿತು. ಅದಕ್ಕೆ ಬಲವಾಗಿ ಆಕ್ಷೇಪ ವ್ಯಕ್ತಪಡಿಸಿದ ವೇಣುಗೋಪಾಲ್, ‘ಈ ಪ್ರಕ್ರಿಯೆ ಪ್ರಜಾಸತ್ತಾತ್ಮಕವಾಗಿ ನಡೆಯಬೇಕು ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. ಪ್ರತಿಯೊಬ್ಬ ಶಾಸಕರು ತಮ್ಮ ಅಭಿಪ್ರಾಯ ನೀಡಬೇಕು’ ಎಂದು ಹೇಳಿದರು. ಇದಕ್ಕೆ ಆರಂಭದಲ್ಲಿ ಡಿ.ಕೆ.ಶಿವಕುಮಾರ್ ಹಾಗೂ ರಣದೀಪ್ ಸಿಂಗ್ ಸುರ್ಜೆವಾಲಾ ಒಪ್ಪಲಿಲ್ಲ. ವೇಣುಗೋಪಾಲ್ ಮನವೊಲಿಸಿದರು. ಆ ಬಳಿಕ ಪ್ರತಿಯೊಬ್ಬ ಶಾಸಕರಿಂದ ಅಭಿಪ್ರಾಯ ಸಂಗ್ರಹಿಸಲಾಯಿತು. ಹೆಚ್ಚಿನ ಶಾಸಕರು ಸಿದ್ದರಾಮಯ್ಯ ಕಡೆಗೆ ಒಲವು ವ್ಯಕ್ತಪಡಿಸಿದರು. ‘ಹೆಚ್ಚು ಶಾಸಕರ ಒಲವಿರುವ ಸಿದ್ದರಾಮಯ್ಯ ಅವರನ್ನೇ ಮುಖ್ಯಮಂತ್ರಿಯನ್ನಾಗಿ ಮಾಡಬೇಕು. ಅದಕ್ಕೂ ಮುನ್ನ ಶಿವಕುಮಾರ್ ಅವರನ್ನು ಮನವೊಲಿಸಬೇಕು. ಪಕ್ಷ ಬಹುಮತ ಗಳಿಸುವಲ್ಲಿ ಅವರ ಪರಿಶ್ರಮವೂ ಅಪಾರ’ ಎಂದು ರಾಹುಲ್ ಸಲಹೆ ನೀಡಿದರು.

ಶಿವಕುಮಾರ್ ಅವರು ಎರಡು ದಿನ ಹಿಡಿದ ಪಟ್ಟನ್ನು ಸಡಿಲಿಸಲೇ ಇಲ್ಲ. ಬುಧವಾರ ರಾತ್ರಿ ಶಿವಕುಮಾರ್ ಅವರನ್ನು ಕರೆಸಿಕೊಂಡ ವೇಣುಗೋಪಾಲ್ ಸುದೀರ್ಘವಾಗಿ ಸಮಾಲೋಚಿಸಿದರು ಎಂದು ಪಕ್ಷದ ಮೂಲಗಳು ತಿಳಿಸಿವೆ.

ಹೆಚ್ಚಿನ ಡಿಸಿಎಂ ಸ್ಥಾನಕ್ಕೆ ಬೇಡಿಕೆ ಇದೆ ಎಂಬುದೆಲ್ಲಾ ಊಹಾಪೋಹ. ನಾನು ಡಿಸಿಎಂ ಆಕಾಂಕ್ಷಿಯಲ್ಲ.
ಬಿ.ಕೆ.ಹರಿಪ್ರಸಾದ್

ಎಲ್ಲಾ ಸಮುದಾಯದವರು ಡಿಸಿಎಂ ಸ್ಥಾನ ಕೇಳಿದ್ದಾರೆ. ಹೈಕಮಾಂಡ್ ಒಂದೇ ಡಿಸಿಎಂ ಅಂತ ಹೇಳಿದೆ. ನಾವು ಅದಕ್ಕೆ ಬದ್ಧ. ಆಸೆಗೆ ಕೊನೆ ಇಲ್ಲ, ಹೈಕಮಾಂಡ್ ತೀರ್ಮಾನವೇ ಅಂತಿಮ
ತನ್ವೀರ್ ಸೇಠ್

ಬೆಂಗಳೂರು ಬಿಟ್ಟರೆ ಬೆಳಗಾವಿ ಅತಿ ದೊಡ್ಡ ಜಿಲ್ಲೆ. 18 ರ ಪೈಕಿ 11 ಸ್ಥಾನದಲ್ಲಿ ಗೆದ್ದಿದ್ದೇವೆ. ಈ ಬಾರಿ ಜಿಲ್ಲೆಯಲ್ಲಿ ಅತಿ ಹೆಚ್ಚು ಸ್ಥಾನಗಳನ್ನು ಪಕ್ಷ ಪಡೆದಿದೆ. ಕನಿಷ್ಠ 3 ಸಚಿವ ಸ್ಥಾನ ಜಿಲ್ಲೆಗೆ ನೀಡಬೇಕು. ಲಿಂಗಾಯತರಿಗೆ ಡಿಸಿಎಂ ಸ್ಥಾನ ಬೇಡಿಕೆ ವಿಚಾರ ಗೊತ್ತಿಲ್ಲ. ನಾವು ಜಾತಿ, ಸಮುದಾಯದ ಮೇಲೆ ಸ್ಥಾನ ಹಂಚಿಕೆ ಮಾಡಲ್ಲ. ಬಸವಣ್ಣನ ತತ್ವ ಸಿದ್ಧಾಂತದ ಮೇಲೆ ನಾವು ಅಧಿಕಾರ ಹಂಚಿಕೆ ಮಾಡುತ್ತೇವೆ.
ಲಕ್ಷ್ಮೀ ಹೆಬ್ಬಾಳ್ಕರ್

ಸಿದ್ದರಾಮಯ್ಯ- ಡಿ.ಕೆ. ಶಿವಕುಮಾರ್: ಹೊಸ ಸರ್ಕಾರದಲ್ಲಿ ಎರಡು ‘ಶಕ್ತಿ ಕೇಂದ್ರ’ ಸೃಷ್ಟಿ

ನಾನಾ ನೀನಾ: ಯಾರು ‘ಸುಪ್ರೀಂ’

• ರಾಜೇಶ್ ರೈ ಚಟ್ಲ

ಬೆಂಗಳೂರು: ಸಿದ್ದರಾಮಯ್ಯ– ಡಿ.ಕೆ. ಶಿವಕುಮಾರ್ ಅವರಿಗೆ ಅಧಿಕಾರ ಹಂಚುವಲ್ಲಿ ‘ಕೈ’ ವರಿಷ್ಠರು ಯಶಸ್ಸು ಕಂಡರೂ, ಸರ್ಕಾರದಲ್ಲಿ ಎರಡು ಪ್ರಬಲ ‘ಶಕ್ತಿ ಕೇಂದ್ರಗಳು’ ಸೃಷ್ಟಿಯಾದಂತಾಗಿದೆ. ಈ ಎರಡೂ ‘ಶಕ್ತಿ’ಗಳು ಪರಸ್ಪರ ಸಂಘರ್ಷಕ್ಕೆ ಇಳಿಯದಂತೆ ‘ರಥ’ವನ್ನು ಸುಗಮವಾಗಿ ನಡೆಸಿಕೊಂಡು ಹೋಗುವಂತೆ ನೋಡಿಕೊಳ್ಳುವ ಸವಾಲು ಕಾಂಗ್ರೆಸ್ ಹೈಕಮಾಂಡ್ ಮೇಲೆ ಬಿದ್ದಿದೆ.

ಇಬ್ಬರೂ ಬಲಿಷ್ಠ ಮತ್ತು ಬಿಗಿ ನಿಲುವಿನ ನಾಯಕರಾಗಿದ್ದು, ತಮ್ಮ ತಮ್ಮ ವಿಚಾರಗಳಲ್ಲಿ ಒಂದಿಂಚೂ ಹಿಂದಕ್ಕೆ ಸರಿಯುವ ಸ್ವಭಾವದವರಲ್ಲ. ಮುಖ್ಯಮಂತ್ರಿ ಹುದ್ದೆಗಾಗಿ ನಡೆದ ಹಗ್ಗಜಗ್ಗಾಟ ಈ ಇಬ್ಬರ ನಡುವಿನ ‘ಶಕ್ತಿ’ಯನ್ನು ಬಹಿರಂಗಪಡಿಸಿದೆ. ಇಬ್ಬರನ್ನು ಒಪ್ಪಿಸಲು ಹೈಕಮಾಂಡ್ ಬೆವರು ಹರಿಸಬೇಕಾಯಿತು.

ಚುನಾವಣೆ ಆರಂಭದಿಂದಲೂ ಈ ಇಬ್ಬರ ಮಧ್ಯೆ ಬಣ ಸಂಘರ್ಷ, ಪ್ರತಿಷ್ಠೆಯ ಸಮರ ನಡೆಯುತ್ತಲೇ ಬಂದಿದೆ. ಮೇಲ್ನೋಟಕ್ಕೆ ‘ಜೋಡೆತ್ತು’ಗಳಂತೆ ಒಬ್ಬರಿಗೊಬ್ಬರು ಹೆಗಲು ಕೊಟ್ಟರೂ ಮುಸುಕಿನ ಗುದ್ದಾಟ, ಕಿತ್ತಾಟ ಜೋರಾಗಿ ನಡೆದಿದೆ.

ಈ ಬಾರಿ ಕಾಂಗ್ರೆಸ್ಸಿನ ಘಟಾನುಘಟಿ ನಾಯಕರೆಲ್ಲ ಚುನಾಯಿತರಾಗಿರುವುದರಿಂದ ಸಚಿವ ಸ್ಥಾನ ಹಂಚಿಕೆಯಿಂದಲೇ ಈ ‘ಶಕ್ತಿ’ ಕೇಂದ್ರಗಳ ಮೇಲಾಟ ನಡೆಯುವುದು ಖಚಿತ. ಬಲ ಪ್ರದರ್ಶನದ ಜಟಾಪಟಿಯೂ ಆಗಬಹುದು. ಸಂಪುಟದಲ್ಲಿ ಸ್ಥಾನ ಸಿಗದ ಕಾರಣಕ್ಕೆ ಮುನಿಸಿಕೊಳ್ಳುವವರನ್ನು, ಅಸಮಾಧಾನಿತರನ್ನು, ಅತೃಪ್ತರನ್ನು ಸಂತೈಸಿ, ಜೊತೆಗೆ ಕರೆದೊಯ್ಯುವುದು ಅಷ್ಟು ಸುಲಭವಲ್ಲ. ಕಾಂಗ್ರೆಸ್‌ಗೆ 135 ಶಾಸಕರ ಜೊತೆ, ಮೂವರು ಪಕ್ಷೇತರ ಶಾಸಕರೂ ‘ಕೈ’ ಜೋಡಿಸಿದ್ದಾರೆ. ಹೀಗಾಗಿ, ಆಡಳಿತ ಪಕ್ಷದ ಬಲ 138ಕ್ಕೆ ಏರಿಕೆಯಾಗಿದೆ. ಈ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸಂಭಾಳಿಸಿಕೊಂಡು ಹೋಗುವುದು ಸರ್ಕಾರದ ‘ಮುಖ್ಯಸ್ಥ’ನಾದವನಿಗೆ ದೊಡ್ಡ ಸವಾಲು. ಪ್ರತಿ ಸಂದರ್ಭಗಳು, ಸನ್ನಿವೇಶಗಳು ಮುಳ್ಳಿನ ಹಾದಿಯೇ.

ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡದೆ ಎಲ್ಲ ಶಾಸಕರನ್ನು ತೃಪ್ತಿಪಡಿಸಬೇಕಿದೆ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗೆ ಆ ಕೆಲಸ ಕೂಡಾ ಸವಾಲೇ. ಯಾರು ಸಕಾರಾತ್ಮಕವಾಗಿ ಸ್ಪಂದಿಸುತ್ತಾರೆ ಎನ್ನುವುದನ್ನು ನೋಡಿಕೊಂಡು ಸಚಿವರು, ಶಾಸಕರು ಈ ಇಬ್ಬರ ಬೆನ್ನು ಬೀಳುವುದು ಸ್ವಾಭಾವಿಕ. ಅಸಮಾಧಾನ ಸ್ಫೋಟ ಆಗದಂತೆ, ವಿರೋಧ ಪಕ್ಷಗಳ ಬಾಯಿಗೆ ಆಹಾರವಾಗದಂತೆ ನಿರ್ಣಾಯಕ ಸಂದರ್ಭ, ಸನ್ನಿವೇಶಗಳನ್ನು ಸಿದ್ದರಾಮಯ್ಯ– ಶಿವಕುಮಾರ್ ಹೇಗೆ ನಿಭಾಯಿಸುತ್ತಾರೆ ಎನ್ನುವುದೂ ಮುಖ್ಯ. ಸಚಿವರ, ಶಾಸಕರ ಬೇಡಿಕೆ, ಅಹವಾಲು ಆಲಿಸಿ ಸಮಾಧಾನಪಡಿಸುವ ‘ಶಕ್ತಿ ಕೇಂದ್ರ’ವೇ ಮುಂದಿನ ದಿನಗಳಲ್ಲಿ ಮೇಲುಗೈ ಸಾಧಿಸುವುದು ದಿಟ.

ಇನ್ನು ಕೆಲವು ನೀತಿ ನಿರೂಪಣೆ ವಿಚಾರಗಳಲ್ಲಿಯೂ ಸಚಿವರು, ಶಾಸಕರ ಮಧ್ಯೆ ಭಿನ್ನಮತ ಮೂಡುವುದು ಸಹಜ. ಅಂಥ ಸಂದರ್ಭಗಳಲ್ಲೂ ಈ ‘ಶಕ್ತಿ ಕೇಂದ್ರ’ಗಳು ತೆಗೆದುಕೊಳ್ಳುವ ನಿಲುವು ಮಹತ್ವ ಪಡೆಯಲಿದೆ. ಒಳ ಮೀಸಲಾತಿ, ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿರುವ ಜಾತಿಗಣತಿ ವರದಿಯನ್ನು ಬಹಿರಂಗಪಡಿಸುವುದು ಮುಂತಾದ ವಿಚಾರಗಳಲ್ಲಿ ಒಮ್ಮತಾಭಿಪ್ರಾಯ ಮೂಡಿಸುವ ತುರ್ತು ಸರ್ಕಾರ ಮುಂದಿದೆ. ಇಂಥ ಕೆಲವು ವಿಷಯಗಳಲ್ಲಿ ಅಪಸ್ವರಕ್ಕೆ ಎಡೆ ಮಾಡಿಕೊಡದೆ, ಪರಿಸ್ಥಿತಿಯನ್ನು ನಿಭಾಯಿಸಿ, ಒಮ್ಮತ ಮೂಡಿಸುವಲ್ಲಿ ಯಾರು ಸಫಲರಾಗುತ್ತಾರೆ ಎನ್ನುವುದೂ ಮುಖ್ಯವಾಗಲಿದೆ.

ವಿಪಕ್ಷಗಳ ಒಗ್ಗಟ್ಟು ಪ್ರದರ್ಶನಕ್ಕೆ ವೇದಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಪ್ರತಿಪಕ್ಷಗಳ ಶಕ್ತಿ ಪ್ರದರ್ಶನ ಮಾಡಲು ‘ಕೈ’ಪಾಳಯ ಮುಂದಾಗಿದ್ದು, ಬೆಂಗಳೂರಿನಲ್ಲಿ ಶನಿವಾರ ನಡೆಯಲಿರುವ ಸಮಾರಂಭಕ್ಕೆ ಬಿಜೆಪಿಯೇತರ ಬಣದ ಉನ್ನತ ನಾಯಕರಿಗೆ ಆಹ್ವಾನ ನೀಡಲು ಕಾಂಗ್ರೆಸ್ ನಿರ್ಧರಿಸಿದೆ.

ಆಹ್ವಾನಿತರ ಪಟ್ಟಿಯನ್ನು ಸಿದ್ಧಪಡಿಸಲಾಗುತ್ತಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಮುಖ್ಯಮಂತ್ರಿಗಳಾದ ಎಂ.ಕೆ.ಸ್ಟಾಲಿನ್ (ತಮಿಳುನಾಡು), ಮಮತಾ ಬ್ಯಾನರ್ಜಿ (ಪಶ್ಚಿಮ ಬಂಗಾಳ), ನಿತೀಶ್ ಕುಮಾರ್ (ಬಿಹಾರ), ನವೀನ್ ಪಟ್ನಾಯಕ್ (ಬಿಹಾರ), ಕೆ.ಚಂದ್ರಶೇಖರ ರಾವ್ (ತೆಲಂಗಾಣ), ಹೇಮಂತ್ ಸೊರೆನ್ (ಜಾರ್ಖಂಡ್) ಅವರನ್ನು ಆಹ್ವಾನಿಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಎನ್‌ಸಿಪಿ ವರಿಷ್ಠ ಶರದ್ ಪವಾರ್, ಶಿವಸೇನೆಯ ಉದ್ಧವ್ ಠಾಕ್ರೆ, ಸಿಪಿಎಂನ ಸೀತಾರಾಮ ಯೆಚೂರಿ, ನ್ಯಾಷನಲ್ ಕಾನ್ಫರೆನ್ಸ್‌ನ ಫಾರೂಕ್ ಅಬ್ದುಲ್ಲಾ, ಸಿಪಿಐನ ಡಿ.ರಾಜಾ, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್, ಬಿಹಾರದ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರನ್ನೂ ಆಹ್ವಾನಿಸಲಾಗುತ್ತದೆ ಎಂದು ಪಕ್ಷದ ನಾಯಕರೊಬ್ಬರು ತಿಳಿಸಿದರು.

ಶುಕ್ರವಾರ, ಮೇ 19, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 138 | ಪುಟ 16
www.prajavani.net
prajavani.net | prajavani | prajavani | prajavani
ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಪೂರ್ಣಚಂದ್ರ ತೇಜಸ್ವಿಯವರ ಕಥೆಯಾಧಾರಿತ 'ಡೇರ್ ಡೆವಿಲ್ ಮುಸ್ತಾಫಾ' ಚಿತ್ರದ ಸುತ್ತ...



ಆಳ-ಅಗಲ
ನಿರುದ್ಯೋಗವೇ ಚುನಾವಣಾ ವಿಷಯ
ಎಸ್‌ಬಿಐ ಲಾಭ ಶೇ 83ರಷ್ಟು ಹೆಚ್ಚಳ 8
ವಿದ್ಯುತ್ ಬಿಲ್ ಪಾವತಿಗೆ ಗ್ರಾಹಕರ ನಕಾರ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,431 ▼	18,129 ▼	₹62,300 (ಬೆಂಗಳೂರು) ▼	₹73,900 (ಬೆಂಗಳೂರು) ▲	82.59 ▼

ಮುಗಿದ ಮೇಲಾಟ: ಇನ್ನು ಸಂಪುಟ ಜಂಜಾಟ

ಸಿದ್ದರಾಮಯ್ಯ– ಶಿವಕುಮಾರ್ ಸರ್ಕಾರ: ಕಾಂಗ್ರೆಸ್ ವರಿಷ್ಠರ ನಿರ್ಧಾರ • ನಾಳೆ ಮಧ್ಯಾಹ್ನ 12.30ಕ್ಕೆ ಪ್ರಮಾಣ • ಸ್ಟಾಲಿನ್, ಉದ್ಧವ್, ಪವಾರ್ ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಧಿಕಾರಕ್ಕಾಗಿ ಐದು ದಿನ ನಡೆದ ಕಾದಾಟಕ್ಕೆ ಸಾಮರಸ್ಯದ ತೆರೆಬಿದ್ದಿದ್ದು, ರಾಜ್ಯದ 33ನೇ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಇದೇ ಶನಿವಾರ (ಮೇ 20) ಮಧ್ಯಾಹ್ನ 12.30ಕ್ಕೆ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ನಾಯಕತ್ವದ ಕಗ್ಗಂಟನ್ನು ಪರಿಹರಿಸಲು ತಿಣುಕಾಡಿ ಹೈರಾಣಾಗಿದ್ದ ಕಾಂಗ್ರೆಸ್ ವರಿಷ್ಠರ ಮುಂದೆ, ಸಚಿವ ಸಂಪುಟ ವಿಸ್ತರಣೆ ಹಾಗೂ ಖಾತೆ ಹಂಚಿಕೆಯ ಜಂಜಾಟ ತೆರೆದುಕೊಳ್ಳಲಿದೆ.

16ನೇ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ 'ಒಂದಾಗಿ' ದುಡಿದು ಭಾರಿ ಸಂಖ್ಯೆಯೊಂದಿಗೆ ಕಾಂಗ್ರೆಸ್ ರಥವನ್ನು ವಿಧಾನಸೌಧದ ಮೂರನೇ ಮಹಡಿಗೆ ಕೊಂಡೊಯ್ದಿದ್ದ ಸಿದ್ದರಾಮಯ್ಯ, ಶಿವಕುಮಾರ್ ಅವರು ನಾಯಕತ್ವಕ್ಕಾಗಿ ಸೆಣಸಾಟ ನಡೆಸಿದ್ದರು. ಇದನ್ನು ಬಗೆಹರಿಸಲು ನಾನಾ ಪ್ರಯತ್ನ ನಡೆದರೂ ಇಬ್ಬರೂ ತಮ್ಮ ನಿಲುವಿಗೆ ಅಂಟಿಕೊಂಡರು. ಹುದ್ದೆಗಾಗಿನ ದಾವೆಯನ್ನು ವರಿಷ್ಠರ ಮುಂದೆ ಮಂಡಿಸಿದ್ದರು. 'ಸಂಧಾನ ಸೂತ್ರ'ವನ್ನು ಹೆಣೆದ ಕಾಂಗ್ರೆಸ್ ವರಿಷ್ಠರು ಇಬ್ಬರನ್ನೂ ಒಪ್ಪಿಸುವಲ್ಲಿ ಯಶಸ್ವಿಯಾಗಿದ್ದಾರೆ. 2013–2018ರ ಅವಧಿಯಲ್ಲಿ ಪೂರ್ಣಾವಧಿ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಿದ ಸಿದ್ದರಾಮಯ್ಯ ಅವರು ಇದೇ 20ರಿಂದ ತಮ್ಮ ಎರಡನೇ ಪರ್ವ ಆರಂಭಿಸಲಿದ್ದಾರೆ.

ಮುಖ್ಯಮಂತ್ರಿ ಆಯ್ಕೆ ಪ್ರಕ್ರಿಯೆ ಮುಗಿಯುತ್ತಿದ್ದಂತೆ, ಇಬ್ಬರನ್ನೂ ಒಟ್ಟಿಗೆ ನಿಲ್ಲಿಸಿ ಕೈ ಎತ್ತಿ ಹಿಡಿದು 'ಒಗ್ಗಟ್ಟು' ಪ್ರದರ್ಶಿಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು, ಸರ್ಕಾರ ರಚನೆಯ ಹಾದಿಗೆ ಇದ್ದ ಅಡ್ಡಿ ನಿವಾರಣೆಯಾಗಿರುವುದಾಗಿ ಸಂದೇಶ ರವಾನಿಸಿದರು. ಒಂದೇ ವಿಮಾನದಲ್ಲಿ ಬೆಂಗಳೂರಿಗೆ ಬಂದ ಇಬ್ಬರು ನಾಯಕರು ಶಾಸಕಾಂಗ ಪಕ್ಷದ ಸಭೆಯಲ್ಲಿ ಭಾಗಿಯಾದರು.

ಕಂಠೀರವ ಕ್ರೀಡಾಂಗಣದಲ್ಲಿ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯಲಿದ್ದು, ಬಿಜೆಪಿಯೇತರ ವಿರೋಧ ಪಕ್ಷಗಳ ನಾಯಕರು, ವಿವಿಧ ರಾಜ್ಯಗಳ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರು ಭಾಗಿಯಾಗಲಿದ್ದಾರೆ.

ಅದೇ ದಿನ 20ಕ್ಕೂ ಹೆಚ್ಚು ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಪ್ರಕಟಿಸಿದ್ದಾರೆ. ಸಚಿವ ಸಂಪುಟದಲ್ಲಿ ಯಾರಿರಬೇಕು ಎಂಬುದನ್ನು ನಿಶ್ಚಯಿಸಲು ಇಬ್ಬರು ನಾಯಕರು ಶುಕ್ರವಾರವೇ ದೆಹಲಿಗೆ ಪ್ರಯಾಣ ಬೆಳೆಸಲಿದ್ದಾರೆ.

5ನೇ ಪುಟ ನೋಡಿ



ಮುಗಿದ ಕುಸ್ತಿ, ಈಗ ದೋಸ್ತಿ... ಮುಖ್ಯಮಂತ್ರಿ ಹುದ್ದೆಗೆ ಹೆಸರು ಅಂತಿಮಗೊಳಿಸಿದ ಬಳಿಕ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಅವರ ಕೈ ಮೇಲೆತ್ತಿ ಒಗ್ಗಟ್ಟಿನ ಪೋಸು ನೀಡಿದರು — ಪಿಟಿಐ ಚಿತ್ರ

ಡಿ.ಕೆ. ಶಿವಕುಮಾರ್

ಸಾಮರ್ಥ್ಯ
- ಸಂಘಟನೆ ವಿಷಯದಲ್ಲಿ ಚಾಣಾಕ್ಷ
- ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯಬೇಕೆಂಬ ಮಹದಾಕಾಂಕ್ಷೆ
- ದೇವೇಗೌಡರು, ಎಸ್.ಎಂ.ಕೃಷ್ಣ ಬಳಿಕ ಒಕ್ಕಲಿಗರ ಪ್ರಬಲ ನಾಯಕ
- ಪಕ್ಷ, ಸರ್ಕಾರವನ್ನು ಸಂಕಷ್ಟದಿಂದ ಪಾರು ಮಾಡುವ ಆಪತ್ಬಾಂಧವ
- ಸಂಪನ್ಮೂಲದ ವಿಷಯದಲ್ಲಿ ಎಲ್ಲರಿಗಿಂತ ಮುಂದು

ದೌರ್ಬಲ್ಯ
- ಒಕ್ಕಲಿಗ ಸಮುದಾಯಕ್ಕೆ ಮಾತ್ರ ನಾಯಕನೆಂಬ ಸೀಮಿತ ವ್ಯಕ್ತಿತ್ವ
- ದುಡುಕು ಹಾಗೂ ಆಕ್ರಮಣಕಾರಿ ನಡವಳಿಕೆ
- ಸಂಪತ್ತಿನ ಕಾರಣಕ್ಕೆ ಹಲವು ಮೊಕದ್ದಮೆಗಳು
- ನಿರಂಕುಶ ಮನೋಭಾವ, ಇತರರ ಅಭಿಪ್ರಾಯಕ್ಕೆ ಮನ್ನಣೆ ಇಲ್ಲ
- ಮತ, ಬೆಂಬಲ ತಪ್ಪುವ ಭಯದಿಂದ ಮೃದು ಹಿಂದುತ್ವ

ಸಿದ್ದರಾಮಯ್ಯ

ಸಾಮರ್ಥ್ಯ
- ಆಡಳಿತದ ಮೇಲೆ ಬಿಗಿ ಹಿಡಿತ; ಆರ್ಥಿಕ ಪರಿಣತಿ
- 'ಅಹಿಂದ' ಮಾತ್ರವಲ್ಲದೇ, ವಿರೋಧಿಗಳೂ ಒಪ್ಪುವ ನಾಯಕತ್ವ ಗುಣ
- ಸಮದರ್ಶಿತ್ವ, ಸಮಸ್ಪರ್ಶಿತ್ವ; ಅಭಿವೃದ್ಧಿಯ ದೂರದೃಷ್ಟಿ
- ಕೋಮುವಾದಿಗಳ ವಿರುದ್ಧ ಕಠಿಣ ನಿಲುವು, ವೈಚಾರಿಕ ಸ್ಪಷ್ಟತೆ
- ಸಚಿವರ ಖಾತೆಯಲ್ಲಿ ಕೈ ಹಾಕದೇ, ವಿವೇಚನಾ ಅಧಿಕಾರ ಬಿಡುವ ಔದಾರ್ಯ

ದೌರ್ಬಲ್ಯ
- ತಮ್ಮ ಒಡ್ಡೋಲಗದಲ್ಲಿರುವವರ ಬಗ್ಗೆಯಷ್ಟೇ ಕಾಳಜಿ
- ಆಯಕಟ್ಟಿನ ಜಾಗದಲ್ಲಿ 'ಹಿತೈಷಿ'ಗಳಿಗೆ ಆದ್ಯತೆ
- ಒಕ್ಕಲಿಗ, ಲಿಂಗಾಯತ, ಬ್ರಾಹ್ಮಣರ ವಿರೋಧಿಯೆಂಬ 'ಹಣೆಪಟ್ಟಿ'
- ಬೇರೆಯವರ ಸಲಹೆಯನ್ನು ಆಲಿಸುವ ವ್ಯವಧಾನ ಇಲ್ಲ
- ದುಡುಕು ಮಾತಿನಿಂದ ವಿವಾದ ಸೃಷ್ಟಿಸುವ ಚಾಳಿ

ಸಂಭಾವ್ಯ ಸಚಿವರ ಪಟ್ಟಿ
ಡಾ. ಜಿ.ಪರಮೇಶ್ವರ
ಕೆ.ಎಚ್.ಮುನಿಯಪ್ಪ/ ರೂಪಕಲಾ ಶಶಿಧರ್
ಬಿ.ಕೆ.ಹರಿಪ್ರಸಾದ್
ಎಂ.ಬಿ.ಪಾಟೀಲ
ರಾಮಲಿಂಗಾ ರೆಡ್ಡಿ
ಆರ್.ವಿ.ದೇಶಪಾಂಡೆ
ಕೆ.ಜೆ.ಜಾರ್ಜ್
ಎಚ್.ಕೆ.ಪಾಟೀಲ
ಕೃಷ್ಣ ಬೈರೇಗೌಡ
ಯು.ಟಿ.ಖಾದರ್/ ಸಲೀಂ ಅಹ್ಮದ್
ಜಮೀರ್ ಅಹ್ಮದ್ ಖಾನ್/ ಎನ್.ಎ. ಹ್ಯಾರಿಸ್
ಸತೀಶ ಜಾರಕಿಹೊಳಿ
ಎಚ್.ಸಿ.ಮಹದೇವಪ್ಪ
ಶರಣ ಪ್ರಕಾಶ ಪಾಟೀಲ
ಅಜಯ್ ಸಿಂಗ್
ದಿನೇಶ್ ಗುಂಡೂರಾವ್
ಲಕ್ಷ್ಮಣ ಸವದಿ
ಲಕ್ಷ್ಮೀ ಹೆಬ್ಬಾಳಕರ
ಮಧು ಬಂಗಾರಪ್ಪ
ಬಸವರಾಜ ರಾಯರಡ್ಡಿ
ಪ್ರಿಯಾಂಕ್ ಖರ್ಗೆ
ಸಂತೋಷ್ ಲಾಡ್
ವಿಜಯಾನಂದ ಕಾಶಪ್ಪನವರ
ವಿನಯ್ ಕುಲಕರ್ಣಿ
ಟಿ.ಡಿ.ರಾಜೇಗೌಡ/ ಕೆ.ಎಂ.ಶಿವಲಿಂಗೇಗೌಡ
ಬಿ.ಕೆ. ಸಂಗಮೇಶ್ವರ
ಆರ್.ಬಿ. ತಿಮ್ಮಾಪುರ
ಕೊತ್ತೂರು ಮಂಜುನಾಥ್
ಶ್ಯಾಮನೂರು ಶಿವಶಂಕರಪ್ಪ/ ಎಸ್.ಎಸ್.ಮಲ್ಲಿಕಾರ್ಜುನ
ಎಂ.ಕೃಷ್ಣಪ್ಪ/ ಪ್ರಿಯಕೃಷ್ಣ

ಜನಪರ, ಪಾರದರ್ಶಕ, ಭ್ರಷ್ಟಾಚಾರ ರಹಿತ ಆಡಳಿತ ನೀಡುವ ಜೊತೆಗೆ ನಮ್ಮ ಎಲ್ಲಾ ಗ್ಯಾರಂಟಿಗಳನ್ನು ಈಡೇರಿಸುವಲ್ಲಿ ಕಾಂಗ್ರೆಸ್ ಪಕ್ಷ ಒಂದು ಕುಟುಂಬವಾಗಿ ಕೆಲಸ ಮಾಡಲಿದೆ
ಸಿದ್ದರಾಮಯ್ಯ, ನಿಯೋಜಿತ ಮುಖ್ಯಮಂತ್ರಿ

ನನಗೆ ಪಕ್ಷದ ಹಿತದೃಷ್ಟಿ ಮುಖ್ಯ. ಲೋಕಸಭಾ ಚುನಾವಣೆ ಮುಂದಿದೆ, ಕರ್ನಾಟಕದ ಜನರಿಗೆ ನಾವು ನೀಡಿದ ಭರವಸೆಗಳನ್ನು ಈಡೇರಿಸಬೇಕಿದೆ. ಹೀಗಾಗಿ ಒಪ್ಪಂದಕ್ಕೆ ಒಪ್ಪಿಕೊಂಡೆ
ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಆತ್ಮಸ್ಥೈರ್ಯ ಕಳೆದುಕೊಂಡಿಲ್ಲ. ಸಮರ್ಥ ಪ್ರತಿಪಕ್ಷವಾಗಿ ನಾವು ಕಾರ್ಯ ನಿರ್ವಹಿಸುತ್ತೇವೆ. ಜನರಿಗೆ ಅನ್ಯಾಯ ಆದಾಗ ಸರ್ಕಾರಕ್ಕೆ ಎಚ್ಚರಿಕೆ ಕೊಡುವ ಕೆಲಸ ಮಾಡುತ್ತೇವೆ
ಬಸವರಾಜ ಬೊಮ್ಮಾಯಿ, ಹಂಗಾಮಿ ಮುಖ್ಯಮಂತ್ರಿ

ಇನ್ನು ಎರಡು– ಮೂರು ತಿಂಗಳಲ್ಲಿ ರಾಜಕೀಯ ಬೆಳವಣಿಗೆ ನಡೆಯಲಿದೆ. ಬಿಜೆಪಿ ಸರ್ಕಾರದಲ್ಲಿ ಆದಂತೆ ಈ ಸರ್ಕಾರದಿಂದಲೂ ಲೂಟಿ ಆಗಲಿದೆ
ಎಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ

ಸರ್ಕಾರ ರಚನೆಗೆ ಹಕ್ಕು ಮಂಡನೆ

ಬೆಂಗಳೂರು: ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ನಾಯಕರಾಗಿ ಆಯ್ಕೆಯಾದ ಸಿದ್ದರಾಮಯ್ಯ ಅವರು ಡಿ.ಕೆ. ಶಿವಕುಮಾರ್ ಮತ್ತು ಪಕ್ಷದ ನಾಯಕರ ಜೊತೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರನ್ನು ಗುರುವಾರ ರಾತ್ರಿ ಭೇಟಿ ಮಾಡಿ ಸರ್ಕಾರ ರಚಿಸಲು ಹಕ್ಕು ಮಂಡಿಸಿದರು.

ಅದಕ್ಕೂ ಮೊದಲು, ಕೆಪಿಸಿಸಿ ನೂತನ ಕಚೇರಿ ಇಂದಿರಾ ಭವನದಲ್ಲಿರುವ 'ಭಾರತ್ ಜೋಡೊ' ಸಭಾಂಗಣದಲ್ಲಿ ಶಾಸಕಾಂಗ ಪಕ್ಷದ ಸಭೆ ನಡೆಯಿತು.

ಸಿಎಲ್‌ಪಿ ನಾಯಕನಾಗಿ ಸಿದ್ದರಾಮಯ್ಯ ಅವರ ಹೆಸರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಸ್ತಾಪಿಸಿದರು. ಶಾಸಕರಾದ ಜಿ.ಪರಮೇಶ್ವರ, ಆರ್.ವಿ. ದೇಶಪಾಂಡೆ, ಎಚ್.ಕೆ. ಪಾಟೀಲ, ಎಂ.ಬಿ. ಪಾಟೀಲ, ತನ್ವೀರ್ ಸೇಠ್, ಕೆ.ಎಚ್. ಮುನಿಯಪ್ಪ ಮತ್ತು ಲಕ್ಷ್ಮೀ ಹೆಬ್ಬಾಳಕರ್ ಈ ಸೂಚನೆಯನ್ನು ಅನುಮೋದಿಸಿದರು. ವಿವಿಧ ಸಮುದಾಯಗಳ ಶಾಸಕರು ಪ್ರಸ್ತಾವಕ್ಕೆ ಅನುಮೋದನೆ ನೀಡುವ ಮೂಲಕ, ಎಲ್ಲ ಸಮುದಾಯಗಳ ಬೆಂಬಲದಿಂದ ಸಿಎಲ್‌ಪಿ ನಾಯಕನ ಆಯ್ಕೆ ಮಾಡಲಾಗಿದೆ ಎಂಬ ಸಂದೇಶವನ್ನೂ ರವಾನಿಸಲಾಯಿತು.

ಸುರೇಶ್ ಅತೃಪ್ತಿ: ಶಿವಕುಮಾರ್ ಅವರಿಗೆ ಸಿ.ಎಂ ಸ್ಥಾನ ಕೈ ತಪ್ಪಿದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಸಂಸದ ಡಿ.ಕೆ. ಸುರೇಶ್, 'ನಾನು ಸಂಪೂರ್ಣವಾಗಿ ಸಂತುಷ್ಟನಾಗಿಲ್ಲ. ಆದರೆ, ರಾಜ್ಯದ ಜನರ ಹಿತಾಸಕ್ತಿಗಾಗಿ, ನಮ್ಮ ಬದ್ಧತೆ ಪೂರೈಸುವುದಕ್ಕಾಗಿ ಶಿವಕುಮಾರ್ ಅವರು ಹೈಕಮಾಂಡ್ ನಿರ್ಧಾರವನ್ನು ಒಪ್ಪಿಕೊಂಡಿದ್ದಾರೆ' ಎಂದು ತಿಳಿಸಿದರು.

ಸಿಇಟಿಗೆ ಪ್ರಮಾಣವಚನ ಸಮಾರಂಭದ ಆತಂಕ

ಸಿಇಟಿ ಪರೀಕ್ಷೆಯ ಮೊದಲ ದಿನವೇ ಮುಖ್ಯಮಂತ್ರಿ ಮತ್ತು ಸಚಿವರ ಪ್ರಮಾಣವಚನ ಸ್ವೀಕಾರ ಸಮಾರಂಭ ನಿಗದಿಯಾಗಿರುವುದರಿಂದಾಗಿ ರಾಜಧಾನಿಯಲ್ಲಿ ವಿದ್ಯಾರ್ಥಿಗಳಿಗೆ ತೊಂದರೆಯಾಗುವ ಸಂಭವ ಇದೆ.

ಕಂಠೀರವ ಸ್ಟೇಡಿಯಂನಲ್ಲಿ ಸಮಾರಂಭ ನಡೆಯಲಿರುವುದರಿಂದ ಆ ಭಾಗದ ಪರೀಕ್ಷಾ ಕೇಂದ್ರಗಳಲ್ಲಿ ಸಿಇಟಿ ಬರೆಯುವ ಅಭ್ಯರ್ಥಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಪ್ರಮಾಣವಚನ ಸ್ವೀಕಾರ ಸಮಾರಂಭಕ್ಕೆ ಬಿಗಿ ಭದ್ರತೆ ಇರುತ್ತದೆ. ವಾಹನ ದಟ್ಟಣೆಯಿಂದ ಪರೀಕ್ಷಾ ಕೇಂದ್ರಗಳನ್ನು ಸಮಯಕ್ಕೆ ಸರಿಯಾಗಿ ತಲುಪಲು ಸಾಧ್ಯವಾಗದಿರಬಹುದು. ಹಾಗಾಗಿ, ಸಿಇಟಿಗೆ ಹಾಜರಾಗುವವರಿಗೆ ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ಹಲವು ಅಭ್ಯರ್ಥಿಗಳು ಆಗ್ರಹಿಸಿದ್ದಾರೆ.

'ಹಲವು ಅಭ್ಯರ್ಥಿಗಳು ಮನವಿ ಸಲ್ಲಿಸಿದ್ದಾರೆ. ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಚಾರ ಪೊಲೀಸರನ್ನು ವಿನಂತಿಸಿದ್ದೇವೆ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಪ್ರತಿಕ್ರಿಯಿಸಿದರು.

ಸಿಇಟಿ: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸಿಇಟಿ ಮೇ 20, 21ರಂದು ರಾಜ್ಯದ 592 ಕೇಂದ್ರಗಳಲ್ಲಿ ನಡೆಯಲಿದೆ.

ಹುದ್ದೆ ಕಡಿತಕ್ಕೆ ಮುಂದಾದ ನೈರುತ್ಯ ರೈಲ್ವೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ತಾಂತ್ರಿಕ ಪ್ರಗತಿಯ ಆಧಾರದ ಮೇಲೆ ಹುದ್ದೆಗಳನ್ನು ಸರೆಂಡರ್ (ಕಡಿತ) ಮಾಡಬೇಕೆಂದು ರೈಲ್ವೆ ಮಂಡಳಿಯು ಎಲ್ಲ ರೈಲ್ವೆ ವಲಯಗಳಿಗೆ ನಿರ್ದೇಶನ ನೀಡಿದ್ದು, ಇದರನ್ವಯ ಕರ್ನಾಟಕ ಸೇರಿದಂತೆ ಐದು ರಾಜ್ಯಗಳ ವ್ಯಾಪ್ತಿ ಹೊಂದಿರುವ ನೈರುತ್ಯ ರೈಲ್ವೆಯು 350 ಹುದ್ದೆಗಳ ಕಡಿತಕ್ಕೆ ಮುಂದಾಗಿದೆ.

ಮಂಡಳಿಯ ಈ ನಡೆಗೆ ರೈಲ್ವೆ ನೌಕರರ ಯೂನಿಯನ್‌ಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ.

'ಕಡಿತಕ್ಕೆ ಉದ್ದೇಶಿರುವ ಉದ್ಯೋಗಗಳಲ್ಲಿ 'ಡಿ' ಗ್ರೂಪ್ ಉದ್ಯೋಗಗಳೇ ಹೆಚ್ಚಿವೆ. ಇದರ ವಿರುದ್ಧ ಹೋರಾಟ ಮಾಡಲಾಗುವುದು' ಎಂದು ಅಖಿಲ ಭಾರತ ರೈಲ್ವೆ ಟ್ರಾಕ್ ನಿರ್ವಹಣೆಗಾರರ ಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕಾಂತರಾಜು ಎ.ವಿ. ಹಾಗೂ ನೈರುತ್ಯ ರೈಲ್ವೆ ಮಜ್ದೂರ್ ಸಂಘದ ಸಹಾಯಕ ಪ್ರಧಾನ ಕಾರ್ಯದರ್ಶಿ ಆ್ಯಂಟನಿ ಡಿಕ್ರೂಸ್ 'ಪ್ರಜಾವಾಣಿ'ಗೆ ತಿಳಿಸಿದರು.

5ನೇ ಪುಟ ನೋಡಿ

ಕಂಬಳ, ಜಲ್ಲಿಕಟ್ಟುಗೆ ಅಸ್ತು

ನವದೆಹಲಿ (ಪಿಟಿಐ): ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲಿ ಜನಪ್ರಿಯವಾಗಿರುವ ಕಂಬಳ, ತಮಿಳುನಾಡಿನಲ್ಲಿ ಜಲ್ಲಿಕಟ್ಟು ಮತ್ತು ಮಹಾರಾಷ್ಟ್ರದಲ್ಲಿ ಎತ್ತಿನ ಗಾಡಿ ಓಟಕ್ಕೆ ಅವಕಾಶ ನೀಡುವುದಕ್ಕಾಗಿ ಆಯಾ ರಾಜ್ಯಗಳು ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆಗೆ ತಂದಿರುವ ತಿದ್ದುಪಡಿಯನ್ನು ಸುಪ್ರೀಂ ಕೋರ್ಟ್ ಗುರುವಾರ ಎತ್ತಿ ಹಿಡಿದಿದೆ. ಕಂಬಳ ಸೇರಿ ಮೂರೂ ಕ್ರೀಡೆಗಳಿಗೆ ಸುಪ್ರೀಂ ಕೋರ್ಟ್ ಹಸಿರು ನಿಶಾನೆ ತೋರಿದಂತಾಗಿದೆ.

ನ್ಯಾಯಮೂರ್ತಿ ಕೆ.ಎಂ.ಜೋಸೆಫ್ ನೇತೃತ್ವದ ಐವರು ಸದಸ್ಯರಿದ್ದ ಸಂವಿಧಾನ ಪೀಠ ಸರ್ವಾನುಮತದ ತೀರ್ಪು ಪ್ರಕಟಿಸಿದೆ. ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ, ಅನಿರುದ್ಧ ಬೋಸ್, ಹೃಷಿಕೇಶ್ ರಾಯ್ ಹಾಗೂ ಸಿ.ಟಿ. ರವಿಕುಮಾರ್ ಈ ಪೀಠದಲ್ಲಿದ್ದರು.

ಈ ಕಾಯ್ದೆಗೆ ತಂದ ತಿದ್ದುಪಡಿಗಳನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ನ್ಯಾಯಪೀಠ ನಡೆಸಿತ್ತು. ಅರ್ಜಿಗಳ ವಿಚಾರಣೆ ಸಂದರ್ಭದಲ್ಲಿ ಉದ್ಭವಿಸಿದ್ದ ಐದು ಪ್ರಶ್ನೆಗಳನ್ನು ಸಂವಿಧಾನ ಪೀಠಕ್ಕೆ ವರ್ಗಾಯಿಸಿ ದ್ವಿಸದಸ್ಯ ಪೀಠವು 2018ರಲ್ಲಿ ಆದೇಶಿಸಿತ್ತು. ವಿಚಾರಣೆ ಪೂರ್ಣಗೊಳಿಸಿದ್ದ ಪೀಠವು ತೀರ್ಪನ್ನು ಕಳೆದ ವರ್ಷ ಡಿಸೆಂಬರ್ 8ರಂದು ಕಾಯ್ದಿರಿಸಿತ್ತು.

ಕರ್ನಾಟಕದ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ ಹಾಗೂ ಉಡುಪಿ ಭಾಗಗಳಲ್ಲಿ 'ಕಂಬಳ' ಕ್ರೀಡೆಯನ್ನು ನವೆಂಬರ್ ಹಾಗೂ ಮಾರ್ಚ್ ನಡುವೆ ಆಯೋಜಿಸಲಾಗುತ್ತದೆ. ಕಂಬಳದಲ್ಲಿ ಕೋಣಗಳೇ ಪ್ರಮುಖ ಆಕರ್ಷಣೆ.

5ನೇ ಪುಟ ನೋಡಿ



ಕಂಬಳದ ಮೇಲಿನ ನಿಷೇಧದ ತೂಗುಗತ್ತಿ ನಿವಾರಣೆ ಆಗಿದೆ. ಕರಾವಳಿಯ ಹೆಮ್ಮೆಯ ಕಂಬಳವನ್ನು ಇನ್ನಷ್ಟು ಸುಸೂತ್ರವಾಗಿ ಆಯೋಜಿಸಲು ಹೆಚ್ಚು ಶಕ್ತಿ ಲಭಿಸಿದಂತಾಗಿದೆ
ಕ್ಯಾಪ್ಟನ್ ಬ್ರಿಜೇಶ್ ಚೌಟ, ಅಧ್ಯಕ್ಷ, ಮಂಗಳೂರು ಕಂಬಳ ಸಮಿತಿ

ಕಂಬಳ, ಜಲ್ಲಿಕಟ್ಟುನಂತಹ ಕ್ರೀಡೆಗಳಲ್ಲಿ ಪ್ರಾಣಿಗಳನ್ನು ಹಿಂಸಿಸಲಾಗುತ್ತದೆ. ಅವುಗಳನ್ನು ರಕ್ಷಿಸುವ ಸಂಬಂಧ ಕಾನೂನಿನಡಿ ಇರುವ ಮಾರ್ಗಗಳನ್ನು ಹುಡುಕುತ್ತೇವೆ
ಪೀಪಲ್ ಫಾರ್ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಅನಿಮಲ್ಸ್' (ಪೆಟಾ)

ದಿಢೀರ್ ಬೆಳವಣಿಗೆ: ಕೆಲ ಸಚಿವರ ಖಾತೆ ಮರುಹಂಚಿಕೆ

ರಿಜಿಜು ಕೈ ತಪ್ಪಿದ 'ಕಾನೂನು'

ನವದೆಹಲಿ (ಪಿಟಿಐ): ಕೇಂದ್ರ ಸಚಿವ ಸಂಪುಟದಲ್ಲಿ ಗುರುವಾರ ಕೆಲ ಬದಲಾವಣೆಗಳನ್ನು ಮಾಡಲಾಗಿದೆ. ಕಿರಣ್ ರಿಜಿಜು ಅವರಲ್ಲಿದ್ದ ಕಾನೂನು ಖಾತೆಯನ್ನು ಸಂಸದೀಯ ವ್ಯವಹಾರಗಳ ಖಾತೆಯ ರಾಜ್ಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರಿಗೆ ನೀಡಲಾಗಿದೆ. ರಿಜಿಜು ಅವರಿಗೆ ಭೂ ವಿಜ್ಞಾನಗಳ ಖಾತೆ ನೀಡಲಾಗಿದೆ.

ಮೇಘವಾಲ್ ಅವರಿಗೆ ಹೆಚ್ಚುವರಿಯಾಗಿ ಕಾನೂನು ಖಾತೆ ಜವಾಬ್ದಾರಿ ನೀಡಲಾಗಿದೆ. ಅವರನ್ನು ಕಾನೂನು ಖಾತೆಯ ರಾಜ್ಯ ಸಚಿವರನ್ನಾಗಿ (ಸ್ವತಂತ್ರ ಹೊಣೆಗಾರಿಕೆ) ನೇಮಕ ಮಾಡಲಾಗಿದೆ.

ಈ ಬದಲಾವಣೆಗಳನ್ನು ಮಾಡಿದ ಕೆಲ ಗಂಟೆಗಳ ನಂತರ, ಕಾನೂನು ಖಾತೆ ರಾಜ್ಯ ಸಚಿವರಾಗಿದ್ದ ಪ್ರೊ.ಎಸ್.ಪಿ.ಬಘೆಲ್ ಅವರನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ರಾಜ್ಯ ಸಚಿವರನ್ನಾಗಿ ನೇಮಕ ಮಾಡಲಾಗಿದೆ.

'ಪ್ರಧಾನಿ ನರೇಂದ್ರ ಮೋದಿ ಅವರ ಶಿಫಾರಸಿನಂತೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂತ್ರಿ ಪರಿಷತ್ತಿನ ಸಚಿವರ ಖಾತೆಗಳ ಮರುಹಂಚಿಕೆ ಮಾಡಿದ್ದಾರೆ' ಎಂದು ರಾಷ್ಟ್ರಪತಿ ಭವನದ ಪ್ರಕಟಣೆ ತಿಳಿಸಿದೆ.

ಜಗತ್ತಿನಲ್ಲಿಯೇ ಅತಿದೊಡ್ಡ ಪಕ್ಷ ಎಂದು ಹೇಳಿಕೊಳ್ಳುವ ಬಿಜೆಪಿಗೆ ಪೂರ್ಣಾವಧಿ ಕಾನೂನು ಸಚಿವರನ್ನು ನೇಮಕ ಮಾಡುವುದು ಸಾಧ್ಯವಾಗಿಲ್ಲ
ಅಭಿಷೇಕ್ ಮನು ಸಿಂಘ್ವಿ, ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ, ಹಿರಿಯ ವಕೀಲ

ರಾಜಸ್ಥಾನ ವಿಧಾನಸಭೆಗೆ ವರ್ಷಾಂತ್ಯದಲ್ಲಿ ಚುನಾವಣೆ ನಡೆಯಲಿದೆ. ಹೀಗಾಗಿ, ಮೇಘವಾಲ್ ಅವರಿಗೆ ಈಗ ಹೆಚ್ಚುವರಿ ಜವಾಬ್ದಾರಿ ನೀಡಿರುವುದು ಗಮನಾರ್ಹ.

ರಿಜಿಜು ಅವರನ್ನು 2021ರ ಜುಲೈ 7ರಂದು ಕಾನೂನು ಸಚಿವರನ್ನಾಗಿ ನೇಮಕ ಮಾಡಲಾಗಿತ್ತು.

5ನೇ ಪುಟ ನೋಡಿ

ಸದಾ ವಿವಾದ



ರಿಜಿಜು ಅವರು ಕೇಂದ್ರ ಕಾನೂನು ಸಚಿವರಾಗಿ ಅಧಿಕಾರ ವಹಿಸಿಕೊಂಡ ದಿನದಿಂದಲೂ, ಸುಪ್ರೀಂಕೋರ್ಟ್ ಕೊಲಿಜಿಯಂ ವ್ಯವಸ್ಥೆಯನ್ನು ಟೀಕಿಸುತ್ತಿದ್ದರು. ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಈ ವ್ಯವಸ್ಥೆಯು 'ಸಂವಿಧಾನಕ್ಕೆ ವಿರುದ್ಧವಾಗಿದೆ' ಎಂದೇ ರಿಜಿಜು ಹೇಳುತ್ತಿದ್ದರು.

'ಕೆಲ ನಿವೃತ್ತ ನ್ಯಾಯಮೂರ್ತಿಗಳು ಭಾರತ ವಿರೋಧಿ ಗುಂಪಿನ ಭಾಗವಾಗಿದ್ದಾರೆ. ಭಾರತದ ನ್ಯಾಯಾಂಗ ವ್ಯವಸ್ಥೆಯು ವಿರೋಧ ಪಕ್ಷದಂತೆ ಕಾರ್ಯನಿರ್ವಹಿಸುವಂತೆ ಮಾಡಲು ಈ ಗುಂಪು ಪ್ರಯತ್ನಿಸುತ್ತಿದೆ ' ಎಂದು ಇತ್ತೀಚೆಗೆ ರಿಜಿಜು ಹೇಳಿದ್ದರು. ಅವರ ಈ ಹೇಳಿಕೆಗೆ ಭಾರಿ ವಿರೋಧ ವ್ಯಕ್ತವಾಗಿತ್ತು.

ಚಿನಕುರಳಿ

ಪ್ರಕಾಶ್ ಶೆಟ್ಟಿ



✓ GENUINE QUALITY ✓ LOWEST PRICES ✓ BRAND NEW SAREES

✓ 3 YEARS WARRANTY ✓ MUCH LESSER PRICES THAN ALL ONLINE APPS OR WHOLESALERS

VISIT OUR SHOWROOMS OR PURCHASE THROUGH VIDEO CALL 88671 66966

EARN ASSURED INCOME OF 2 LAKHS PER MONTH START | SHOWROOM AT YOUR PLACE | CALL 78711 33306

Kancheepuram S.M. Silks

CHENNAI • COVAI • BANGALORE • KANCHEEPURAM • TIRUVALLUR • NAMAKKAL

Master weavers, Wholesalers & Exporters

WEDDING MELA OFFER

May 19th-23st | Friday - Tuesday (5 days)



Bridal Silks

~~MRP:₹15300/-~~ Our Price:₹10800/-

Now Take Each @ ₹7500 Only



Naga Reshu

~~MRP:₹14400/-~~ Our Price:₹10800/-

Now Take 2 Sarees @ ₹18000 Only



Kanchi Perundevi

~~MRP:₹8100/-~~ Our Price:₹6300/-

Now Take 2 Sarees @ ₹9000 Only



Super Samuthrika Jaquard

~~MRP:₹3420/-~~ Our Price:₹2250/-

Now Take 5 Sarees @ ₹10000 Only



Mini Kanchi

~~MRP:₹1250/-~~ Our Price:₹750/-

Now Take 5 Sarees @ ₹3000 Only



Golden Temple

~~MRP:₹1350/-~~ Our Price:₹990/-

Now Take 5 Sarees @ ₹3750 Only



SWARNA SHREE

~~MRP:₹2430/-~~ Our Price:₹1260/-

Now Take 5 Sarees @ ₹5500 Only



Siva Kanchi

~~MRP:₹2250/-~~ Our Price:₹1440/-

Now Take 5 Sarees @ ₹6000 Only



Super Kanchi

~~MRP:₹2520/-~~ Our Price:₹1620/-

Now Take 5 Sarees @ ₹7200 Only

smsilks_officialkancheepuram.s.m.silks | Kanchipuram SM Silks | Kancheepuram S.M. Silks

Brokers and touts misguide you at Kancheepuram. Reach us using QR Code for your own benefits.

MAJESTIC 080-22356881
Hotel Mayura Building 1st Floor, Tank Bund Road

GANGA NAGARA 88671 66966
Airport Road, Near HMT Bhavan

R.R.NAGARA 88670 86729
80 Feet Road, Sai Plaza

KANCHEEPURAM 044 2722 0230 | **VISHNU KANCHI 044 2726 9555** | **T NAGAR 73053 26458**

ಆನ್‌ಲೈನ್‌ನಲ್ಲಿ ಒಂದೆರಡು ತಿಂಗಳಲ್ಲಿ ಮಾರಾಟಕ್ಕೆ ಸಿದ್ಧತೆ

ಬಿಡಿಎ ವಿಲ್ಲಾಗೆ ಭಾರಿ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ದಾಸನಪುರ ಹೋಬಳಿಯ ಹುಣ್ಣಿಗೆರೆಯಲ್ಲಿ ನಿರ್ಮಿಸುತ್ತಿರುವ 'ಪುನೀತ್ ರಾಜ್‌ಕುಮಾರ್ ವಸತಿ ಸಂಕೀರ್ಣ'ದ ವಿಲ್ಲಾಗಳಿಗೆ ಭಾರಿ ಬೇಡಿಕೆ ವ್ಯಕ್ತವಾಗಿದ್ದು, ಇನ್ನೊಂದು ತಿಂಗಳಲ್ಲಿ ಮಾರಾಟಕ್ಕೆ ಸಿದ್ಧವಾಗಲಿವೆ.

ಡುಪ್ಲೆಕ್ಸ್ ಮಾದರಿಯಲ್ಲಿ 322 ವಿಲ್ಲಾಗಳನ್ನು ಬಿಡಿಎ ನಿರ್ಮಿಸಿದ್ದು, ರಸ್ತೆ ಕೆಲಸ, ಉದ್ಯಾನ ಕಾಮಗಾರಿ ಹಾಗೂ ವಿದ್ಯುತ್ ಸಂಪರ್ಕದ ವ್ಯವಸ್ಥೆ ಮಾತ್ರ ಬಾಕಿ ಉಳಿದಿದೆ. ಈಗಾಗಲೇ ಪ್ರತಿ ದಿನ ಸಾಕಷ್ಟು ಜನ ಬಂದು ವಿಲ್ಲಾಗಳನ್ನು ನೋಡಿಕೊಂಡು ಹೋಗುತ್ತಿದ್ದಾರೆ. ವಾರಾಂತ್ಯದಲ್ಲಿ ಬರುವ ಜನರ ಸಂಖ್ಯೆ ಅಧಿಕವಾಗಿದೆ ಎಂದು ಬಿಡಿಎ ಅಧಿಕಾರಿಗಳು ಹೇಳಿದರು.

ಆನ್‌ಲೈನ್ ಮೂಲಕ ಮೊದಲು ಬಂದವರಿಗೆ ಆದ್ಯತೆ ಆಧಾರದಲ್ಲಿ ಈ ವಿಲ್ಲಾಗಳನ್ನು ಮಾರಾಟ ಮಾಡಲು ಬಿಡಿಎ ನಿರ್ಧರಿಸಿದೆ. ವಿಲ್ಲಾಗಳ ದರ ₹80 ಲಕ್ಷದಿಂದ ₹1.10 ಕೋಟಿಯವರೆಗೆ ನಿಗದಿಪಡಿಸುವ ಸಾಧ್ಯತೆ ಇದೆ. ವಿಲ್ಲಾಗಳ ಸಂಖ್ಯೆ ಕಡಿಮೆ ಇವೆ. ಅಲ್ಲದೆ, ವಿವಿಐಪಿಗಳೇ ಹೆಚ್ಚಿನ ಆಸಕ್ತಿ ತೋರುತ್ತಿರುವುದು ಬಯಸಿದವರಿಗೆಲ್ಲ ವಿಲ್ಲಾ ಸಿಗುವ ಸಾಧ್ಯತೆ ಕ್ಷೀಣವಾಗಿದೆ.

ವಿಲ್ಲಾ ನಿರ್ಮಾಣ ಕಾರ್ಯ ಅಂತಿಮ ಹಂತದಲ್ಲಿದ್ದು, ಬಿಡಿಎ ಆಯುಕ್ತ ಕುಮಾರ ನಾಯಕ್ ಅವರು ಗುರುವಾರ ಸ್ಥಳ ಪರಿಶೀಲನೆ ನಡೆಸಿದರು.



ಹುಣ್ಣಿಗೆರೆ ಬಳಿ 'ಪುನೀತ್ ರಾಜ್‌ಕುಮಾರ್ ವಸತಿ ಯೋಜನೆ'ಯಡಿ ವಿಲ್ಲಾ ನಿರ್ಮಾಣ ಕಾಮಗಾರಿಯನ್ನು ಬಿಡಿಎ ಆಯುಕ್ತ ಕುಮಾರ ನಾಯಕ್ ಗುರುವಾರ ಪರಿಶೀಲಿಸಿದರು. ಎಂಜಿನಿಯರ್ ಸದಸ್ಯ ಶಾಂತರಾಜಣ್ಣ, ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಾಶ್ ಇದ್ದರು

ವಿಲ್ಲಾಗಳನ್ನು ಡುಪ್ಲೆಕ್ಸ್ ಮಾದರಿಯಲ್ಲಿ ನಿರ್ಮಿಸಲಾಗಿದ್ದು, ಇಟ್ಟಿಗೆಯನ್ನೇ ಉಪಯೋಗಿಸಲಾಗಿದೆ. ವಾಸ್ತುವಿಗೆ ಅನುಗುಣವಾಗಿ, ಕಟ್ಟಡ, ಒಳಾಂಗಣ ವಿನ್ಯಾಸ ಮಾಡಲಾಗಿದೆ. ಪ್ರತಿ ವಿಲ್ಲಾಗೆ ಎರಡು ಕೊಳವೆ ಮಾರ್ಗವಿದ್ದು, ಸಂಸ್ಕರಿಸಿದ ನೀರಿನ ಬಳಕೆಗೆ ಒತ್ತು ನೀಡಲಾಗಿದೆ. ಸೋಲಾರ್ ವಾಟರ್ ಹೀಟರ್, ಸಂಪ್, ಓವರ್‌ಹೆಡ್ ಟ್ಯಾಂಕ್ ಪ್ರತಿ ವಿಲ್ಲಾನಲ್ಲಿದೆ. ಮೂರು ಮತ್ತು ನಾಲ್ಕು ಬಿಎಚ್‌ಕೆ ವಿಲ್ಲಾಗಳಿಗೆ ಪ್ರತ್ಯೇಕ ಗೇಟ್ ಅಳವಡಿಸಿ, ಮುಖ್ಯರಸ್ತೆಯಿಂದ ಪ್ರತ್ಯೇಕ ಮಾರ್ಗ ಕಲ್ಪಿಸಲಾಗಿದೆ. ಇ.ವಿ. ಚಾರ್ಜಿಂಗ್ ಸಂಪರ್ಕವಿದ್ದು, ಮಳೆ ನೀರಿನ ಸಂಗ್ರಹಕ್ಕೂ ವ್ಯವಸ್ಥೆ ಇದೆ. ಡಕ್ಟ್ ಮಾದರಿಯಲ್ಲಿ ನೀರು ಹಾಗೂ ವಿದ್ಯುತ್ ಕೇಬಲ್ ಅಳವಡಿಸಲಾಗಿದೆ. ಇದಲ್ಲದೆ, 320 ಒಂದು ಬಿಎಚ್‌ಕೆ ಮನೆಗಳೂ ಇಲ್ಲಿವೆ.

ವಸತಿ ಯೋಜನೆಯನ್ನು 26 ಎಕರೆ ವಿಸ್ತೀರ್ಣದಲ್ಲಿ ನಿರ್ಮಾಣ ಮಾಡಿದ್ದು, 27 ಉದ್ಯಾನಗಳಿವೆ. ಸುತ್ತ 2.1 ಮೀ ಎತ್ತರದ ರಕ್ಷಣಾ ಗೋಡೆ ನಿರ್ಮಿಸಲಾಗಿದೆ. ಮನೋರಂಜನಾ ಕೇಂದ್ರವನ್ನು ನಿರ್ಮಿಸಿದ್ದು, ಒಳಾಂಗಣ ಆಟ, ರೆಸ್ಟೋರೆಂಟ್, ಜಿಮ್, ಪ್ರಾಥಮಿಕ ಆರೋಗ್ಯ ಕೇಂದ್ರ, ಕಮ್ಯೂನಿಟಿ ಹಾಲ್, ಗ್ರಂಥಾಲಯ, ಈಜುಕೊಳ ನಿರ್ಮಿಸಲಾಗಿದೆ. ಸೂಪರ್ ಮಾರ್ಕೆಟ್‌ಗೆ ಸ್ಥಳಾವಕಾಶ ಅತಿಥಿಗಳಿಗಾಗಿ ನಾಲ್ಕು ಕೊಠಡಿಗಳಿವೆ ಎಂದು ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಾಶ್ ಅವರು ಮಾಹಿತಿ ನೀಡಿದರು.

ಅಂಕಿ-ಅಂಶ

322 ಒಟ್ಟು ವಿಲ್ಲಾ

170 4ಬಿಎಚ್‌ಕೆ (35ಅಡಿx50 ಅಡಿ)

31 3ಬಿಎಚ್‌ಕೆ (35ಅಡಿx50 ಅಡಿ)

121 4ಬಿಎಚ್‌ಕೆ (30ಅಡಿx50 ಅಡಿ)

320 1ಬಿಎಚ್‌ಕೆ ಇಡಬ್ಲ್ಯುಎಸ್ ಫ್ಲ್ಯಾಟ್

ಮಾನವೀಯತೆ ಮೆರೆದ ಚಾಲಕ, ನಿರ್ವಾಹಕಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಗರ್ಭಿಣಿಯೊಬ್ಬರಿಗೆ ಹೆರಿಗೆ ಮಾಡಿಸಿ ಮಾನವೀಯತೆ ತೋರಿದ ಬಸ್ ಚಾಲಕ ಹಾಗೂ ನಿರ್ವಾಹಕಿಯನ್ನು ಅಧಿಕಾರಿಗಳು ಅಭಿನಂದಿಸಿದರು.

ಬಸ್ ಬೆಂಗಳೂರಿನಿಂದ ಚಿಕ್ಕಮಗಳೂರಿಗೆ ತೆರಳುತ್ತಿತ್ತು. ಉದಯಪುರ ಸಮೀಪದ ಕೃಷಿ ಕಾಲೇಜು ಬಳಿ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಗರ್ಭಿಣಿ ಫಾತಿಮಾ (21) ಅವರಿಗೆ ಹೆರಿಗೆ ನೋವು ಕಾಣಿಸಿಕೊಂಡಿತ್ತು. ಸಮೀಪದಲ್ಲಿ ಯಾವುದೇ ಆಸ್ಪತ್ರೆಯಿಲ್ಲದ ಕಾರಣ ಮಾರ್ಗ ಮಧ್ಯದಲ್ಲಿಯೇ ಬಸ್ ನಿಲ್ಲಿಸಿ ಹೆರಿಗೆ ಮಾಡಿಸಿ ತಾಯಿ ಹಾಗೂ ಮಗುವಿನ ಜೀವ ಕಾಪಾಡಲಾಗಿತ್ತು.

ಚಿಕ್ಕಮಗಳೂರು ಘಟಕದ ಕೆಎಸ್‌ಆರ್‌ಟಿಸಿ ಬಸ್ ನಿರ್ವಾಹಕಿ ಎಸ್. ವಸಂತಮ್ಮ ಹಾಗೂ ಬಸ್ ಚಾಲಕ ಎಚ್.ಬಿ.ಕುಮಾರಸ್ವಾಮಿ ಅವರು ಮಾನವೀಯತೆ ತೋರಿದ್ದರು. ಅವರಿಗೆ ಕ್ರಮವಾಗಿ ₹ 5 ಸಾವಿರ ಹಾಗೂ ₹ 2 ಸಾವಿರ ಬಹುಮಾನ ನೀಡಿ ಗೌರವಿಸಲಾಯಿತು. ನಿಗಮದ ಚಾಲನಾ ಸಿಬ್ಬಂದಿ ಬಸ್‌ಗಳಲ್ಲಿ ಪ್ರಯಾಣಿಸುವ ಪ್ರಯಾಣಿಕರೊಂದಿಗೆ ಉತ್ತಮ ನಡವಳಿಕೆ ತೋರಿ ಅವರ ಅಗತ್ಯಗಳಿಗೆ ಸ್ಪಂದಿಸುವುದರಲ್ಲಿ ಮುಂಚೂಣಿಯಲ್ಲಿದ್ದಾರೆ. ವಸಂತಮ್ಮ ಅವರು ಮಾನವೀಯ ಕೆಲಸ ಮಾಡಿದ್ದಾರೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಶ್ಲಾಘಿಸಿದರು.



ಕೆಎಸ್‌ಆರ್‌ಟಿಸಿ ಬಸ್ ಚಾಲಕ ಎಚ್.ಬಿ.ಕುಮಾರಸ್ವಾಮಿ ಮತ್ತು ನಿರ್ವಾಹಕಿ ಎಸ್. ವಸಂತಮ್ಮ ಅವರನ್ನು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ. ಸತ್ಯವತಿ ಸನ್ಮಾನಿಸಿದರು. ನಿರ್ದೇಶಕ ಪ್ರಶಾಂತ್ ಕುಮಾರ್ ಮಿಶ್ರಾ ಇದ್ದರು

'ಸುಪ್ರೀಂ'ಗೆ ಇಬ್ಬರು ನ್ಯಾಯಮೂರ್ತಿಗಳ ನೇಮಕ

ನವದೆಹಲಿ (ಪಿಟಿಐ): ಆಂಧ್ರಪ್ರದೇಶ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಪ್ರಶಾಂತ್ ಕುಮಾರ್ ಮಿಶ್ರಾ ಹಾಗೂ ಹಿರಿಯ ವಕೀಲ ಕೆ.ವಿ. ವಿಶ್ವನಾಥನ್ ಅವರನ್ನು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗುರುವಾರ ನೇಮಕ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚಿರತೆ ಸಫಾರಿಗೆ ಚಿಂತನೆ

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ರಾಜ್ಯದಲ್ಲಿಯೇ ಮೊದಲ ಬಾರಿಗೆ ಚಿರತೆ ಸಫಾರಿ ಪ್ರಾರಂಭಿಸಲು ಸಿದ್ಧತೆ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಪ್ರಾಯೋಗಿಕವಾಗಿ ಚಿರತೆಗಳನ್ನು ಮೆಶ್ ಅಳವಡಿಸಲಾಗಿರುವ ವಿಶಾಲ ಆವರಣದಲ್ಲಿ ಬಿಟ್ಟು ಪರಿಸರಕ್ಕೆ ಹೊಂದಿಕೊಳ್ಳುವಂತೆ ಮಾಡಲಾಗುತ್ತಿದೆ. ಪ್ರವಾಸಿಗರ ವೀಕ್ಷಣೆಗೆ ಅನುಕೂಲವಾಗುವಂತೆ ರಸ್ತೆ ನಿರ್ಮಾಣ ಕಾಮಗಾರಿ ನಡೆದಿದೆ. ಮುಂಬರುವ ದಿನಗಳಲ್ಲಿ ಜೈವಿಕ ಉದ್ಯಾನದಲ್ಲಿ ಸಂರಕ್ಷಿಸಿ ಆರೈಕೆ ಮಾಡುತ್ತಿರುವ 11 ಚಿರತೆಗಳನ್ನು ಸಫಾರಿಗೆ ಬಿಡುವ ಚಿಂತನೆ ಇದೆ.

ಬನ್ನೇರುಘಟ್ಟ: ತಬ್ಬಲಿ ಚಿರತೆ ಮರಿಗಳಿಗೆ ಆಶ್ರಯ



ಪ್ರಜಾವಾಣಿ ವಾರ್ತೆ

ಆನೇಕಲ್ : ಬನ್ನೇರುಘಟ್ಟ ಜೈವಿಕ ಉದ್ಯಾನ ರಾಜ್ಯದ ವಿವಿಧೆಡೆ ತಾಯಿಯಿಂದ ಬೇರ್ಪಟ್ಟು ತಬ್ಬಲಿಯಾದ ಚಿರತೆ ಮರಿಗಳಿಗೆ ಆಶ್ರಯ ತಾಣವಾಗಿದೆ.

ಕಳೆದ ಒಂದು ತಿಂಗಳಿನಿಂದ ರಾಜ್ಯದ ವಿವಿಧೆಡೆಯಿಂದ ಬಂದ ಒಟ್ಟು 14 ಚಿರತೆ ಮರಿಗಳನ್ನು ಉದ್ಯಾನದ ಆಸ್ಪತ್ರೆಯಲ್ಲಿ ಆರೈಕೆ ಮಾಡಲಾಗುತ್ತಿದೆ. ಬಿಳಿಗಿರಿ ರಂಗನಬೆಟ್ಟದಿಂದ 6 ಮರಿಗಳು ಮತ್ತು ಮದ್ದೂರು, ಮೈಸೂರಿನಿಂದ ತಲಾ 3ರಂತೆ ಒಟ್ಟು 6 ಮರಿಗಳು, ಟಿ.ನರಸೀಪುರದಿಂದ 2 ಮರಿಗಳನ್ನು ಸಂರಕ್ಷಿಸಿ ತರಲಾಗಿದೆ.

ಒಂದು ತಿಂಗಳಿನಿಂದ ಮೂರು ತಿಂಗಳೊಳಗಿನ ಮರಿಗಳಾಗಿವೆ. ಮರಿ ಹಾಕಿದ ನಂತರ ಕೆಲವೊಮ್ಮೆ ತಾಯಿಯು ಮರಿಗಳಿಂದ ಬೇರ್ಪಡುತ್ತದೆ. ಕಬ್ಬಿನ ಗದ್ದೆ, ತೋಟಗಳ ಬಳಿ ಮರಿಗಳು ಸಾರ್ವಜನಿಕರ ಕಣ್ಣಿಗೆ ಕಾಣಿಸಿಕೊಂಡಿದ್ದು ಸಂರಕ್ಷಿಸಿ ಅರಣ್ಯ ಇಲಾಖೆ ಮೂಲಕ ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಹಸ್ತಾಂತರಿಸಲಾಗಿದೆ.

ಮರಿಗಳಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಲಸಿಕೆ ನೀಡಲಾಗಿದೆ. ಹಾಲಿನ ಜತೆಗೆ ಪೌಷ್ಟಿಕ ಆಹಾರ ನೀಡಲಾಗುತ್ತಿದೆ ಎಂದು ಉದ್ಯಾನದ ವೈದ್ಯ ಡಾ.ಉಮಾಶಂಕರ್ ಅವರು ತಿಳಿಸಿದರು.

'ಮುಂಗಾರು ಕೃಷಿಯತ್ತ ಗಮನಹರಿಸಿ'



ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಗಾರು ಆರಂಭವಾಗಲಿರುವ ಹಿನ್ನೆಲೆಯಲ್ಲಿ ಬಿತ್ತನೆ ಬೀಜ, ರಸ ಗೊಬ್ಬರ, ರೈತರಿಗೆ ಕೃಷಿ ಸಾಲ ವಿತರಿಸಲು ಕೂಡಲೇ ಕ್ರಮ ತೆಗೆದುಕೊಳ್ಳಬೇಕು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವತ್ಥ ನಾರಾಯಣ ಒತ್ತಾಯಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವು ಆದಷ್ಟು ಬೇಗ ಸರ್ಕಾರವನ್ನು ರಚಿಸಬೇಕು ಮತ್ತು ತಕ್ಷಣವೇ ತನ್ನ ಪ್ರಣಾಳಿಕೆಯಲ್ಲಿ ಭರವಸೆ ನೀಡಿರುವಂತೆ 5 ಗ್ಯಾರಂಟಿಗಳನ್ನು ಜಾರಿ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಉಚಿತ ವಿದ್ಯುತ್, ಮಹಿಳೆಯರಿಗೆ ತಿಂಗಳಿಗೆ ತಲಾ ₹2 ಸಾವಿರ ಮತ್ತು ನಿರುದ್ಯೋಗಿಗಳಿಗೆ ತಲಾ ₹3 ಸಾವಿರ ನೀಡುವ ವಿಚಾರದಲ್ಲಿ ಗೊಂದಲಗಳಿವೆ. ಅದನ್ನು ಬಗೆಹರಿಸಿ ರಾಜ್ಯದಲ್ಲಿ ಪ್ರತಿಯೊಬ್ಬ ಅರ್ಹರಿಗೂ ಗ್ಯಾರಂಟಿಗಳ ಪ್ರಯೋಜನ ಸಿಗುವಂತೆ ಅನುಷ್ಠಾನಗೊಳಿಸಬೇಕು ಎಂದು ಹೇಳಿದರು.

ರಾಜ್ಯದ ಕಾಂಗ್ರೆಸ್ ಪಕ್ಷದ ಉಸ್ತುವಾರಿ ಸುರ್ಜೇವಾಲಾ ಅವರು ತಮ್ಮ ಕೊರತೆಗಳನ್ನು ಮುಚ್ಚಿಕೊಳ್ಳಲು ಬಿಜೆಪಿ ಮೇಲೆ ಗೂಬೆ ಕೂರಿಸುವ ಕೆಲಸ ಮಾಡಿದ್ದಾರೆ. ಮುಖ್ಯಮಂತ್ರಿ ಆಯ್ಕೆ ನಿರ್ವಹಣೆಯಲ್ಲಿ ಕಾಂಗ್ರೆಸ್ ವಿಫಲವಾಗಿದೆ. ಸರ್ಕಾರ ರಚನೆ ವಿಳಂಬಕ್ಕೆ ನಿರ್ವಹಣೆಯ ಕೊರತೆ ಪ್ರಮುಖ ಕಾರಣ ಎಂದು ಅವರು ತಿಳಿಸಿದರು.

‘ಇದ್ದವರಿಂದ ಪಡೆದು ಇಲ್ಲದವರಿಗೆ ಕೊಡುವ’ ಉದ್ದೇಶ • ‘ದಾನ’ದ ಪರಿಕಲ್ಪನೆಯಡಿ 2018ರಲ್ಲಿ ಆರಂಭ

ಬಡವರು, ನಿರ್ಗತಿಕರಿಗೆ ‘ಕರುಣೆಯ ಗೋಡೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇದ್ದವರಿಂದ ಪಡೆದು ಇಲ್ಲದವರಿಗೆ ಕೊಡುವ’ ಉದ್ದೇಶದಿಂದ ನಗರದ ಹಲವೆಡೆ ನಿರ್ಮಿಸಿರುವ ‘ಕರುಣೆಯ ಗೋಡೆ’ಗಳು, ಬಡವರು ಹಾಗೂ ನಿರ್ಗತಿಕರಿಗೆ ಬಟ್ಟೆ-ಇತರೆ ಅಗತ್ಯ ವಸ್ತುಗಳನ್ನು ಉಚಿತವಾಗಿ ಒದಗಿಸುತ್ತಿವೆ.

‘ದಾನ’ದ ಪರಿಕಲ್ಪನೆಯಲ್ಲಿ 2018ರಲ್ಲಿ ಆರಂಭಿಸಿರುವ ಕರುಣೆಯ ಗೋಡೆಗಳಿಗೆ ಇತ್ತೀಚಿನ ದಿನಗಳಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ನಗರದ ನಿವಾಸಿಗಳು ಬಳಸಿದ ಬಟ್ಟೆ ಹಾಗೂ ಇತರೆ ವಸ್ತುಗಳನ್ನು ಕರುಣೆಯ ಗೋಡೆಯಲ್ಲಿ ಇರಿಸುತ್ತಿದ್ದಾರೆ. ಬಡವರು–ನಿರ್ಗತಿಕರು, ಅಂಥ ಬಟ್ಟೆ ಹಾಗೂ ವಸ್ತುಗಳನ್ನು ಪಡೆದುಕೊಂಡು ಉಪಯೋಗಿಸುತ್ತಿದ್ದಾರೆ.



ರಾಜಾಜಿನಗರ ರಾಮಮಂದಿರ ಮೈದಾನ ಬಳಿಯ ‘ಕರುಣೆಯ ಗೋಡೆ’ಯಲ್ಲಿರುವ ಬಟ್ಟೆಗಳನ್ನು ವ್ಯಕ್ತಿಯೊಬ್ಬರು ಪಡೆದುಕೊಂಡರು

ಬಟ್ಟೆ, ಪಾತ್ರೆ, ಪಾದರಕ್ಷೆಗಳು, ಶಾಲಾ ಬ್ಯಾಗ್, ಬೆಡ್‌ಶೀಟ್, ಶಾಲು, ಛತ್ರಿ, ಪುಸ್ತಕ, ಹೊದಿಕೆಗಳು, ತಟ್ಟೆ... ಹೀಗೆ ಹಲವು ದಿನಬಳಕೆ ವಸ್ತುಗಳು ಕರುಣೆಯ ಗೋಡೆಯಲ್ಲಿ ಲಭ್ಯವಾಗುತ್ತಿವೆ. ಸ್ವಯಂ ಸೇವಾ ಸಂಘಟನೆಗಳು ಗೋಡೆ ನಿರ್ವಹಣೆ ಮಾಡುತ್ತಿವೆ.

‘ಉಳ್ಳವರಿಗೆ ಬೇಡವಾದ ವಸ್ತುಗಳನ್ನು ಸಂಗ್ರಹಿಸಿಟ್ಟುಕೊಂಡು, ಅದೇ ವಸ್ತುಗಳನ್ನು ಅಗತ್ಯವಿರುವವರಿಗೆ ನೀಡುವ ಸ್ಥಳ ಈ ಕರುಣೆಯ ಗೋಡೆ. ನಾವು ಬಳಸಿದ ವಸ್ತುಗಳನ್ನು ಗೋಡೆಯಲ್ಲಿ ಇರಿಸುತ್ತಿದ್ದು, ಅದು ಬೇರೆಯವರಿಗೆ ಅನುಕೂಲವಾಗುತ್ತಿದೆ’ ಎಂದು ರಾಜಾಜಿನಗರದ ನಿವಾಸಿ ಉದಯ್‌ಶಂಕರ್ ಹೇಳಿದರು.

ನಿವಾಸಿ ರಘುವೀರ್, ‘ನನಗೆ ಇಬ್ಬರು ಹೆಣ್ಣು ಮಕ್ಕಳು. ಅವರಿಗೆ ಪ್ರತಿ ತಿಂಗಳು ಬಟ್ಟೆ ಖರೀದಿಸುತ್ತೇವೆ. ವಯಸ್ಸು ಹೆಚ್ಚಾದಂತೆ ಹಳೇ ಬಟ್ಟೆಗಳು ಮಕ್ಕಳಿಗೆ ಆಗುವುದಿಲ್ಲ. ಅಂಥ ಬಟ್ಟೆಗಳನ್ನು ಕರುಣೆಯ ಗೋಡೆಯಲ್ಲಿ ಇರಿಸುತ್ತಿದ್ದೇನೆ. ಈ ಬಟ್ಟೆಗಳನ್ನು ಬೇರೆಯವರು ತೆಗೆದುಕೊಂಡು ಹೋಗುತ್ತಿದ್ದಾರೆ’ ಎಂದರು.

ನಿತ್ಯವೂ ಭೇಟಿ ನೀಡುವ ಜನ

ಆರ್ಥಿಕವಾಗಿ ಸದೃಢವಿರುವ ವ್ಯಕ್ತಿಗಳು, ತಮ್ಮ ಬಳಸಿದ ಬಟ್ಟೆ ಹಾಗೂ ಇತರೆ ವಸ್ತುಗಳನ್ನು ಗೋಡೆಯಲ್ಲಿ ಇರಿಸುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದವರು, ಅಂಥ ಬಟ್ಟೆ ಹಾಗೂ ವಸ್ತುಗಳನ್ನು ತೆಗೆದುಕೊಂಡು ಹೋಗಿ ಪುನರ್ ಬಳಕೆ ಮಾಡುತ್ತಿದ್ದಾರೆ. ಹೀಗಾಗಿ, ಗೋಡೆಗಳ ಬಳಿ ನಿತ್ಯವೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರುತ್ತಿದ್ದಾರೆ.

‘ಹೊಸ ಬಟ್ಟೆ ಖರೀದಿಸುವಷ್ಟು ಹಣ ನನ್ನ ಬಳಿ ಇಲ್ಲ. ವಾರಕ್ಕೆ ಮೂರು ಬಾರಿ ಗೋಡೆ ಬಳಿ ಬಂದು ಹೋಗುತ್ತೇನೆ. ಬಟ್ಟೆ, ಬ್ಯಾಗ್ ಹಾಗೂ ಅಗತ್ಯ ವಸ್ತು ಸಿಕ್ಕರೆ ತೆಗೆದುಕೊಂಡು ಹೋಗುತ್ತೇನೆ. ಅದೇ ಬಟ್ಟೆಗಳನ್ನು ತೊಳೆದು, ಧರಿಸುತ್ತೇನೆ’ ಎಂದು ಕಸ ಆಯುವ ಆರ್. ಮಂಜುನಾಥ್ ಹೇಳಿದರು.

‘ಕೆಲವು ಬಾರಿ ಹೆಚ್ಚು ವಸ್ತುಗಳ ಸಂಗ್ರಹ’

‘ಕರುಣೆಯ ಗೋಡೆ ಬಗ್ಗೆ ಜನರು ಹೆಚ್ಚು ಆಕರ್ಷಿತರಾಗಿದ್ದಾರೆ. ಕೆಲವು ಬಾರಿ ಹೆಚ್ಚು ವಸ್ತುಗಳನ್ನು ತಂದು ಗೋಡೆಯಲ್ಲಿ ಇರಿಸುತ್ತಾರೆ. ಇಂಥ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿರುತ್ತವೆ. ನಾವೇ ಅವುಗಳನ್ನು ಹೊಂದಿಸಿಡುತ್ತೇವೆ’ ಎಂದು ರಾಜಾಜಿನಗರದ ರಾಮಮಂದಿರ ಮೈದಾನ ಬಳಿಯ ಅಂಗಡಿಯೊಂದರ ಸಿಬ್ಬಂದಿ ರಮೇಶ್ ಹೇಳಿದರು.

ಟರ್ಮಿನಲ್ 2ಗೆ ಐಜಿಬಿಸಿ ಪುರಸ್ಕಾರ

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಮತ್ತೊಂದು ಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಂತರ ರಾಷ್ಟ್ರೀಯವಿಮಾನನಿಲ್ದಾಣದಲ್ಲಿನಿರ್ಮಿಸಿರುವ ಟರ್ಮಿನಲ್–2ಗೆ ‘ಗ್ರೀನ್ ಬಿಲ್ಡಿಂಗ್ ಕೌನ್ಸಿಲ್’ನ (ಐಜಿಬಿಸಿ) ಪ್ಲಾಟಿನಂ ರೇಟಿಂಗ್ ಪುರಸ್ಕಾರ ದೊರೆತಿದೆ.

ಐಜಿಬಿಸಿಯ ಗ್ರೀನ್ ಕಟ್ಟಡಕ್ಕೆ ನೀಡುವ ರೇಟಿಂಗ್ಸ್‌ನ ಅಡಿ ಈ ಗರಿ ಸಿಕ್ಕಿದೆ.

ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ, ನೀರಿನ ಸಂರಕ್ಷಣೆ ಸೇರಿದಂತೆ ಹಸಿರುಮಯ ಪರಿಕಲ್ಪನೆ ಅಡಿ ಈ ಟರ್ಮಿನಲ್ ನಿರ್ಮಾಣ ಮಾಡಲಾಗಿತ್ತು. ಕೆಲವು ತಿಂಗಳ ಹಿಂದಷ್ಟೇ ಪ್ರಧಾನಿ ನರೇಂದ್ರ ಮೋದಿ ಅವರು ಇದನ್ನು ಉದ್ಘಾಟಿಸಿದ್ದರು.

ಪರಿಸರ, ಸುಸ್ಥಿರ, ತಂತ್ರಜ್ಞಾನ, ಕಲೆ ಮತ್ತು ಸಂಸ್ಕೃತಿ ಎಂಬ ನಾಲ್ಕು ಆಶಯಗಳೊಂದಿಗೆ ನಿರ್ಮಿಸಿರುವ ಟರ್ಮಿನಲ್ 2 ಪ್ರವಾಸಿ ತಾಣದಂತೆ ಕಾಣಿಸುತ್ತಿದೆ ಎಂದು ಪ್ರಯಾಣಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದರು.



ಬೆಂಗಳೂರು ವಿಮಾನ ನಿಲ್ದಾಣದ ಟರ್ಮಿನಲ್–2.

ಕಟ್ಟಡದೊಳಗೆ ತೂಗು ಉದ್ಯಾನ, ಅಳಿವಿನಂಚಿನಲ್ಲಿರುವ ಗಿಡಗಳು, ಪ್ರವೇಶ ದ್ವಾರದ ಎದುರಿನಲ್ಲೇ ನಾಡಿನ ಸಂಸ್ಕೃತಿ ಬಿಂಬಿಸುವ ಕಲಾಕೃತಿಗಳನ್ನು ಜೋಡಿಸಲಾಗಿದೆ. ಜತೆಗೆ, ಮಳೆ ನೀರು ಸಂಗ್ರಹ ವ್ಯವಸ್ಥೆ ಮಾಡಲಾಗಿದೆ. ಇದೇ ನೀರನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ. ಹೊರಗಿನಿಂದ ನೀರು ಖರೀದಿಸುವುದು ಶೇ 37ರಷ್ಟು ತಗ್ಗಿದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಸೌರಶಕ್ತಿ ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಬಿಐಎಎಲ್‌ನ ಸಿಇಒ ಹರಿಮರಾರ್ ಪ್ರತಿಕ್ರಿಯಿಸಿ, ‘ಟರ್ಮಿನಲ್–2ಗೆ ಐಜಿಬಿಸಿಯ ಪ್ಲಾಟಿನಂ ರೇಟಿಂಗ್ ಲಭಿಸಿರುವುದು ಮಹತ್ವದ ಸಾಧನೆಗಳಲ್ಲಿ ಒಂದಾಗಿದೆ. ಕಟ್ಟಡದ ವಿನ್ಯಾಸವು ಪರಿಸರಕ್ಕೆ ಪೂರಕವಾಗಿದೆ. ಹಸಿರು ಪರಿಕಲ್ಪನೆ ಯಶಸ್ವಿಯಾಗಿದೆ’ ಎಂದು ತಿಳಿಸಿದ್ದಾರೆ.

ಭಾರತೀಯ ಕೈಗಾರಿಕಾ ಒಕ್ಕೂಟದ ಕಾರ್ಯನಿರ್ವಾಹಕ ನಿರ್ದೇಶಕ ಕೆ.ಎಸ್. ವೆಂಕಟಗಿರಿ, ‘ಟರ್ಮಿನಲ್ 2 ಒಂದು ಹೆಗ್ಗುರುತು. ಇದು ಕಟ್ಟಡವಲ್ಲ. ಹಸಿರು ಉದ್ಯಾನ’ ಎಂದು ಬಣ್ಣಿಸಿದ್ದಾರೆ.

ಕೆಲವು ತಿಂಗಳ ಹಿಂದೆ ಕೆಂಪೇಗೌಡ ವಿಮಾನ ನಿಲ್ದಾಣವು ಏರ್‌ಪೋರ್ಟ್ ಕೌನ್ಸಿಲ್ ಇಂಟರ್‌ನ್ಯಾಷನಲ್ ವರ್ಲ್ಡ್ (ಎಸಿಐ) ಕೊಡಮಾಡುವ ಅತ್ಯುತ್ತಮ ವಿಮಾನ ನಿಲ್ದಾಣ ಪ್ರಶಸ್ತಿಗೂ ಭಾಜನವಾಗಿತ್ತು.

ಬಿಬಿಎಂಪಿಗೆ ಪಟ್ನಾ ಮುನ್ಸಿಪಲ್ ಕಾರ್ಪೊರೇಷನ್ ಪ್ರತಿನಿಧಿಗಳ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಟ್ನಾ ಮುನ್ಸಿಪಲ್ ಕಾರ್ಪೊರೇಷನ್ (ಪಿಎಂಸಿ) ಪ್ರತಿನಿಧಿ ಗಳು ಹಾಗೂ ಡಚ್‌ನ ಜಿಐಝಡ್ ಅಧಿಕಾರಿಗಳು ಬಿಬಿಎಂಪಿಯ ಕೇಂದ್ರ ಕಚೇರಿಗೆ ಗುರುವಾರ ಭೇಟಿ ನೀಡಿದ್ದರು.

ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಮ್ ರಾಯಪುರ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಪಾಲಿಕೆ ಹಾಗೂ ಘನತ್ಯಾಜ್ಯ ನಿರ್ವಹಣೆಯ ಕಾರ್ಯವೈಖರಿಯ ಮಾಹಿತಿ ನೀಡಲಾಯಿತು.

ಬೆಂಗಳೂರಿನ ಪ್ರಗತಿಯ ಬಗ್ಗೆ, ಬಿಬಿಎಂಪಿ ವತಿಯಿಂದ ಅಳವಡಿಸಲಾದ ಜೈವಿಕ-ಮೆಥನೇಶನ್, ಕಾಂಪೋಸ್ಟಿಂಗ್ ಘಟಕದ ಕಾರ್ಯನಿರ್ವಹಣೆಯ ಬಗ್ಗೆ ಪ್ರತಿನಿಧಿಗಳು ಪ್ರಶಂಸೆ ವ್ಯಕ್ತಪಡಿಸಿದರು. ಬಿಬಿಎಂಪಿಯ ಘನತ್ಯಾಜ್ಯ ನಿರ್ವಹಣೆ ಮಾದರಿ ಪಟ್ನಾ ಮುನ್ಸಿಪಲ್ ಕಾರ್ಪೊರೇಷನ್‌ನಲ್ಲೂ ಘನತ್ಯಾಜ್ಯ ನಿರ್ವಹಣೆ ಘಟಕ, ಪೌರಕಾರ್ಮಿಕರಿಗೆ ಸುವಿಧ ಕ್ಯಾಬಿನ್ ಸೌಲಭ್ಯ ಒದಗಿಸಲಾಗುವುದು ಎಂದು ತಿಳಿಸಿದರು.

ಪಟ್ನಾ ಮುನ್ಸಿಪಲ್ ಕಾರ್ಪೊರೇಷನ್ ಹೆಚ್ಚುವರಿ ಆಯುಕ್ತೆ ಶೀಲಾ ಇರಾನಿ, ಪಟ್ನಾ ಮುನಿಸಿಪಲ್ ಕಾರ್ಪೊರೇಷನ್ ವಾರ್ಡ್ ಕೌನ್ಸಿಲರ್‌ಗಳಾದ ಸತೀಶ್ ಕುಮಾರ್ ಹಾಗೂ ಕೈಲಾಶ್ ಪ್ರಸಾದ್ ಯಾದವ್, ಬಿಬಿಎಂಪಿ ಜಂಟಿ ಆಯುಕ್ತ(ಘನ ತ್ಯಾಜ್ಯ) ಪರಶುರಾಮ್ ಶಿನ್ನಾಳಕರ್, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ ಸಿಇಒ ವೆಂಕಟೇಶ್ ಮೂರ್ತಿ ಇದ್ದರು.

ಎನ್‌ಎಲ್‌ಎಸ್‌ಐಯು: ಸ್ಥಳೀಯರಿಗೆ ಶೇ 25ರ ಮೀಸಲಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಂಗಳೂರಿನ ರಾಷ್ಟ್ರೀಯ ಕಾನೂನು ಶಾಲೆಯಲ್ಲಿ (ಎನ್‌ಎಲ್‌ಎಸ್‌ಐಯು) ಸ್ಥಳೀಯ ವಿದ್ಯಾರ್ಥಿಗಳಿಗೆ ಶೇ 25ರಷ್ಟು ಸೀಟುಗಳನ್ನು ಮೀಸಲಿಡುವ ಕುರಿತ ನೀತಿಗೆ ತಿದ್ದುಪಡಿ ಮಾಡಬೇಕು’ ಎಂದು ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ.ರಂಗನಾಥ್ ಅಗ್ರಹಿಸಿದ್ದಾರೆ.

ಈ ಕುರಿತಂತೆ ಎನ್‌ಎಲ್‌ಎಸ್‌ಯು ಕುಲಪತಿ ಸುಧೀರ್ ಕೃಷ್ಣಮೂರ್ತಿಗೆ ಪತ್ರ ಬರೆದಿರುವ ಅವರು, ’ಎನ್‌ಎಲ್‌ಎಸ್‌ಐಯುನಲ್ಲಿ ರಾಜ್ಯದ ವಿದ್ಯಾರ್ಥಿಗಳಿಗೆ ಶೇ 25ರಷ್ಟು ಸೀಟುಗಳನ್ನು ನೀಡಬೇಕಾದ್ದು ವಿವಿಯ ಆದ್ಯ ಕರ್ತವ್ಯ. ಈ ವಿಚಾರಕ್ಕೆ ಸಂಬಂಧಿಸಿದಂತೆ ಈಗಾಗಲೇ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೂ ಪತ್ರ ಬರೆಯಲಾಗಿದೆ. ಈ ದಿಸೆಯಲ್ಲಿ ಕೂಡಲೇ ಸರ್ವ ಸದಸ್ಯರ ಸಭೆ ಕರೆದು ನಿರ್ಣಯ ಕೈಗೊಳ್ಳಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

‘ಇಲ್ಲವಾದರೆ ಕಾನೂನು ಶಾಲೆಗೆ ನೀಡಲಾಗುತ್ತಿರುವ ಅನುದಾನವನ್ನು ವಾಪಸ್ ಪಡೆಯುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಮತ್ತು ಕರ್ನಾಟಕ ಹೈಕೋರ್ಟ್ ಮೊರೆ ಹೋಗಲಾಗುವುದು‘ ಎಂದು ಅವರು ಪತ್ರದಲ್ಲಿ ಎಚ್ಚರಿಸಿದ್ದಾರೆ.

‘ವೆಂಕಟೇಶಪುರ ಕೆರೆ ಪುನಶ್ಚೇತನ’

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರು ವಾರ್ಡ್ ವ್ಯಾಪ್ತಿಯ ವೆಂಕಟೇಶಪುರ ಕೆರೆಯನ್ನು ಪುನಶ್ಚೇತನಗೊಳಿಸಲು ಉದ್ದೇಶಿಸಲಾಗಿದ್ದು, ಶಾಸಕ ಕೃಷ್ಣ ಬೈರೇಗೌಡ ಅವರು ಬಿಬಿಎಂಪಿ ಅಧಿಕಾರಿಗಳೊಂದಿಗೆ ಕೆರೆ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಕೃಷ್ಣ ಬೈರೇಗೌಡ ಮಾತನಾಡಿ, ಸುಮಾರು 6.35 ಎಕರೆ ವಿಸ್ತೀರ್ಣದ ಈ ಕೆರೆಯನ್ನು ಪುನಶ್ಚೇತನಗೊಳಿಸಲು ₹ 2.50 ಕೋಟಿ ಅನುದಾನ ಬಿಡುಗಡೆಯಾಗಿದೆ. ಕೆರೆಯನ್ನು ಸಂರಕ್ಷಿಸುವುದರ ಜೊತೆಗೆ ಹೂಳು ತೆಗೆದು, ಕೆರೆ ಏರಿ ಪುನಶ್ಚೇತನ, ತಂತಿ ಬೇಲಿ ಅಳವಡಿಕೆ ಹಾಗೂ ಒಳಚರಂಡಿ ನೀರಿನ ಹೊರಹರಿವು ತಡೆಯಲು ಪೈಪ್‌ಲೈನ್ ಅಳವಡಿಕೆ ಮಾಡಲಾಗುವುದು ಎಂದು ತಿಳಿಸಿದರು.

ಕೆರೆಯ ಗಡಿರೇಖೆಯನ್ನು ಗುರುತಿಸಲು ಸರ್ವೆ ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಸುತ್ತಲೂ ಗಿಡ-ಮರಗಳನ್ನು ಬೆಳೆಸಲು ಅವಕಾಶ ಕಲ್ಪಿಸಿ, ಮಿನಿ ಅರಣ್ಯೋದ್ಯಾನ ನಿರ್ಮಿಸಲಾಗುವುದು. ಜನರ ಬಳಕೆಯ ಜೊತೆಗೆ ಪ್ರಾಣಿಪಕ್ಷಿಗಳ ಆಶ್ರಯ ತಾಣವಾಗಿಯೂ ಸಮಗ್ರವಾಗಿ ಅಭಿವೃದ್ಧಿಗೊಳಿಸಲು ಯೋಜನೆ ರೂಪಿಸಲಾಗಿದ್ದು, ಈ ಎಲ್ಲಾ ಕಾರ್ಯಗಳಿಗೆ ಸದ್ಯದಲ್ಲೇ ಚಾಲನೆ ನೀಡಲಾಗುವುದು ಎಂದರು.


ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರು ವಾರ್ಡ್ ವ್ಯಾಪ್ತಿಯ ವೆಂಕಟೇಶಪುರ ಕೆರೆ ಪ್ರದೇಶಕ್ಕೆ ಶಾಸಕ ಕೃಷ್ಣಬೈರೇಗೌಡ ಭೇಟಿ ನೀಡಿ ಪರಿಶೀಲಿಸಿದರು

ಅಂಬೇಡ್ಕರ್‌ಗೆ ಅವಹೇಳನ ಮಹಿಳೆ ಬಂಧನ

ತುಮಕೂರು: ಡಾ.ಬಿ.ಆರ್. ಅಂಬೇಡ್ಕರ್ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿ ಸಾಮಾಜಿಕ ಜಾಲ ತಾಣದಲ್ಲಿ ವಿಡಿಯೊ ಹರಿಬಿಟ್ಟಿದ್ದ ವೇದಾವತಿ(35) ಎಂಬುವರನ್ನು ಪೊಲೀಸರು ಬಂಧಿಸಿದ್ದಾರೆ.

ಕ್ಯಾತ್ಸಂದ್ರ ಬಳಿಯ ಕಲ್ಲಹಳ್ಳಿಯ ನಿವಾಸಿಯಾದ ಈಕೆ ಸಂವಿಧಾನ, ಕಾನೂನು, ಅಂಬೇಡ್ಕರ್ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದರು. ದಲಿತ ಸಮುದಾಯದ ಬಗ್ಗೆಯೂ ಹಗುರವಾಗಿ ಮಾತನಾಡಿ ವಿಡಿಯೊ ಹರಿಬಿಟ್ಟಿದ್ದರು. ಕಳೆದ 15 ದಿನಗಳಿಂದ ಈ ವಿಡಿಯೊ ಎಲ್ಲೆಡೆ ಹರಿದಾಡುತ್ತಿದೆ.

ಈಕೆಯ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ದಲಿತ ಸಂಘರ್ಷ ಸಮಿತಿಯಿಂದ ನಗರದ ಹೊಸ ಬಡಾವಣೆ ಪೊಲೀಸ್ ಠಾಣೆಗೆ ದೂರು ನೀಡಲಾಗಿತ್ತು. ಈ ದೂರಿನ ಮೇರೆಗೆ ಬಂಧಿಸಲಾಗಿದೆ.

ಸುಧಾ, ಮಯೂರ ಓದಿರಿ

‘ನವೆಂಬರ್ ವೇಳೆಗೆ ರಾಜಕೀಯದಲ್ಲಿ ಬದಲಾವಣೆ’

ಪ್ರಜಾವಾಣಿ ವಾರ್ತೆ

ರಾಮನಗರ: ‘ಅಕ್ಟೋಬರ್– ನವೆಂಬರ್ ವೇಳೆಗೆ ರಾಜ್ಯ ರಾಜಕಾರಣದಲ್ಲಿ ಬದಲಾವಣೆ ಆಗುವ ನಿರೀಕ್ಷೆ ಇದೆ’ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಚನ್ನಪಟ್ಟಣದಲ್ಲಿ ಗುರುವಾರ ಮತದಾರರಿಗೆ ಏರ್ಪಡಿಸಿದ್ದ ಕೃತಜ್ಞತಾ ಸಮಾವೇಶದಲ್ಲಿ ಅವರು ಮಾತನಾಡಿದರು. ‘ಈಗೇನೋ ಬಹುಮತದ ಸರ್ಕಾರ ಬಂದಿದೆ. ಆದರೆ, ಲೋಕಸಭಾ ಚುನಾವಣೆ ಬಳಿಕ ಏನು ಬೆಳವಣಿಗೆ ಆಗಲಿದೆ ಕಾದು ನೋಡೋಣ’ ಎಂದರು.

ಕಾಂಗ್ರೆಸ್ ನೀಡಿರುವ ಗ್ಯಾರಂಟಿ ಯೋಜನೆಗಳ ಜಾರಿಗೆ ₹60ರಿಂದ ₹70 ಸಾವಿರ ಕೋಟಿ ಬೇಕು. ಇದನ್ನು ಎಲ್ಲಿಂದ ತರುತ್ತಾರೆ. ಇನ್ನುಳಿದ ಅಭಿವೃದ್ಧಿ ಕಾರ್ಯಗಳಿಗೆ ಹಣ ಎಲ್ಲಿಂದ ತರುತ್ತಾರೆ. ಬಿಜೆಪಿಯವರಂತೆ ಕಾಂಗ್ರೆಸ್‌ನವರೂ ಲೂಟಿ ಮಾಡುತ್ತಾರೆ. ಅದನ್ನೆಲ್ಲ ಎಲ್ಲಿ ಹಿಡಿಯಬೇಕು ಎಂಬುದು ಗೊತ್ತಿದೆ. ಅದಕ್ಕೆ ಹೋರಾಟ ಆರಂಭಿಸುತ್ತೇನೆ ಎಂದರು.

ಪಿಎಸ್‌ಐ, ಪಿ.ಸಿ ಅಮಾನತು

ಬ್ಯಾನರ್ ವಿವಾದ: ಆರೋಪಿಗಳ ಮೇಲೆ ಪೊಲೀಸರ ದೌರ್ಜನ್ಯ– ಆರೋಪ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಡಿವೈಎಸ್ಪಿ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸು
- ಹಲ್ಲೆಗೊಳಗಾದ ಆರೋಪಿ ಅವಿನಾಶ್, ಮತ್ತೊಬ್ಬರು ಆಸ್ಪತ್ರೆಗೆ ದಾಖಲು

ಮಂಗಳೂರು: ಪುತ್ತೂರಿನಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ಸಂಸದ ಡಿ.ವಿ. ಸದಾನಂದಗೌಡ ಅವರ ಚಿತ್ರವಿದ್ದ ಬ್ಯಾನರ್ ಅಳವಡಿಸಿ ಅದಕ್ಕೆ ಚಪ್ಪಲಿ ಹಾರ ಹಾಕಿದ ಆರೋಪಿಗಳ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ಪುತ್ತೂರು ಸಂಪ್ಯ ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಶ್ರೀನಾಥ ರೆಡ್ಡಿ ಹಾಗೂ ಕಾನ್‌ಸ್ಟೆಬಲ್ ಹರ್ಷಿತ್ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಪುತ್ತೂರಿನ ಡಿವೈಎಸ್ಪಿ ವೀರಯ್ಯ ಹಿರೇಮಠ ವಿರುದ್ಧ ಶಿಸ್ತುಕ್ರಮಕ್ಕೆ ಹಿರಿಯ ಅಧಿಕಾರಿಗಳಿಗೆ ಶಿಫಾರಸು ಮಾಡಲಾಗಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ್ ಅಮಟೆ ತಿಳಿಸಿದ್ದಾರೆ.

ಪೊಲೀಸರು ದೌರ್ಜನ್ಯ ನಡೆಸಿರುವ ಕುರಿತು ಆರೋಪಿ ಅವಿನಾಶ್ ತಂದೆ ವೇಣುನಾಥ ದೂರು ನೀಡಿದ್ದರು.

ಪುತ್ತೂರು ಡಿವೈಎಸ್ಪಿ ಕಚೇರಿಯಲ್ಲೇ ಆರೋಪಿಗಳ ಮೇಲೆ ಹಲ್ಲೆ ನಡೆದಿದೆ ಎಂಬ ಆರೋಪ ಕೇಳಿಬಂದಿತ್ತು. ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಲ್ಲಿಸಿದ ಇಲಾಖಾ ವಿಚಾರಣೆಯ ವರದಿಯ ಆಧಾರದ ಮೇಲೆ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಎಸ್.ಪಿ ಹೇಳಿದ್ದಾರೆ.

ಆಸ್ಪತ್ರೆಗೆ ದಾಖಲು: ಹಲ್ಲೆಗೊಳಗಾದ ಆರೋಪಿ ಅವಿನಾಶ್ ಹಾಗೂ ಮತ್ತೊಬ್ಬರು ಬುಧವಾರ ರಾತ್ರಿ ಪುತ್ತೂರಿನ ಆಸ್ಪತ್ರೆಗೆ ದಾಖಲಾಗಿದ್ದಾರೆ.

ವಿಧಾನಸಭಾ ಚುನಾವಣೆಯಲ್ಲಿ ಪುತ್ತೂರು ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡಿರುವ ಅರುಣ್ ಕುಮಾರ್ ಪುತ್ತಿಲ, ಬೆಳ್ತಂಗಡಿ ಶಾಸಕ ಹರೀಶ್ ಪೂಂಜ, ಚಕ್ರವರ್ತಿ ಸೂಲಿಬೆಲೆ, ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ಅವರು ಪ್ರತ್ಯೇಕವಾಗಿ ಆಸ್ಪತ್ರೆಗೆ ಭೇಟಿ ನೀಡಿ ಸಾಂತ್ವನ ಹೇಳಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಪುತ್ತಿಲ, ‘ಯಾರ ಪ್ರಚೋದನೆಗೆ ಒಳಗಾಗಿ ಪೊಲೀಸರು ಈ ರೀತಿ ಕೃತ್ಯ ನಡೆಸಿದ್ದಾರೋ ಗೊತ್ತಿಲ್ಲ. ಡಿವೈಎಸ್ಪಿ ಕಚೇರಿಯಲ್ಲೇ ಪಿಎಸ್‌ಐ ಹಾಗೂ ಸಿಬ್ಬಂದಿ ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರ ಮೇಲೆ ಅಮಾನುಷವಾಗಿ ಹಲ್ಲೆ ಮಾಡಿದ್ದಾರೆ. ಅವರ ವಿರುದ್ಧ ಕ್ರಮಕೈಗೊಳ್ಳಬೇಕು’ ಎಂದು ಒತ್ತಾಯಿಸಿದರು.

ಸಿಟ್ಟು ಹೊರಹಾಕುವ ಹಕ್ಕು ಕಾರ್ಯಕರ್ತರಿಗಿದೆ: ಪ್ರತಾಪ ಸಿಂಹ

ಬೆಂಗಳೂರು: ‘ನಮ್ಮ ಪರವಾಗಿ ಮತ ಕೇಳುವ, ಮನೆ ಮಠ ಬಿಟ್ಟು ಪಕ್ಷಕ್ಕಾಗಿ ದುಡಿಯುವ ಹಾಗೂ ಗೆದ್ದಾಗ ಹೊತ್ತು ಮೆರೆಯುವ ಕಾರ್ಯಕರ್ತನಿಗೆ ಪಕ್ಷ ಸೋತಾಗ ನಮ್ಮ ಮೇಲೆ ಸಿಟ್ಟನ್ನು ತೀಕ್ಷ್ಣವಾಗಿ ಹೊರ ಹಾಕುವ ಹಕ್ಕೂ ಇದೆ’ ಎಂದು ಸಂಸದ ಪ್ರತಾಪ ಸಿಂಹ ಹೇಳಿದ್ದಾರೆ.


ಈ ಕುರಿತು ಟ್ವೀಟ್ ಮಾಡಿರುವ ಅವರು, ‘ಪಕ್ಷ ಸೋತಿರುವುದರಿಂದ ಅನಾಥವಾಗಿರುವುದು ಮತ್ತು ಅಪಾಯಕ್ಕೆ ಸಿಲುಕಿರುವುದು ಕಾರ್ಯಕರ್ತನೇ ಹೊರತು ಯಾವ ನಾಯಕನೂ ಅಲ್ಲ, ದಯವಿಟ್ಟು ನಮ್ಮನ್ನು ಕ್ಷಮಿಸಿ’ ಎಂದು ಕಾರ್ಯಕರ್ತರನ್ನು ಉದ್ದೇಶಿಸಿ ಹೇಳಿದ್ದಾರೆ.

‘ಅದೇ ರೀತಿ ಯಾರದ್ದೋ ವೈಯಕ್ತಿಕ ಮಹತ್ವಾಕಾಂಕ್ಷೆಯಿಂದ ಸೃಷ್ಟಿಯಾಗುವ ಷಡ್ಯಂತ್ರಕ್ಕೆ ಬಲಿಯಾಗುವುದು, ಯಾರ್ಯಾರನ್ನೋ ತೆಗಳುವುದು ಬೇಡ ಕಾರ್ಯಕರ್ತರೆ’ ಎಂದೂ ಮನವಿ ಮಾಡಿದ್ದಾರೆ.

ಪುತ್ತೂರಿನಲ್ಲಿ ಇತ್ತೀಚೆಗೆ ನಳಿನ್ ಕುಮಾರ್ ಕಟೀಲ್ ಮತ್ತು ಡಿ.ವಿ. ಸದಾನಂದ ಗೌಡ ಭಾವಚಿತ್ರಗಳ ಮೇಲೆ ಚಪ್ಪಲಿ ಹಾರ ಹಾಕಿದ ದೂರಿನ ಹಿನ್ನೆಲೆಯಲ್ಲಿ ಕೆಲವರನ್ನು ಬಂಧಿಸಿದ, ಪೊಲೀಸರು ಮನಬಂದಂತೆ ಹಲ್ಲೆ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಪ್ರತಾಪ ಸಿಂಹ ಟ್ವೀಟ್ ಮಾಡಿದ್ದಾರೆ ಎನ್ನಲಾಗಿದೆ.

ಮತ್ತೆ ಪುಟಿದೇಳುತ್ತೇವೆ: ಬೊಮ್ಮಾಯಿ ವಿಶ್ವಾಸ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ನಾವು ಆತ್ಮಸ್ಥೈರ್ಯ ಕಳೆದುಕೊಂಡಿಲ್ಲ. ನಾವು ಮತ್ತೆ ರಾಜ್ಯದಲ್ಲಿ ಪುಟಿದೇಳುತ್ತೇವೆ' ಎಂದು ಹಂಗಾಮಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೇಳಿದರು.

ತಮ್ಮ ನಿವಾಸದ ಬಳಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಚುನಾವಣಾ ಫಲಿತಾಂಶದ ಆರು ದಿನಗಳ ಬಳಿಕ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಆಯ್ಕೆ ಆಗಿದ್ದಾರೆ. ಅವರನ್ನು ಅಭಿನಂದಿಸುತ್ತೇನೆ. ಪ್ರಜಾಪ್ರಭುತ್ವದ ತೀರ್ಪು ಒಪ್ಪಿಕೊಂಡಿದ್ದೇವೆ’ ಎಂದು ಹೇಳಿದರು.

‘ರಾಜಕಾರಣದಲ್ಲಿ ಪಾತ್ರಗಳನ್ನು ತೀರ್ಮಾನಿಸುವುದು ಜನ. ನಮಗೆ ವಿಪಕ್ಷವಾಗಿ ಜನ ತೀರ್ಮಾನ ಕೊಟ್ಟಿದ್ದಾರೆ. ಕಾಂಗ್ರೆಸ್ ಮೇಲೆ ಜನ ಬಹಳಷ್ಟು ವಿಶ್ವಾಸ ಇಟ್ಟಿದ್ದಾರೆ. ಗ್ಯಾರಂಟಿಗಳ ಮೇಲೆ ಜನರಿಗೆ ದೊಡ್ಡ ವಿಶ್ವಾಸವಿದೆ. ಅದನ್ನು ಅವರು ಪೂರೈಸಬೇಕಾಗಿದೆ. ಪೂರೈಸುವ ವೇಳೆ ರಾಜ್ಯದ ಆರ್ಥಿಕ ವ್ಯವಸ್ಥೆ ಹಾಳಾಗದಂತೆ ನೋಡಿಕೊಳ್ಳುವುದು ಕೂಡ ಅವರ ಜವಾಬ್ದಾರಿ. ಯಾವ ರೀತಿ ನಿಭಾಯಿಸುತ್ತಾರೆ ಅಂತ ಕಾದು ನೋಡೋಣ’ ಎಂದು ಅವರು ಹೇಳಿದರು.

‘ವಿಪಕ್ಷವಾಗಿ ನಾವು ಜವಾಬ್ದಾರಿಯಿಂದ ಕೆಲಸ ಮಾಡುತ್ತೇವೆ. 2023ರಾಜ್ಯದ ಒಟ್ಟಾರೆ ಅಭಿವೃದ್ಧಿ ದೃಷ್ಟಿಯಿಂದ ಬಹಳ ಮಹತ್ವದ್ದು ಮತ್ತು ಸವಾಲುಗಳಿವೆ. ಕರ್ನಾಟಕ ಸುಭಿಕ್ಷವಾಗಿರುವ ರಾಜ್ಯ. ಜನ ಶಾಂತಿಯನ್ನು ಮಾನ್ಯ ಮಾಡುವವರು. ಕರ್ನಾಟಕದ ಅಭ್ಯುದಯ ದೇಶದ ಮೇಲೆ ಉತ್ತಮ ಪರಿಣಾಮ ಬೀರುತ್ತದೆ’ ಎಂದು ಹೇಳಿದರು.

‘ನಮ್ಮ ಸೋಲಿನ ಪರಾಮರ್ಶೆ ಬೇರೆ ಬೇರೆ ಹಂತದಲ್ಲಿ ನಡೆಯುತ್ತಿದೆ. ಎರಡು– ಮೂರು ದಿನಗಳಲ್ಲಿ ಶಾಸಕರ ಮತ್ತು ಪರಾಜಿತ ಅಭ್ಯರ್ಥಿಗಳ ಸಭೆ ಮಾಡುತ್ತೇವೆ. ಅದೇ ಸಭೆಯಲ್ಲಿ ವಿಪಕ್ಷ ನಾಯಕರ ತೀರ್ಮಾನ ಮಾಡುತ್ತೇವೆ. ಬಿಜೆಪಿಯಲ್ಲಿ ನಾಯಕತ್ವದ ಕೊರತೆ ಇಲ್ಲ. ಕೆಲವು ಕ್ಷೇತ್ರಗಳಲ್ಲಿ ರಾಜ್ಯ ಸರ್ಕಾರದ ಕಾರ್ಯಕ್ರಮಗಳನ್ನು ತಲುಪಿಸುವಲ್ಲಿ ನಾವು ಹಿಂದೆ ಬಿದ್ದಿದ್ದು, ಚುನಾವಣಾ ತಯಾರಿಯಲ್ಲಿ ಕಾಂಗ್ರೆಸ್ ಮುಂದಿತ್ತು’ ಎಂದು ಬೊಮ್ಮಾಯಿ ಅವರು ಹೇಳಿದರು.

ಶಿವಕುಮಾರ್ ತವರು ಕ್ಷೇತ್ರ ಕನಕಪುರದಲ್ಲಿ ನೀರವ ಮೌನ

ಪ್ರಜಾವಾಣಿ ವಾರ್ತೆ

ಕನಕಪುರ: ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ಕೈತಪ್ಪಿದ ಹಿನ್ನೆಲೆಯಲ್ಲಿ ಗುರುವಾರ ತಾಲ್ಲೂಕಿನಲ್ಲಿ ನೀರವ ಮೌನ ಆವರಿಸಿತ್ತು.

ಪಕ್ಷ ಸಂಘಟನೆ ಹಾಗೂ ಕಾಂಗ್ರೆಸ್ ಅಧಿಕಾರಕ್ಕೆ ತರಲು ಶ್ರಮಿಸಿದ ಅವರಿಗೆ ಪಕ್ಷದ ಹೈಕಮಾಂಡ್ ಮುಖ್ಯಮಂತ್ರಿ ಸ್ಥಾನ ನೀಡಲಿದೆ ಎಂದು ಕ್ಷೇತ್ರದ ಜನರು, ಕಾರ್ಯಕರ್ತರು ಮತ್ತು ಮುಖಂಡರು ನಂಬಿದ್ದರು.

ಚುನಾವಣಾ ಫಲಿತಾಂಶ ಹೊರಬಿದ್ದ ದಿನದಿಂದಲೂ ತಾಲ್ಲೂಕಿನಲ್ಲಿ ಸಂಭ್ರಮ ಮನೆ ಮಾಡಿತ್ತು. ಆದರೆ, ಬುಧವಾರ ತಡರಾತ್ರಿ ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯಾಗಿ ಮತ್ತು ಶಿವಕುಮಾರ್ ಅವರನ್ನು ಉಪ ಮುಖ್ಯಮಂತ್ರಿಯಾಗಿ ಘೋಷಿಸಿದೆ. ಈ ನಿರ್ಧಾರ ಕ್ಷೇತ್ರದ ಜನರಲ್ಲಿ ನಿರಾಸೆ ಮೂಡಿಸಿದೆ.

ಕನಕಪುರ ಪಟ್ಟಣ ಸೇರಿದಂತೆ ಗ್ರಾಮಾಂತರ ಭಾಗದ ಜನರಲ್ಲಿ ಉತ್ಸಾಹ ಕಂಡುಬರಲಿಲ್ಲ.

ಜನರು ಟಿ.ವಿ ಮುಂದೆ ಕುಳಿತು ಕಾಲ ಕಳೆದರು. ರಾಜಕೀಯ ಹರಟೆ ಸ್ಥಳಗಳು ಹಾಗೂ ರಾಜಕೀಯ ವೇದಿಕೆಗಳು ಖಾಲಿ ಕಂಡವು. ಶಿವಕುಮಾರ್ ಅವರ ಸ್ವಗ್ರಾಮವಾದ ದೊಡ್ಡಾಲಹಳ್ಳಿಯಲ್ಲಿಯೂ ಯಾವುದೇ ಸಂಭ್ರಮ ಕಾಣಿಸಲಿಲ್ಲ.



ಜನ್ಮ ದಿನದ ಹಾರೈಕೆ

ಹಂಗಾಮಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರನ್ನು ಪದ್ಮನಾಭನಗರದ ನಿವಾಸದಲ್ಲಿ ಭೇಟಿ ಮಾಡಿ ಅವರ 91 ನೇ ಹುಟ್ಟು ಹಬ್ಬಕ್ಕೆ ಶುಭ ಕೋರಿದರು. ಈ ಸಂದರ್ಭದಲ್ಲಿ ಬಿಜೆಪಿ ನಾಯಕರಾದ ಆರ್.ಅಶೋಕ, ಗೋವಿಂದಕಾರಜೋಳ, ಶಾಸಕ ಎಚ್.ಡಿ.ರೇವಣ್ಣ, ಜೆಡಿಎಸ್ ನಾಯಕ ಎಚ್.ಎಂ.ರಮೇಶ್ ಗೌಡ ಇದ್ದರು.

ಲೆಕ್ಕ ತಪ್ಪಿದ ನಾಯಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆ ಸಂದರ್ಭದಲ್ಲಿ ಗೆಲುವಿನ ಗಾಳಿ ಯಾವ ಕಡೆಗೆ ಬೀಸುತ್ತಿದೆ ಎಂಬುದನ್ನು ಗ್ರಹಿಸಿ ಆ ಕಡೆಗೆ ತಮ್ಮ ನಡೆ ಬದಲಿಸುವುದು ಹಲವು ರಾಜಕಾರಣಿಗಳಿಗೆ ಕರಗತವಾದ ಕಲೆ.

ಕೆಲವರ ಲೆಕ್ಕಾಚಾರ ಸರಿಯಾಗಿ ಅಡಳಿತಕ್ಕೆ ಬರುವ ಪಕ್ಷಕ್ಕೆ ಹಾರಿ ಅಧಿಕಾರದ ಸನಿಹ ಹೋಗುತ್ತಾರೆ. ಇನ್ನು ಕೆಲವರ ಲೆಕ್ಕಾಚಾರ ತಪ್ಪಾಗಿ ಸಿಗಬಹುದಾಗಿದ್ದ ಅವಕಾಶವನ್ನು ಕಳೆದುಕೊಳ್ಳುತ್ತಾರೆ. ಅಂತಹವರ ಸರದಿಯಲ್ಲಿ ಈ ಬಾರಿ ಸಿ.ಎಂ.ಇಬ್ರಾಹಿಂ, ಬಸವರಾಜ ಹೊರಟ್ಟಿ, ಎ.ಟಿ.ರಾಮಸ್ವಾಮಿ ಮತ್ತು ಎಸ್.ಪಿ. ಮುದ್ದಹನುಮೇಗೌಡ ಪ್ರಮುಖರು.

ಮುಂದೆ ಸಮ್ಮಿಶ್ರ ಸರ್ಕಾರ ಬರಬಹುದು ಎಂದು ಲೆಕ್ಕ ಹಾಕಿ ಸಿ.ಎಂ. ಇಬ್ರಾಹಿಂ ಅವರು ಕಾಂಗ್ರೆಸ್ ಬಿಟ್ಟು ಜೆಡಿಎಸ್ ಸೇರಿ ಆ ಪಕ್ಷದ ಅಧ್ಯಕ್ಷರಾದರು. ಸಮ್ಮಿಶ್ರ ಸರ್ಕಾರ ಬಂದರೆ ಅಧಿಕಾರ ಸಿಗಬಹುದು ಎಂಬ ಲೆಕ್ಕಾಚಾರ ಅವರದ್ದಾಗಿತ್ತು. ಆದರೆ, ಅವರ ಲೆಕ್ಕಾಚಾರ ತಲೆಕೆಳಗಾಗಿದೆ. ಜೆಡಿಎಸ್ ಅತ್ಯಂತ ಕಡಿಮೆ ಸ್ಥಾನವನ್ನು ಗೆದ್ದಿದೆ.

ಹಲವು ಪ್ರಮುಖ ರಾಜ್ಯಗಳಲ್ಲಿ ಬಿಜೆಪಿ ಜಯಭೇರಿ ಬಾರಿಸಿರುವುದನ್ನು ನೋಡಿದ ಬಸವರಾಜ ಹೊರಟ್ಟಿ ಅವರು ರಾಜ್ಯದಲ್ಲೂ ಅದು ಮರುಕಳಿಸಬಹುದು ಎಂಬ ಲೆಕ್ಕಾಚಾರದಲ್ಲಿದ್ದರು. ಇದರಿಂದ ಐದು ವರ್ಷ ಸಭಾಪತಿ ಪಟ್ಟ ಗಟ್ಟಿ ಎಂದು ಭಾವಿಸಿ ಬಿಜೆಪಿ ಸೇರಿದರು. ಹೀಗಾಗಿ, ಮತ್ತೆ ಸಭಾಪತಿ ಹುದ್ದೆ ದಕ್ಕಿತು. ಆದರೆ, ಮುಂದಿನ ದಿನಮಾನಗಳಲ್ಲಿ ವಿಧಾನಪರಿಷತ್‌ನಲ್ಲಿ ಬಿಜೆಪಿ ಬಹುಮತ ಕಳೆದುಕೊಳ್ಳುವ ಕಾರಣ ಸಭಾಪತಿ ಸ್ಥಾನ ಅವರ ಕೈಬಿಟ್ಟು ಹೋಗುವುದು ಖಚಿತ.

ಅರಕಲಗೂಡು ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಅವರು ಜೆಡಿಎಸ್‌ನಲ್ಲಿ ಭ್ರಮನಿರಸನಗೊಂಡಿದ್ದರು. ಬಿಜೆಪಿ ಅಥವಾ ಕಾಂಗ್ರೆಸ್ ಸೇರುವ ಅವಕಾಶ ಮುಂದಿತ್ತು. ಅವರು ಬಿಜೆಪಿ ಆಯ್ಕೆ ಮಾಡಿಕೊಂಡರು. ಅವರು ಲೋಕಸಭೆ ಚುನಾವಣೆಯಲ್ಲಿ ಸೆಣಸುವ ಸಾಧ್ಯತೆ ಇದೆ.

ಕುಣಿಗಲ್ ಕ್ಷೇತ್ರದಿಂದ ಸ್ಪರ್ಧಿಸುವ ಉದ್ದೇಶದಿಂದ ಮುದ್ದಹನುಮೇಗೌಡರು ಕಾಂಗ್ರೆಸ್ ಬಿಟ್ಟು ಬಿಜೆಪಿ ಸೇರಿದರು.

ಕಳೆದ ಲೋಕಸಭೆ ಚುನಾವಣೆಯಲ್ಲಿ ಅವರು ತುಮಕೂರು ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು.ಕಾಂಗ್ರೆಸ್– ಜೆಡಿಎಸ್ ಹೊಂದಾಣಿಕೆಯಿಂದ ಅವರಿಗೆ ಟಿಕೆಟ್ ಕೈತಪ್ಪಿತು. ಕುಣಿಗಲ್ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಸಿಗುವುದಿಲ್ಲ ಎಂಬುದು ಖಚಿತವಾಗಿ ಬಿಜೆಪಿ ಸೇರಿದರು. ಆ ಪಕ್ಷವೂ ಟಿಕೆಟ್ ಕೊಡಲಿಲ್ಲ.

ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಣೆ: ತನಿಖೆಗೆ ತ್ರಿಸದಸ್ಯರ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಓಪನ್ ಸ್ಕೂಲಿಂಗ್ (ಎನ್‌ಐಒಎಸ್) ನೀಡಿದ ಪ್ರಮಾಣ ಪತ್ರಗಳು ನಕಲಿ ಎಂದು ಸಾಬೀತಾದ ಕಾರಣ 51 ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸಲಾಗಿದೆ. ಈ ಪ್ರಕರಣದ ತನಿಖೆಗಾಗಿ ಕಾರ್ಯಕಾರಿ ಪರಿಷತ್ತಿನ ಮೂವರು ಸದಸ್ಯರನ್ನೊಳಗೊಂಡ ಸಮಿತಿ ರಚಿಸಲಾಗಿದೆ’ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ(ವಿಟಿಯು) ಕುಲಪತಿ ಪ್ರೊ.ಎಸ್. ವಿದ್ಯಾಶಂಕರ ಅವರು ಹೇಳಿದರು.

ಇಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪ್ರವೇಶ ನಿರಾಕರಿಸಿದ್ದರೂ ವಿದ್ಯಾರ್ಥಿಗಳು ಯಾವುದೇ ಕಾರಣ ಕೇಳಿಲ್ಲ. ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಈ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿದ ಕಾಲೇಜುಗಳಿಗೆ ಸಹ ನೋಟಿಸ್ ನೀಡುತ್ತೇವೆ. ಅಕ್ರಮ ಸಾಬೀತಾದರೆ ಈ ವಿದ್ಯಾರ್ಥಿಗಳ ಪದವಿ ವಾಪಸ್ ಪಡೆಯುತ್ತೇವೆ. ಇದರೊಂದಿಗೆ ಹಿಂದಿನ ಮೂರು ವರ್ಷಗಳ ದಾಖಲೆಗಳನ್ನೂ ಪರಿಶೀಲಿಸುತ್ತೇವೆ’ ಎಂದು ತಿಳಿಸಿದರು.

‘ವಿಟಿಯುದಲ್ಲಿ ನಿತ್ಯವೂ ಪರಿಶೀಲನೆಗಾಗಿ ದಾಖಲೆಗಳನ್ನು ಪಡೆಯಲಾಗುತ್ತದೆ. ಆಗ ಎಂಜಿನಿಯರಿಂಗ್ ಕೋರ್ಸ್‌ನ ಒಂದು ನಕಲಿ ಪ್ರಮಾಣ ಪತ್ರವಾದರೂ ಬೆಳಕಿಗೆ ಬರುತ್ತದೆ. ಈ ಪ್ರಮಾಣ ಪತ್ರ ಕುರಿತು ಪರಿಶೀಲಿಸಲು ಸಂಬಂಧಿತರಿಗೆ ಪತ್ರ ಬರೆಯುತ್ತೇವೆ. ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುವ ನಿರ್ಧಾರವನ್ನು ಅವರಿಗೆ ಬಿಡುತ್ತೇವೆ’ ಎಂದು ಹೇಳಿದರು.

ಆನ್‌ಲೈನ್ ಕೋರ್ಸ್ ಆರಂಭ: ‘ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 12ರಿಂದ 15 ವಿಭಾಗಗಳಲ್ಲಿ ಆನ್‌ಲೈನ್ ಕೋರ್ಸ್‌ಗಳನ್ನು ಶೀಘ್ರ ಆರಂಭಿಸಲಾಗುವುದು. ವಿಶ್ವದ ಯಾವುದೇ ಭಾಗದಲ್ಲಿರುವ ವಿದ್ಯಾರ್ಥಿಗಳು ಈ ಕೋರ್ಸ್‌ಗಳಿಗೆ ಪ್ರವೇಶ ಪಡೆಯಬಹುದು. ತಾವು ಇದ್ದ ಸ್ಥಳದಿಂದಲೇ ಪರೀಕ್ಷೆಗೆ ಹಾಜರಾಗಲು ಅವಕಾಶವಿದೆ’ ಎಂದು ಹೇಳಿದರು.

‘ನವದೆಹಲಿಯ ಆಲ್ ಇಂಡಿಯಾ ಕೌನ್ಸಿಲ್ ಫಾರ್ ಟೆಕ್ನಿಕಲ್ ಎಜುಕೇಷನ್ (ಎಐಸಿಟಿಇ) ಪರಿಶೀಲನೆ ನಡೆಸಿದೆ. ಕೋರ್ಸ್‌ಗಳನ್ನು ಆರಂಭಿಸಲು ಅನುಮತಿಗಾಗಿ ಕಾಯುತ್ತಿದ್ದೇವೆ. ಅನುಮತಿ ಸಿಕ್ಕರೆ ಈ ಶೈಕ್ಷಣಿಕ ವರ್ಷದಿಂದಲೇ ಆನ್‌ಲೈನ್ ಕೋರ್ಸ್ ಆರಂಭಿಸಲಾಗುವುದು’ ಎಂದು ತಿಳಿಸಿದರು.

‘ಆನ್‌ಲೈನ್‌ನಲ್ಲಿ ಕಲಿಕಾ ಸಾಮಗ್ರಿ ಲಭ್ಯವಾಗಲಿದೆ. ಬೋಧಕರು ತಮ್ಮ ಉಪನ್ಯಾಸಗಳನ್ನು ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಿ, ಈ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ತಲುಪಿಸಲಿದ್ದಾರೆ. ಬೇರೆ ವಿಶ್ವವಿದ್ಯಾಲಯಗಳಿಗೆ ಹೋಲಿಸಿದರೆ ಶುಲ್ಕವೂ ಕಡಿಮೆ ಇರಲಿದೆ. ಸದ್ಯ 12ರಿಂದ 15 ವಿಭಾಗಗಳಲ್ಲಿ ಕೋರ್ಸ್ ಪರಿಚಯಿಸಲು ಯೋಜಿಸಿದ್ದೇವೆ. ಅದರ ವಿವರಗಳನ್ನು ಶೀಘ್ರ ತಿಳಿಸುತ್ತೇವೆ’ ಎಂದು ಹೇಳಿದರು.

‘ಅವಕಾಶವಾದಿಯಾಗಿದ್ದರೆ ಮತ್ತೆ ಸಚಿವನಾಗುತ್ತಿದ್ದೆ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ‘ಸರ್ಕಾರ ಬದಲಾವಣೆಯಿಂದ ಕಾರ್ಯಕರ್ತರು ಆತಂಕಕ್ಕೆ ಒಳಗಾಗಬೇಕಿಲ್ಲ. ಪರಸ್ಪರ ಆತ್ಮಾವಲೋಕನ ಮಾಡಿಕೊಂಡು ಮುಂಬರುವ ಚುನಾವಣೆಗೆ ಸಿದ್ಧರಾಗಬೇಕು’ ಎಂದು ಯಶವಂತಪುರ ಕ್ಷೇತ್ರ ಶಾಸಕ ಎಸ್.ಟಿ. ಸೋಮಶೇಖರ್ ಹೇಳಿದರು.

ಕೆಂಗೇರಿ ಉಪನಗರದ ಬಂಡೇಶ್ವರ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಕಾರ್ಯಕರ್ತರಿಗೆ ಅಭಿನಂದನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ವೈಯಕ್ತಿಕ ಲಾಭಕ್ಕಾಗಿ ಬಿಜೆಪಿಗೆ ಸೇರ್ಪಡೆಯಾಗಲಿಲ್ಲ. ಅವಕಾಶವಾದಿಯಾಗಿದ್ದರೆ ಪಕ್ಷಾಂತರ ಮಾಡಿ ಕಾಂಗ್ರೆಸ್ ಪಕ್ಷಕ್ಕೆ ಮತ್ತೆ ಜಿಗಿಯುತ್ತಿದೆ. ಸಹಕಾರ ಸಚಿವನಾಗಿ ಮತ್ತೊಮ್ಮೆ ಬರುತ್ತಿದ್ದೆ’ ಎಂದು ಹೇಳಿದರು.

‘ಚುನಾವಣೆ ಎನ್ನುವುದು ಕ್ರಿಕೆಟ್ ಆಟವಲ್ಲ. ಅದು ಫುಟ್ಬಾಲ್‌ನಂತೆ. ಇಲ್ಲಿ ಎರಡು ತಂಡದ ಎಲ್ಲಾ ಆಟಗಾರರು ಕಣದಲ್ಲಿರುತ್ತಾರೆ. ಯಾರು ಯಾರ ಪರ ಗೋಲ್ ಬಾರಿಸಲಿದ್ದಾರೆ ಎಂಬುದೇ ಕೆಲವೊಮ್ಮೆ ನಿಗೂಢ’ ಎಂದು ಹೇಳಿದರು.

‘ಸ್ವಪಕ್ಷೀಯರು, ಬೆನ್ನ ಹಿಂದೆ ನಿಂತವರೇ ಗೆಲುವಿಗೆ ಅಡ್ಡಗಾಲು ಹಾಕಿದರೆ ನಂಬುವುದಾದರೂ ಯಾರನ್ನೂ’ ಎಂದು ನುಡಿದರು.



ಸೋಮಶೇಖರ್

‘ಜೆಡಿಎಸ್ ನನ್ನ ವಿರುದ್ಧ ಹಲವು ಅಸ್ತ್ರಗಳನ್ನು ಪ್ರಯೋಗಿಸಿತು. ಭ್ರಷ್ಟಾಚಾರ, ಪಕ್ಷಾಂತರದ ಗುಲ್ಲು, ಸಿ.ಡಿ ಅಸ್ತ್ರ, ನೀತಿ ಸಂಹಿತೆ ಉಲ್ಲಂಘನೆ, ಅಪಪ್ರಚಾರದಂತಹ ಹತ್ತಾರು ವಾಮ ಮಾರ್ಗದ ಮೂಲಕ ಹಣಿಯಲು ಪ್ರಯತ್ನಿಸಿತು. ಆದರೆ, ನಿಷ್ಠಾವಂತ ಕಾರ್ಯಕರ್ತರ ಆಶೀರ್ವಾದದಿಂದ ಜಯ ಸಾಧ್ಯವಾಯಿತು’ ಎಂದರು.

‘ಎಂದಿಗೂ ನಾನು ಜಾತಿವಾದ ಮಾಡಲಿಲ್ಲ. ಒಬ್ಬರ ಮೇಲೆ ಒಬ್ಬರನ್ನು ಎತ್ತಿಕಟ್ಟುವ ಕೆಲಸ ಮಾಡಲಿಲ್ಲ. ಮೂಲ ಕಾಂಗ್ರೆಸ್ಸಿಗರು ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಭೇದ ಭಾವ ಮಾಡಿಲ್ಲ. ಅಪ ಪ್ರಚಾರಗಳಿಗೆ ಕಿವಿಗೊಡದೆ ಕಾರ್ಯಕರ್ತರು, ಮುಖಂಡರು ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಮುಂದಿನ ಚುನಾವಣೆಗಳಿಗೆ ಅಣಿಯಾಗಬೇಕಿದೆ’ ಎಂದು ಕಿವಿ ಮಾತು ಹೇಳಿದರು.

‘ನನ್ನಲ್ಲಿ ಯಾವುದೇ ಕೊರತೆಗಳಿದ್ದರೆ ಬಹಿರಂಗವಾಗಿ ತಿಳಿಸಿ. ತಿದ್ದಿಕೊಳ್ಳಲು ನಾನು ಈಗಲೂ ಸಿದ್ಧ’ ಎಂದು ಹೇಳಿದರು.

ನ್ಯಾನೋ ತಂತ್ರಜ್ಞಾನದಿಂದ ಉಪಕರಣ ಅಭಿವೃದ್ಧಿ: ಡಾ.ಮನಮೋಹನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನ್ಯಾನೊ ತಂತ್ರಜ್ಞಾನದ ಮೂಲಕ ಎಂಜಿನಿಯರಿಂಗ್ ಕ್ಷೇತ್ರಕ್ಕೆ ಬಳಕೆ ಮಾಡುವ ಉಪಕರಣಗಳನ್ನು ಅಭಿವೃದ್ಧಿ ಪಡಿಸಬಹುದಾಗಿದೆ' ಎಂದು ಏಷ್ಯನ್ ಕಾಂಕ್ರೀಟ್ ಫೆಡರೇಷನ್ ಉಪಾಧ್ಯಕ್ಷ ಡಾ.ಮನಮೋಹನ್ ಆರ್. ಕಲ್‌ಗಾಲ್ ಹೇಳಿದರು.

ರಾಜ್ಯ ಒಕ್ಕಲಿಗರ ಸಂಘ ಮತ್ತು ಬೆಂಗಳೂರು ತಾಂತ್ರಿಕ ಮಹಾ ವಿದ್ಯಾಲಯ(ಬಿಐಟಿ) ಆಯೋಜಿಸಿದ್ದ ಎಂಜಿನಿಯರಿಂಗ್ ಮತ್ತು ನಿರ್ವಹಣಾ ಬಳಕೆಗೆ ಅಗತ್ಯವಿರುವ ಅತ್ಯಾಧುನಿಕ ಉಪಕರಣಗಳ ಕುರಿತ ಅಂತರರಾಷ್ಟ್ರೀಯ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

'ಬೇರೆ ಬೇರೆ ಹಿನ್ನೆಲೆಯಿಂದ ಬರುವ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ, ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಉಪಯೋಗಿಸುವ ಅತ್ಯಾಧುನಿಕ ಉಪಕರಣಗಳ ಮಹತ್ವ ಕುರಿತು ತರಬೇತಿ ನೀಡುವ ಅಗತ್ಯವಿದೆ’ ಎಂದು ತಿಳಿಸಿದರು.

‘ಇತ್ತೀಚಿನ ದಿನಗಳಲ್ಲಿ ಎಂಜಿನಿಯರಿಂಗ್ ವಿಭಾಗದ ಅತ್ಯಾಧುನಿಕ ಉಪಕರಣಗಳ ಕುರಿತಂತೆ ಭಾರಿ ನಿರೀಕ್ಷೆಗಳಿವೆ. ಅವುಗಳನ್ನು ಸರಿದೂಗಿಸುವ ಮಟ್ಟಕ್ಕೆ ಸಂಶೋಧನೆ ಮಾಡುವ ಅಗತ್ಯ ಇದೆ’ ಎಂದರು.

ಭಾರತೀಯ ವಿಜ್ಞಾನ ಸಂಸ್ಥೆಯ ಸೆಂಟರ್ ಫಾರ್ ಎಕ್ಸಲೆನ್ಸ್ ಇನ್ ಹೈಪರ್‌ಸಾನಿಕ್‌ನ ಅಧ್ಯಕ್ಷ ಪ್ರೊ. ಜಿ.ಜಗದೀಶ್ ಮಾತನಾಡಿ, ‘ಪ್ರಕೃತಿ ಜತೆಗೆ ನಾವು ಕಲಿಯಬೇಕು. ನ್ಯಾನೊ ತಂತ್ರಜ್ಞಾನದ ರಚನಾತ್ಮಕ ಪ್ರಕ್ರಿಯೆ ಕುರಿತು ಅಧ್ಯಯನ ನಡೆಸಬೇಕಾಗಿದೆ. ಈ ಮೂಲಕ ಅದ್ಭುತ ಸಾಧನೆಗಳನ್ನು ಮಾಡಬಹುದು’ ಎಂದು ಹೇಳಿದರು.

ಬಿಐಟಿ ಅಧ್ಯಕ್ಷ ಎಂ.ಪುಟ್ಟಸ್ವಾಮಿ ಮಾತನಾಡಿ, ‘ಪ್ರಾಧ್ಯಾಪಕರು ಬೋಧನೆಗೆ ಸೀಮಿತವಾಗದೇ ವಿದ್ಯಾರ್ಥಿಗಳನ್ನು ಸಂಶೋಧನೆಗೆ ಅಣಿಗೊಳಿಸಬೇಕು. ಮೌಲ್ಯಯುತ ಶಿಕ್ಷಣ ನೀಡಿದಾಗ ಮಾತ್ರ ಬಲಿಷ್ಠ ರಾಷ್ಟ್ರ ಕಟ್ಟಲು ಸಾಧ್ಯವಾಗುತ್ತದೆ’ ಎಂದು ಹೇಳಿದರು.

ಎನ್‌ಎಎಲ್‌ನ ಹಿರಿಯ ವಿಜ್ಞಾನಿ ಡಾ.ಕೆ. ವೆಂಕಟೇಶ್ವರಲು ಮಾತನಾಡಿದರು. ರಾಜ್ಯ ಒಕ್ಕಲಿಗರ ಸಂಘದ ಸಹಾಯಕ ಕಾರ್ಯದರ್ಶಿ ರಾಘವೇಂದ್ರ, ನಿರ್ದೇಶಕ ಲೋಕೇಶ್ ನಾಗರಾಜಯ್ಯ, ಬಿಐಟಿಯ ಪ್ರಾಂಶುಪಾಲ ಡಾ.ಎಂ.ಯು. ಅಶ್ವತ್ಥ್, ಉಪ ಪ್ರಾಂಶುಪಾಲ ಡಾ.ಜೆ. ಪ್ರಕಾಶ್, ಡೀನ್‌ಗಳಾದ ಡಾ.ಕೆ.ಎಂ. ರೂಪಾ, ಡಾ.ಎಚ್.ಬಿ. ಬಾಲಕೃಷ್ಣ, ಮೆಕಾನಿಕಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ.ಶ್ರೀರಾಮರೆಡ್ಡಿ ಇದ್ದರು.



ಅತ್ಯಾಧುನಿಕ ಉಪಕರಣಗಳ ಕುರಿತ ಅಂತರರಾಷ್ಟ್ರೀಯ ಸಮ್ಮೇಳನವನ್ನು ಏಷ್ಯನ್ ಕಾಂಕ್ರೀಟ್ ಫೆಡರೇಷನ್ ಉಪಾಧ್ಯಕ್ಷ ಡಾ.ಮನಮೋಹನ್ ಆರ್. ಕಲ್‌ಗಾಲ್ ಉದ್ಘಾಟಿಸಿದರು.

ನ್ಯಾಯಬೆಲೆ ಅಂಗಡಿಗೆ ಕಾಡಾನೆ ದಾಳಿ

ಪ್ರಜಾವಾಣಿ ವಾರ್ತೆ

ಸಕಲೇಶಪುರ: ಸಮೀಪದ ಕೊಲ್ಲಹಳ್ಳಿ ಗ್ರಾಮದಲ್ಲಿ ಗುರುವಾರ ಸಂಜೆ 2 ಆನೆಗಳು ಪಡಿತರ ಅಂಗಡಿಗೆ ನುಗ್ಗಿದ ದಾಂದಲೆ ನಡೆಸಿವೆ.

ಅಂಗಡಿ ಮುಂಭಾಗ ಜನ ಸಾಲುಗಟ್ಟಿ ಪಡಿತರ ಖರೀದಿಸುತ್ತಿದ್ದಾಗ ಆನೆಗಳು ಏಕಾಏಕಿ ನುಗ್ಗಿ, ಚೀಲದಲ್ಲಿದ್ದ ಅಕ್ಕಿಯನ್ನು ತಿಂದು ಸೊಂಡಿಲಲ್ಲಿ ಎಸೆದು ಹಾನಿ ಮಾಡಿವೆ. ಬೆಂಗಳೂರು–ಮಂಗಳೂರು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿಯೇ ಇರುವ ಅಂಗಡಿ ಮುಂಭಾಗವೇ ಘಟನೆ ನಡೆದಿದ್ದರಿಂದ ಹೆದ್ದಾರಿಯಲ್ಲಿ ಸಂಚರಿಸುತ್ತಿದ್ದ ವಾಹನಗಳ ಸಂಚಾರವೂ ಸ್ಥಗಿತಗೊಂಡಿತ್ತು. ಅವೇ ಆನೆಗಳು ಸುತ್ತಲಿನ ಗ್ರಾಮಗಳಲ್ಲಿ ಬೆಳೆ ಹಾಗೂ ಆಸ್ತಿಪಾಸ್ತಿ ಹಾನಿ ಮಾಡಿವೆ.

‘ಆನೆಗಳನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆ ಕಾರ್ಯಾಚರಣೆ ಹಮ್ಮಿಕೊಂಡಿತ್ತು. ಪಳಗಿದ ಆನೆಗಳು ಬರುವುದು ವಿಳಂಬವಾಗಿದ್ದರಿಂದ ಕಾರ್ಯಾಚರಣೆಯನ್ನು ಶುಕ್ರವಾರ ಬೆಳಿಗ್ಗೆ ಆರಂಭಿಸಲು ನಿರ್ಧರಿಸಲಾಗಿದೆ’ ಎಂದು ಡಿಎಫ್‌ಒ ಕೆ. ಹರೀಶ್ ತಿಳಿಸಿದ್ದಾರೆ.

‘ಸಂಬಂಧ ಬೆಸೆಯುವ ಕಲಾ ಬೇರು’

‘ದೇವದಾಸಿ ಮತ್ತು ಜೋಗತಿ ಪರಂಪರೆ’ ವಿಚಾರ ಸಂಕಿರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಲೆಯ ಬೇರುಗಳು ಮನುಷ್ಯ ಸಂಬಂಧಗಳನ್ನು ಬೆಸೆಯುತ್ತವೆ’ ಎಂದು ನಿರ್ದೇಶಕ ಟಿ.ಎಸ್. ನಾಗಾಭರಣ ಹೇಳಿದರು.

ಕೆಎಲ್‌ಇ ಕಾನೂನು ಮಹಾವಿದ್ಯಾಲಯದ ಪರಂಪರೆ ಕೂಟ, ರಾಮನಗರದ ಸಾಂಸ್ಕೃತಿಕ ಪರಂಪರೆಯ ಸಂಶೋಧನಾ ಕೇಂದ್ರ, ಬೆಂಗಳೂರು ಹಿಸ್ಟೋರಿಯನ್ಸ್ ಸೊಸೈಟಿ ಹಾಗೂ ಇತಿಹಾಸ ದರ್ಪಣದ ಸಹಯೋಗದಲ್ಲಿ ನಡೆದ ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನ ಹಾಗೂ ‘ದೇವದಾಸಿ ಮತ್ತು ಜೋಗತಿ ಪರಂಪರೆ’ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

‘ಸಾಹಿತ್ಯ ಹಾಗೂ ಸಂಗೀತ ನಿಮ್ಮೊಳಗಿನ ಭಾವನೆಗಳನ್ನು ಸ್ಫುರಿಸುವಾಗ ಅವರು ಯಾರು? ಯಾವ ಜಾತಿ ಎಂಬುದನ್ನು ನೋಡುವುದಿಲ್ಲ’ ಎಂದು ಹೇಳಿದರು.

‘ಇಂದು ಸಾಕಷ್ಟು ಪರಂಪರೆಗಳು ವಸ್ತು ಸಂಗ್ರಹಾಲಯ ಸೇರಿವೆ. ಹಳ್ಳಿಗಳಲ್ಲಿದ್ದ ಕಲೆಯ ಬೇರುಗಳು ಮುಂದಿನ ತಲೆಮಾರಿಗೆ ಸಿಗುವುದು ಹೇಗೆ? ಮುಂದಿನ ತಲೆಮಾರಿಗೆ ಕಲೆಗಳು, ಪರಂಪರೆಗಳು ಕಂಡುಬರುವುದೇ ವಸ್ತು ಸಂಗ್ರಹಾಲಯಗಳಲ್ಲಿ’ ಎಂದು ಅಭಿಪ್ರಾಯಪಟ್ಟರು.



ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನ ಹಾಗೂ ‘ದೇವದಾಸಿ ಮತ್ತು ಜೋಗತಿ ಪರಂಪರೆ’ ವಿಚಾರ ಸಂಕಿರಣದಲ್ಲಿ ನಿರ್ದೇಶಕ ಟಿ.ಎಸ್‌.ನಾಗಾಭರಣ ಹಾಗೂ ಜಾನಪದ ಕಲಾವಿದೆ ಮಂಜಮ್ಮ ಜೋಗತಿ ಅವರು 'ಪರಂಪರ ಸಂಚಾರ' ವಾರ್ತಾಪತ್ರವನ್ನು ಬಿಡುಗಡೆ ಮಾಡಿದರು.

‘ಸಮಾಜ ಸಾಂಸ್ಕೃತಿಕ ನೆಲೆಗಟ್ಟನ್ನು ಭದ್ರಪಡಿಸಿಕೊಳ್ಳದೇ ಹೋದರೆ ಛಿದ್ರ ಛಿದ್ರವಾಗಿ ಹೋಗಲಿದೆ. ಯಾವುದೇ ಕಲಾ ಪ್ರಕಾರಗಳು ಎಲ್ಲರನ್ನೂ ಒಳಗೊಳ್ಳುತ್ತವೆ. ನಾಳೆಯ ಬಗ್ಗೆ ಪ್ರೀತಿ ಉಂಟು ಮಾಡುತ್ತದೆ’ ಎಂದು ಹೇಳಿದರು.

ಜಾನಪದ ಕಲಾವಿದೆ ಮಂಜಮ್ಮ ಜೋಗತಿ ಅವರು ಮಾತನಾಡಿ, ‘ದೇವರು ದೇವಾಲಯ, ಮಸೀದಿ, ಚರ್ಚ್‌ಗಳಲ್ಲಿ ಇಲ್ಲ. ನಾವು ಮಾಡುವ ಕೆಲಸಗಳಲ್ಲಿ ದೇವರಿದ್ದಾನೆ’ ಎಂದು ಹೇಳಿದರು.

‘ದೇವದಾಸಿ ಸಂಪ್ರದಾಯ: ದೇವರ ಹೆಸರಿನಲ್ಲಿ ದಬ್ಬಾಳಿಕೆ’ ವಿಷಯ ಕುರಿತು ಪ್ರೊ.ಎಂ.ಜಮುನಾ, ‘ದೇವಾಲಯದ ವಾಸ್ತುಶಿಲ್ಪದ ವಿಕಾಸದಲ್ಲಿ ದೇವದಾಸಿಯರು’ ಕುರಿತು ರೇಖಾರಾವ್ ಉಪನ್ಯಾಸ ನೀಡಿದರು.

ಕೆ.ಎಲ್‌.ಇ ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲ ಪ್ರೊ. ಜೆ.ಎಂ. ಮಲ್ಲಿಕಾರ್ಜುನಯ್ಯ ಅಧ್ಯಕ್ಷತೆ ವಹಿಸಿದ್ದರು. ಮಂಜಮ್ಮ ಜೋಗತಿ ಅವರ ಜೀವನಾಧಾರಿತ ಏಕವ್ಯಕ್ತಿ ನಾಟಕ ‘ಮಾತಾ’ ಪ್ರದರ್ಶನಗೊಂಡಿತು.

ಕಗ್ಗದಾಸಪುರ: ವಾಹನ ಸವಾರರಿಗೆ ನಿತ್ಯ ನರಕಯಾತನೆ

ರೈಲ್ವೆ ಗೇಟ್ ಮೇಲ್ಸೇತುವೆ ನನೆಗುದಿಗೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ವಿಜ್ಞಾನನಗರ ಸಮೀಪದ ಕಗ್ಗದಾಸಪುರದ ರೈಲ್ವೆ ಗೇಟ್‌ಗೆ ಮೇಲ್ಸೇತುವೆ ನಿರ್ಮಿಸುವ ಯೋಜನೆ ರೂಪಿಸಿ ನಾಲ್ಕೈದು ವರ್ಷಗಳೇ ಕಳೆದರೂ ಕಾಮಗಾರಿಗೆ ಚಾಲನೆ ದೊರೆಯದೆ ನನೆಗುದಿಗೆ ಬಿದ್ದಿದೆ. ಇದರಿಂದಾಗಿ ನಿತ್ಯ ಸಂಚರಿಸುವ ವಾಹನ ಸವಾರರಿಗೆ ತೀವ್ರ ತೊಂದರೆಯಾಗಿದೆ.

ಟಿನ್ ಫ್ಯಾಕ್ಟರಿ, ಎಚ್‌ಎಎಲ್ ಸಿ.ವಿ. ರಾಮನ್ ನಗರ, ಬಸವನಗರ, ಬಸವೇಶ್ವರನಗರ, ರಮೇಶ್ ನಗರ ಸೇರಿದಂತೆ ವಿವಿಧೆಡೆ ತೆರಳಲು ಸಂಪರ್ಕ ಕೊಂಡಿಯಾಗಿರುವ ಈ ಮಾರ್ಗದಲ್ಲಿ ಕಗ್ಗದಾಸಪುರದ ಬಳಿ ಬರುವ ರೈಲ್ವೆ ಹಳಿಯಿಂದಾಗಿ ರೈಲ್ವೆ ಹಳಿ ದಾಟಲು ನಿತ್ಯ ವಾಹನ ಸವಾರರು ಹರಸಾಹಸ ಪಡುವಂತಾಗಿದೆ.

ಕೆ.ಆರ್.ಪುರ ಮತ್ತು ಸಿ.ವಿ ರಾಮನ್ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಗೆ ಬರುವ ರೈಲ್ವೆ ಹಳಿ ಎರಡು ಕ್ಷೇತ್ರದಲ್ಲಿ ಹಾದು ಹೋಗುತ್ತದೆ. ಎಚ್‌ಎಎಲ್, ಡಿಆರ್‌ಡಿಒ, ಬೆಮೆಲ್, ಎಚ್‌ಎಎಲ್ ಸೇರಿದಂತೆ ಸರ್ಕಾರಿ ಸ್ವಾಮ್ಯದ ಪ್ರತಿಷ್ಠಿತ ಕಾರ್ಖಾನೆಗಳು ಇಲ್ಲಿವೆ. ಹತ್ತಾರು ಶಾಲಾ ಕಾಲೇಜು ಹೋಟೆಲ್, ಆಸ್ಪತ್ರೆ, ಮಾಲ್‌ಗಳು ಈ ಪ್ರದೇಶದಲ್ಲಿ ಕಾರ್ಯ ಚಟುವಟಿಕೆಗಳು ನಡೆಸುತ್ತಿವೆ. ಆದರೆ, ಈ ರೈಲ್ವೆ ಹಳಿಯಿಂದಾಗಿ ನಿತ್ಯ ಸಂಚಾರ ನರಕಸದೃಶವಾಗಿದೆ.

ಉದ್ಯೋಗಿಗಳು, ವಿದ್ಯಾರ್ಥಿಗಳು, ಮಹಿಳೆಯರು ದೈನಂದಿನ ಚಟುವಟಿಕೆಗಳಿಗೆ ಇಲ್ಲಿನ ರೈಲ್ವೆ ಹಳಿ ದಾಟಿ ಹೋಗಬೇಕು. ರೈಲ್ವೆ ಗೇಟ್ ಹಾಕಿದರೆ ಸಂಚಾರದಟ್ಟಣೆ ಉಂಟಾಗುತ್ತದೆ. ಹೀಗಾಗಿ ಸಕಾಲಕ್ಕೆ ನಿಗದಿತ ಸ್ಥಳಗಳಿಗೆ ತೆರಳಲು ಸಾಧ್ಯವಾಗುತ್ತಿಲ್ಲ ಎಂದು ವಾಹನ ಸವಾರ ರಮೇಶ್ ದೂರಿದರು.

ಪ್ರತಿದಿನ ಈ ಮಾರ್ಗದಲ್ಲಿ 30ಕ್ಕೂ ಹೆಚ್ಚು ರೈಲುಗಳು ಸಂಚರಿಸುತ್ತವೆ. ರೈಲು ಸಂಚಾರದ ವೇಳೆ ಗೇಟ್ ಹಾಕಲಾಗುತ್ತದೆ. ಪರಿಣಾಮ ಸಂಚಾರ ದಟ್ಟಣೆ ಉಂಟಾಗುತ್ತದೆ ಎಂದು ಹೇಳಿದರು.

ರೈಲು ಬರುವ ವೇಳೆ ಗೇಟ್ ಹಾಕಿದಾಗ ಎರಡು ಬದಿಗಳಲ್ಲಿ ಕಿಲೋ ಮೀಟರ್‌ಗಳಷ್ಟು ದೂರ ದ್ವಿಚಕ್ರ ವಾಹನ, ಆಟೋ, ಕಾರು ಗೂಡ್ಸ್ ಟೆಂಪೋ ಸೇರಿ ಸಾವಿರಾರು ವಾಹನಗಳು ನಿಲುಗಡೆ ಆಗುವುದರಿಂದ ವಾಹನ ಸವಾರರು ನಿತ್ಯ ನರಕಯಾತನೆಯ ಅನುಭವಿಸುವ ಅನಿವಾರ್ಯತೆ ಉಂಟಾಗುತ್ತದೆ. ರೈಲು ತೆರಳಿದ ನಂತರ ಗೇಟ್ ತೆಗೆಯುತ್ತಿದಂತೆ ಅವಸರದಲ್ಲಿ ನುಗ್ಗುವ ವಾಹನಗಳ ನಡುವೆ ಅಪಘಾತ ಮಾಮೂಲಿಯಾಗಿದೆ ಎಂದು ಕಗ್ಗದಾಸಪುರದ ಸ್ಥಳೀಯ ನಿವಾಸಿ ಸುನೀಲ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಸಂಚಾರ ದಟ್ಟಣೆಯಿಂದ ರೋಸಿಹೋಗುವ ವಾಹನ ಸವಾರರು ಸದಾ ಜಗಳಕ್ಕಿಳಿಯುತ್ತಾರೆ. ಪರಿಸ್ಥಿತಿಯನ್ನು ತಿಳಿಗೊಳಿಸಲು ಹಾಗೂ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಪೊಲೀಸರು ಪರದಾಡುವ ಪರಿಸ್ಥಿತಿ ಏರ್ಪಡುತ್ತಿದೆ. ಕಗ್ಗದಾಸಪುರ ಬಳಿ ರೈಲ್ವೆ ಮೇಲ್ಸೇತುವೆ ನಿರ್ಮಿಸಲು ಸಿದ್ದರಾಮಯ್ಯ ಅವರು ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಯೋಜನೆಗೆ ಅನುಮೋದನೆ ದೊರೆತಿದೆ. ಯೋಜನೆಗೆ ಸಂಬಂಧಿಸಿದ ನೀಲ ನಕ್ಷೆ ರೂಪಿಸಲಾಗಿದೆ. ಆದರೆ ಕೆಲ ಪ್ರಭಾವಿಗಳ ಒತ್ತಡದಿಂದ ಮೇಲ್ಸೇತುವೆ ನಿರ್ಮಾಣ ಕಾರ್ಯ ನನೆಗುದಿಗೆ ಬಿದ್ದಿದೆ ಎಂದು ಆರೋಪಿಸಿದರು.



ಕಗ್ಗದಾಸಪುರ ರೈಲ್ವೆ ಹಳಿಗೆ ಗೇಟ್ ಹಾಕಿದಾಗ ವಾಹನ ದಟ್ಟಣೆ

ಗಂಗಾ ಕಲ್ಯಾಣ ಯೋಜನೆಯಲ್ಲಿ ಅಕ್ರಮ: ನಕಲಿ ದಾಖಲೆ ನೀಡಿ ಟೆಂಡರ್

ಅಧಿಕಾರಿಗಳ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- 2019–20 ಹಾಗೂ 2020–21ನೇ ಸಾಲಿನಲ್ಲಿ ದುರುಪಯೋಗ
- ಎಲ್ಲಾ ದಾಖಲೆ ಪರಿಶೀಲಿಸಿದ ಬಳಿಕ ಆರೋಪಿಗಳಿಗೆ ನೋಟಿಸ್
- ವಿಧಾನಸೌಧ ಠಾಣೆಯಲ್ಲಿ ದೂರು ದಾಖಲು

ಬೆಂಗಳೂರು: ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಗಂಗಾ ಕಲ್ಯಾಣ ಯೋಜನೆಯಲ್ಲಿ ಅಕ್ರಮ ನಡೆದಿರುವ ಆರೋಪ ವ್ಯಕ್ತವಾಗಿದ್ದು, ನಿಗಮದ ಮೂವರು ಅಧಿಕಾರಿಗಳ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಿಗಮದ ವ್ಯವಸ್ಥಾಪಕ ನಿರ್ದೇಶಕ ಪಿ. ನಾಗೇಶ್ ಅವರು ಅಕ್ರಮದ ಬಗ್ಗೆ ದೂರು ನೀಡಿದ್ದಾರೆ. ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಸುರೇಶ್, ಹಿಂದಿನ ಮುಖ್ಯ ಪ್ರಧಾನ ವ್ಯವಸ್ಥಾಪಕ ಪ್ರಕಾಶ್ ಎಂ. ಹರಗಾಪುರೆ ಹಾಗೂ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆರ್.ಟಿ. ಸೀತಾರಾಮ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತೀ ಸಣ್ಣ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಗಂಗಾ ಕಲ್ಯಾಣ ಯೋಜನೆ ಜಾರಿಗೆ ತರಲಾಗಿದೆ. ಇದೇ ಯೋಜನೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ಸದ್ಯದ ವ್ಯವಸ್ಥಾಪಕ ನಿರ್ದೇಶಕ ಕೆಲ ದಾಖಲೆ ನೀಡಿದ್ದಾರೆ. ಇನ್ನಷ್ಟು ದಾಖಲೆಗಳನ್ನು ಕಲೆಹಾಕಲಾಗುತ್ತಿದೆ. ಎಲ್ಲ ದಾಖಲೆ ಪರಿಶೀಲಿಸಿದ ಬಳಿಕ ಆರೋಪಿಗಳಿಗೆ ನೋಟಿಸ್ ನೀಡಿ, ವಿಚಾರಣೆ ನಡೆಸಲಾಗುವುದು' ಎಂದು ಮೂಲಗಳು ತಿಳಿಸಿವೆ.

ಎರಡು ಅವಧಿಯಲ್ಲಿ ಅಕ್ರಮ: '2019-20 ಮತ್ತು 2020-21ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆ ಜಾರಿಗಾಗಿ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಟೆಂಡರ್ ಆಹ್ವಾನಿಸಲಾಗಿತ್ತು. ಇದೇ ಟೆಂಡರ್ ಪ್ರಕ್ರಿಯೆಯಲ್ಲಿ ಆಯ್ಕೆಯಾಗಿದ್ದ ಬಿಡ್‌ದಾರರು, ನಕಲಿ ದಾಖಲಾತಿ ಸಲ್ಲಿಸಿದ್ದರೆಂಬ ಸಂಗತಿ ಇತ್ತೀಚೆಗೆ ಪತ್ತೆಯಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಿಡ್‌ದಾರರು, ಟೆಂಡರ್ ನಿಯಮ ಉಲ್ಲಂಘಿಸಿ ಯಶಸ್ವಿ ಬಿಡ್‌ದಾರರಾಗಿ ಆಯ್ಕೆಗೊಂಡಿರುವುದು ಹಾಗೂ ಗಂಗಾ ಕಲ್ಯಾಣ ಯೋಜನೆ ದುರುಪಯೋಗವಾಗಿರುವ ಅಂಶವನ್ನು ವ್ಯವಸ್ಥಾಪಕ ನಿರ್ದೇಶಕ ನಾಗೇಶ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ತಿಳಿಸಿವೆ.

'ಆರೋಪಿ ಕೆ.ಎಂ.ಸುರೇಶ್ ಅವರು ಟೆಂಡರ್ ಅಂಗೀಕಾರ ಪ್ರಾಧಿಕಾರದ ಅಧಿಕಾರಿಯಾಗಿದ್ದರು. ಇನ್ನೊಬ್ಬ ಆರೋಪಿ ಪ್ರಕಾಶ್ ಎಂ. ಹರಗಾಪುರೆ ಅವರು ಟೆಂಡರ್ ಪರಿಶೀಲನಾ ಪ್ರಾಧಿಕಾರದಲ್ಲಿದ್ದರು. ಮತ್ತೊಬ್ಬ ಆರೋಪಿ ಸೀತಾರಾಮ್, ಟೆಂಡರ್ ತಾಂತ್ರಿಕ ಪರಿಶೀಲನಾ ಸಮಿತಿ ಸದಸ್ಯರಾಗಿದ್ದರು. ಈ ಮೂವರು, ಬಿಡ್‌ದಾರರ ದಾಖಲೆಗಳ ಪರಿಶೀಲನೆಯನ್ನು ಸೂಕ್ತವಾಗಿ ನಡೆಸದೇ ಅಂಗೀಕರಿಸಿ ಅಕ್ರಮಕ್ಕೆ ಸಹಕಾರ ನೀಡಿರುವ ಆರೋಪವಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

ಸಂದೇಶ ಮ್ಯೂಸಿಯಂ ಮರು ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನದ ಅಂಗವಾಗಿ ಅಶೋಕನಗರದ ಮ್ಯೂಸಿಯಂ ರಸ್ತೆಯ ಅಂಚೆ ಇಲಾಖೆಯ ಸಂದೇಶ್ ಮ್ಯೂಸಿಯಂ ಆಫ್ ಕಮ್ಯೂನಿಕೇಷನ್ ಉದ್ಘಾಟನೆಗೊಂಡಿತು.

ಈಗ ನವೀಕರಣದೊಂದಿಗೆ ಅಂಚೆ ಇಲಾಖೆಯ ವೈಭವವನ್ನು ಸಾರುತ್ತಿದೆ.

ಅಂಚೆ ಚೀಟಿಗಳು ಮತ್ತು ಭಾರತೀಯ ಸಂವಹನದ ಇತಿಹಾಸವನ್ನು ಮ್ಯೂಸಿಯಂ ಹೇಳುತ್ತಿದೆ. ಟೆಲಿಗ್ರಾಫ್, ಟ್ರಾನ್ಸ್‌ಮೀಟರ್ ಮತ್ತು ಭಾರತೀಯ ಸ್ವಾತಂತ್ರ್ಯ ಚಳವಳಿ ಬಿಂಬಿಸುವ ಅಂಚೆಚೀಟಿಗಳೂ ಸೇರಿದಂತೆ ಹಲವು ಮಾಹಿತಿಯುಳ್ಳ ಈ ಮ್ಯೂಸಿಯಂ ಗಮನ ಸೆಳೆಯುತ್ತಿದೆ.

200 ವರ್ಷದ ಹಳೆಯದಾದ ಕಟ್ಟಡದಲ್ಲಿ ಈ ಮ್ಯೂಸಿಯಂ ಸ್ಥಾಪಿಸಲಾಗಿದೆ. ಕಟ್ಟಡದಲ್ಲಿ ಪ್ರತ್ಯೇಕ ಕೋಣೆಗಳಿದ್ದು ಅಂಚೆ ಇಲಾಖೆ ಇತಿಹಾಸವನ್ನು ಬಿಂಬಿಸಲಾಗಿದೆ.


ಅಶೋಕ ನಗರದ ಮ್ಯೂಸಿಯಂ ರಸ್ತೆಯ ಮರು ಆರಂಭಗೊಂಡಿರುವ ಸಂದೇಶ ಮ್ಯೂಸಿಯ ಆಫ್ ಕಮ್ಯೂನಿಕೇಷನ್‌ನಲ್ಲಿ ಅಂಚೆ ಚೀಟಿಗಳನ್ನು ವಿದ್ಯಾರ್ಥಿಗಳು ವೀಕ್ಷಿಸಿದರು

ಕಬ್ಬನ್ ಪಾರ್ಕ್ ಠಾಣೆ ವ್ಯಾಪ್ತಿಯಲ್ಲಿ ಹೆಲ್ಮೆಟ್ ರಹಿತ ಸಂಚಾರ

ಪಿಎಸ್‌ಐಗೆ ದಂಡ ವಿಧಿಸಲು ಒತ್ತಾಯ

ಬೆಂಗಳೂರು: ಮಹಿಳಾ ಸಬ್ ಇನ್‌ಸ್ಪೆಕ್ಟರ್‌ವೊಬ್ಬರು (ಪಿಎಸ್‌ಐ) ಹೆಲ್ಮೆಟ್ ಧರಿಸದೇ ದ್ವಿಚಕ್ರ ವಾಹನದ ಹಿಂಬದಿಯಲ್ಲಿ ಕುಳಿತು ಸಂಚರಿಸಿದ್ದು, ಅವರಿಗೆ ದಂಡ ವಿಧಿಸುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಕಬ್ಬನ್ ಪಾರ್ಕ್ ಸಂಚಾರ ಠಾಣೆ ವ್ಯಾಪ್ತಿಯ ಎಂ.ಜಿ. ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ (ಕೆಎ 04 ಜೆಎಚ್ 0836) ಇತ್ತೀಚೆಗೆ ಹೊರಟಿದ್ದ ಪಿಎಸ್‌ಐ, ಹೆಲ್ಮೆಟ್ ಧರಿಸಿರಲಿಲ್ಲ. ಇದನ್ನು ಗಮನಿಸಿದ್ದ ವ್ಯಕ್ತಿಯೊಬ್ಬರು, ಫೋಟೊ ಕ್ಲಿಕ್ಕಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದಾರೆ.

'ಸ್ವಿಗ್ಗಿ, ಜೊಮ್ಯಾಟೊ ಹಾಗೂ ಕೋರಿಯರ್ ಬಾಯ್‌ಗಳನ್ನು ಬೇಕಾಬಿಟ್ಟಿಯಾಗಿ ಅಡ್ಡಗಟ್ಟುವ ನಗರದ ಸಂಚಾರ ಪೊಲೀಸರಿಗೆ ಇವರೇಕೆ ಕಾಣುತ್ತಿಲ್ಲ' ಎಂದು ಪ್ರಶ್ನಿಸಿದ್ದಾರೆ.

ಫೋಟೊ ಹಂಚಿಕೊಂಡಿರುವ ಸಾರ್ವಜನಿಕರು, 'ಪೊಲೀಸರಿಗೆ ಕಾನೂನು ಅನ್ವಯವಾಗುವುದಿಲ್ಲವೇ? ಕೂಡಲೇ ಪಿಎಸ್‌ಐಗೆ ದಂಡ ವಿಧಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಸಂಚಾರ ನಿಯಮ ಉಲ್ಲಂಘನೆ ಫೋಟೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದಂತೆ ಪ್ರತಿಕ್ರಿಯಿಸಿರುವ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು, 'ಮಹಿಳಾ ಪಿಎಸ್‌ಐಗೆ ದಂಡ ವಿಧಿಸಲಾಗಿದೆ' ಎಂದಿದ್ದಾರೆ. ಆದರೆ, ದಂಡ ವಿಧಿಸಿದ ರಶೀದಿ ಹಂಚಿಕೊಂಡಿಲ್ಲ.

₹ 1,700 ದಂಡ ಬಾಕಿ: ಮಹಿಳಾ ಪಿಎಸ್‌ಐ ಸಂಚರಿಸುತ್ತಿದ್ದ ದ್ವಿಚಕ್ರ ವಾಹನದ ಮೇಲೆ ₹ 1,700 ದಂಡ ಬಾಕಿ ಇದೆ. ಈ ಮಾಹಿತಿ ಪೊಲೀಸರ ಜಾಲತಾಣದಲ್ಲಿದೆ.



ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಲಾಗಿದ್ದ ಮಹಿಳಾ ಪಿಎಸ್‌ಐ ಅವರ ಸಂಚಾರ ನಿಯಮ ಉಲ್ಲಂಘನೆ ಫೋಟೊ

ಎಂಎಸಿಟಿ ಆದೇಶ ಎತ್ತಿಹಿಡಿದ ಹೈಕೋರ್ಟ್

ಬೈಕ್‌ನಲ್ಲಿ ಟ್ರಿಪಲ್ ರೈಡ್ ಹೋಗುತ್ತಿದ್ದ ವೇಳೆ ಕಾರಿಗೆ ಡಿಕ್ಕಿ: ಅಪಘಾತ ಪರಿಹಾರ ಹೆಚ್ಚಳಕ್ಕೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೈಕ್‌ನಲ್ಲಿ ಟ್ರಿಪಲ್ ರೈಡ್ (ಮೂವರ ಸವಾರಿ) ಹೋಗುತ್ತಿದ್ದ ವೇಳೆ ಕಾರಿಗೆ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರರ ಮೇಲೆ ನಿರ್ಲಕ್ಷ್ಯದ ಹೊಣೆ ಹೊರಿಸಿದ್ದ ಮೋಟಾರು ಅಪಘಾತ ಪರಿಹಾರ ನ್ಯಾಯಮಂಡಳಿಯ (ಎಂಎಸಿಟಿ) ಆದೇಶವನ್ನು ಹೈಕೋರ್ಟ್ ಎತ್ತಿಹಿಡಿದಿದೆ.



'ಎಂಎಸಿಟಿ ಆದೇಶ ರದ್ದುಪಡಿಸಿ, ಪರಿಹಾರದ ಮೊತ್ತ ಹೆಚ್ಚಿಸಬೇಕು' ಎಂದು ಕೋರಿ ಮೂವರು ಬೈಕ್ ಸವಾರರು ಹಾಗೂ 'ನಿರ್ಲಕ್ಷ್ಯದ ಸಂಪೂರ್ಣ ಹೊಣೆಯನ್ನು ಬೈಕ್ ಸವಾರರ ಮೇಲೆಯೇ ಹೊರಿಸಬೇಕು' ಎಂದು ಕೋರಿ ಕಾರಿನ ವಿಮಾ ಕಂಪನಿ ಸಲ್ಲಿಸಿದ್ದ ಪ್ರತ್ಯೇಕ ಮೇಲ್ಮನವಿಗಳನ್ನು ನ್ಯಾಯಮೂರ್ತಿ ಎನ್.ಎಸ್. ಸಂಜಯ್‌ಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

'ಪ್ರಕರಣದಲ್ಲಿ ಮೋಟಾರ್ ಬೈಕ್ ಸವಾರರು ದಾಖಲಿಸಿದ್ದ ದೂರಿಗೆ ಸಂಬಂಧಿಸಿದಂತೆ ಬಿ ವರದಿ ಸಲ್ಲಿಸಲಾಗಿದೆ. ಹೀಗಿರುವಾಗ, ಬೈಕ್ ಸವಾರರ ನಿರ್ಲಕ್ಷ್ಯ ಸಾಬೀತುಪಡಿಸಬೇಕು ಎಂದರೆ ಕಾರು ಚಾಲಕನನ್ನೂ ವಿಚಾರಣೆಗೆ ಒಳಪಡಿಸಬೇಕಾಗುತ್ತದೆ. ಆದರೆ, ಕಾರು ಚಾಲಕ ನ್ಯಾಯಮಂಡಳಿ ವಿಚಾರಣೆಯಿಂದ ದೂರ ಉಳಿದಿದ್ದಾರೆ. ಇದರಿಂದ ಅಪಘಾತಕ್ಕೆ ಯಾರು ಹೊಣೆ ಎಂಬುದನ್ನು ನಿರ್ಧರಿಸಲು ಸಾಧ್ಯವಾಗಬಹುದಾದ ಉತ್ತಮ ಸಾಕ್ಷಿಯೊಂದು ನ್ಯಾಯಮಂಡಳಿಗೆ ಅಲಭ್ಯವಾದಂತಾಗಿದೆ. ಆದ್ದರಿಂದ, ಕಾರಿನ ಮಾಲೀಕ ಹಾಗೂ ಬೈಕ್ ಸವಾರರನ್ನು ಸಮಾನ ಹೊಣೆಗಾರರನ್ನಾಗಿಸಿರುವ ಎಂಎಸಿಟಿ ಕ್ರಮ ಸೂಕ್ತವಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ಮಂಡ್ಯದ ಬಿ.ಸಿ. ಮಹೇಂದ್ರ, ಬಿ.ಎಸ್. ಜಗದೀಶ್ ಹಾಗೂ ಬಿ.ಎಚ್. ವಿಶ್ವಾಸ್ ಬೆಂಗಳೂರಿನ ಮಹದೇವಪುರದ ಬಳಿ ಬೈಕ್‌ನಲ್ಲಿ ಹೋಗುತ್ತಿದ್ದರು. ಈ ವೇಳೆ ಶಿವಕುಮಾರ್ ರಾಘವನ್ ಎಂಬುವರಿಗೆ ಸೇರಿದ್ದ ಕಾರು ಹಾಗೂ ಬೈಕ್ ಮಧ್ಯೆ ಅಪಘಾತ ಸಂಭವಿಸಿ, ಬೈಕ್‌ನಲ್ಲಿದ್ದ ಮೂವರೂ ಗಾಯಗೊಂಡಿದ್ದರು. ಗಾಯಾಳುಗಳು ಪರಿಹಾರ ಕೋರಿ ಎಂಎಸಿಟಿಗೆ ಅರ್ಜಿ ಸಲ್ಲಿಸಿದ್ದರು. ಕಾರಿನ ಮಾಲೀಕ ಶಿವಕುಮಾರ್ ವಿಚಾರಣೆಗೆ ಗೈರಾಗಿದ್ದರು.

ವಿಚಾರಣೆ ನಡೆಸಿದ್ದ ನ್ಯಾಯಮಂಡಳಿ ವಿಶ್ವಾಸ್‌ಗೆ ₹ 2.02 ಲಕ್ಷ, ಜಗದೀಶ್‌ಗೆ ₹ 1.47 ಲಕ್ಷ ಹಾಗೂ ಮಹೇಂದ್ರ ಪ್ರಸಾದ್‌ಗೆ ₹ 15 ಸಾವಿರ ಪರಿಹಾರ ಘೋಷಿಸಿ 2018 ರ ಜನವರಿ 17 ರಂದು ಆದೇಶಿಸಿತ್ತು. 'ಅಪಘಾತಕ್ಕೆ ಬೈಕ್ ಸವಾರರ ನಿರ್ಲಕ್ಷ್ಯವೂ ಕಾರಣ' ಎಂದು ಆದೇಶದಲ್ಲಿ ಅಭಿಪ್ರಾಯಪಟ್ಟಿದ್ದ ಎಂಎಸಿಟಿ, ಬೈಕ್ ಸವಾರರು ಹಾಗೂ ಕಾರು ಮಾಲೀಕನ ಮೇಲೆ 50:50ರ ಅನುಪಾತದಲ್ಲಿ ನಿರ್ಲಕ್ಷ್ಯದ ಹೊಣೆ ಹೊರಿಸಿತ್ತು. 'ಪರಿಹಾರದ ಮೊತ್ತದಲ್ಲಿ ಶೇ 50ರಷ್ಟು ಪ್ರಮಾಣವನ್ನು ಗಾಯಾಳುಗಳಿಗೆ ಪಾವತಿಸಬೇಕು' ಎಂದು ಕಾರಿಗೆ ವಿಮೆ ಮಾಡಿಸಿದ್ದ ಕಂಪನಿಗೆ ನಿರ್ದೇಶಿಸಿತ್ತು.

ಬಿಎಂಟಿಸಿ ನೌಕರ ಸಾವು ಪ್ರಕರಣ: ಪರಿಹಾರ ಆದೇಶ ರದ್ದು

ಬೆಂಗಳೂರು: ಪೀಣ್ಯ ಡಿಪೋದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಬೆಂಗಳೂರು ಮಹಾನಗರ ಸಾರಿಗೆ ನಿಗಮದ (ಬಿಬಿಎಂಟಿಸಿ) ಚಾಲಕರೊಬ್ಬರು ಎರಡು ತಿಂಗಳ ಕಾಲ ಅನಧಿಕೃತವಾಗಿ ಉದ್ಯೋಗಕ್ಕೆ ಗೈರಾಗಿದ್ದರೂ, 'ಕಾರ್ಯದೊತ್ತಡ ಮತ್ತು ಆಯಾಸದಿಂದ ಮೃತಪಟ್ಟಿದ್ದಾರೆ' ಎಂದು ಆತನ ತಾಯಿಗೆ ₹ 10 ಲಕ್ಷ ಪರಿಹಾರ ಘೋಷಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ವಿಚಾರಣಾ ನ್ಯಾಯಾಲಯದ ಆದೇಶ ರದ್ದುಪಡಿಸುವಂತೆ ಕೋರಿ ಬಿಎಂಟಿಸಿ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಎನ್.ಎಸ್. ಸಂಜಯ ಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಚಾಲಕ ಮೃತಪಡುವ ಮುನ್ನ ಎರಡು ತಿಂಗಳಿಂದಲೂ ಉದ್ಯೋಗಕ್ಕೆ ಅನಧಿಕೃತವಾಗಿ ಗೈರಾಗಿದ್ದಾರೆ. ಇದಕ್ಕೆ ಸಾಕ್ಷ್ಯಾಧಾರಗಳಿವೆ. ಉದ್ಯೋಗ ನಿರ್ವಹಣೆ ವೇಳೆ ಅವರು ಸಾವನ್ನಪ್ಪಿದ್ದಾರೆ ಎಂಬುದನ್ನು ಪರಿಗಣಿಸಲಾಗದು' ಎಂಬ ಅಭಿಪ್ರಾಯದೊಂದಿಗೆ ವಿಚಾರಣಾ ನ್ಯಾಯಾಲಯದ ಆದೇಶವನ್ನು ನ್ಯಾಯಪೀಠ ರದ್ದುಪಡಿಸಿದೆ. 'ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯದಲ್ಲಿ ಇರಿಸಲಾಗಿರುವ ಠೇವಣಿಯನ್ನು ಬಿಎಂಟಿಸಿಗೆ ಮರು ಪಾವತಿಸಬೇಕು' ಎಂದು ಆದೇಶಿಸಿದೆ.


'ಭೋಜರಾಜ 2008ರಲ್ಲಿ ಸಾವನ್ನಪ್ಪಿದ್ದಾರೆ. ಆತನ ತಾಯಿ ಪರಿಹಾರ ಕೋರಿ 8 ವರ್ಷಗಳ ನಂತರ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿದಾರರು ತಮ್ಮ ಪುತ್ರ ಉದ್ಯೋಗ ನಿರ್ವಹಣೆ ವೇಳೆ ಸಾವನ್ನಪ್ಪಿದ್ದಾರೆ ಎಂಬುದನ್ನು ಅರ್ಜಿಯಲ್ಲಿ ಎಲ್ಲೂ ಹೇಳಿರಲಿಲ್ಲ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ಕೆ.ಟಿ. ಭೋಜರಾಜ ಎಂಬುವರು ಬಿಎಂಟಿಸಿಯಲ್ಲಿ ಚಾಲಕ ಮತ್ತು ನಿರ್ವಾಹಕರಾಗಿ ನೇಮಕಗೊಂಡಿದ್ದರು. ಪ್ರೊಬೆಷನರಿ ಅವಧಿ ಪೂರೈಸಿದ್ದ ಅವರು, 2008ರಲ್ಲಿ ಮೃತಪಟ್ಟಿದ್ದರು. ಮೃತರ ತಾಯಿ 2016ರಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ಪರಿಹಾರ ಕೋರಿ ಕ್ಲೇಮು ಅರ್ಜಿ ಸಲ್ಲಿಸಿದ್ದರು.

'ಕಾರ್ಯದ ಒತ್ತಡ ಮತ್ತು ಆಯಾಸದ ಪರಿಣಾಮ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ 21 ವರ್ಷದ ನನ್ನ ಮಗನಿಗೆ ಉತ್ತಮ ಚಿಕಿತ್ಸೆ ಕಲ್ಪಿಸಿದ ಹೊರತಾಗಿಯೂ 2008ರ ಸೆಪ್ಟೆಂಬರ್ 2ರಂದು ಸಾವನ್ನಪ್ಪಿದ್ದಾರೆ. ಆದ್ದರಿಂದ, ಪರಿಹಾರ ನೀಡಬೇಕು' ಎಂದು ಕ್ಲೇಮು ಅರ್ಜಿಯಲ್ಲಿ ಕೋರಲಾಗಿತ್ತು. ಅರ್ಜಿ ಪುರಸ್ಕರಿಸಿದ್ದ ವಿಚಾರಣಾ ನ್ಯಾಯಾಲಯ, ಅರ್ಜಿದಾರರಿಗೆ ಒಟ್ಟು ₹ 10.,10,660 ಪಾವತಿಸಬೇಕು ಎಂದು ಬಿಎಂಟಿಸಿಗೆ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಬಿಎಂಟಿಸಿ ಹೈಕೋರ್ಟ್ ಮೆಟ್ಟಿಲೇರಿತ್ತು.

ಸಿಬಿಐಗೆ ಮೇಲ್ಮನವಿ ಪ್ರತಿ ಒದಗಿಸಿ: ಸುಪ್ರೀಂ

ನವದೆಹಲಿ(ಪಿಟಿಐ): ವಿಚಾರವಾದಿ ನರೇಂದ್ರ ದಾಭೋಲ್ಕರ್ ಹತ್ಯೆ ಪ್ರಕರಣದ ತನಿಖೆಯನ್ನು ಬಾಂಬೆ ಹೈಕೋರ್ಟ್ ಮೇಲ್ವಿಚಾರಣೆಯಲ್ಲೇ ಮುಂದುವರಿಸಬೇಕೆಂದು ಕೋರಿ ಸಲ್ಲಿಸಿರುವ ಮನವಿ ಪ್ರತಿಯನ್ನು ಸಿಬಿಐಗೆ ಒದಗಿಸುವಂತೆ ದಾಭೋಲ್ಕರ್ ಪುತ್ರಿ ಮತ್ತು ಅರ್ಜಿದಾರರಾದ ಮುಕ್ತಾ ದಾಭೋಲ್ಕರ್ ಅವರಿಗೆ ಸುಪ್ರೀಂ ಕೋರ್ಟ್ ಗುರುವಾರ ಸೂಚಿಸಿದೆ.


ನರೇಂದ್ರ ದಾಭೋಲ್ಕರ್

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರಿದ್ದ ಪೀಠವು, ಪ್ರಕರಣದ ತನಿಖೆಯ ಮೇಲ್ವಿಚಾರಣೆಯನ್ನು ಹೈಕೋರ್ಟ್ ನಿರಂತರ ಮಾಡಲು ಸಾಧ್ಯವಿಲ್ಲ. ಪ್ರಕರಣದ ವಿಚಾರಣೆ ಪ್ರಾರಂಭವಾದ ನಂತರ ಅದು ಕೊನೆಗೊಳ್ಳಬೇಕಿದೆ ಎಂದು ಹೇಳಿದೆ.

ಮುಕ್ತಾ ಪರ ಹಾಜರಾಗಿದ್ದ ಹಿರಿಯ ವಕೀಲ ಆನಂದ್ ಗ್ರೋವರ್, ಈ ಹತ್ಯೆ ಪ್ರಕರಣದಲ್ಲಿ ತಲೆಮರೆಸಿಕೊಂಡಿರುವ ಇಬ್ಬರು ಆರೋಪಿಗಳನ್ನು ಬಂಧಿಸಲು ಮತ್ತು ಈ ಪ್ರಕರಣದಲ್ಲಿ ದೊಡ್ಡ ಸಂಚು ಇರುವುದನ್ನು ಖಾತ್ರಿಪಡಿಸಲು ಇನ್ನಷ್ಟು ಸಮಯಾವಕಾಶ ಬೇಕೆಂದು ಸಿಬಿಐ ವರದಿ ಸಲ್ಲಿಸಿದ ನಂತರವೂ ತನಿಖೆಯ ಮೇಲ್ವಿಚಾರಣೆಯನ್ನು ಬಾಂಬೆ ಹೈಕೋರ್ಟ್ ನಿಲ್ಲಿಸಿದೆ. ಈ ಪ್ರಕರಣಕ್ಕೂ ಸಿಪಿಐ ನಾಯಕ ಗೋವಿಂದ ಪನ್ಸಾರೆ ಮತ್ತು ಪತ್ರಕರ್ತೆ ಗೌರಿ ಲಂಕೇಶ್ ಅವರ ಹತ್ಯೆ ಪ್ರಕರಣಗಳಿಗೂ ನಂಟಿರುವುದಾಗಿ ಸಿಬಿಐ ಅಧಿಕಾರಿಗಳೂ ಹೇಳಿದ್ದಾರೆ ಎಂಬುದನ್ನು ಪೀಠದ ಗಮನಕ್ಕೆ ತಂದರು.

'ತನಿಖೆಯಲ್ಲಿ ಸ್ವಲ್ಪ ಪ್ರಗತಿ ಕಂಡುಬಂದಿದೆ. ಆದರೆ, ಈ ಸಂಚಿನಲ್ಲಿ ಯಾರ ಕೈವಾಡವಿದೆ ಎನ್ನುವುದು ಗೊತ್ತಾಗಿಲ್ಲ' ಎಂದೂ ಗ್ರೋವರ್ ವಾದಿಸಿದರು. ಇದನ್ನು ಮಾನ್ಯ ಮಾಡಿದ ಪೀಠವು, ಹೆಚ್ಚಿನ ವಿಚಾರಣೆಗೆ ಜುಲೈ ತಿಂಗಳ ಎರಡನೇ ವಾರಕ್ಕೆ ಈ ಅರ್ಜಿಯನ್ನು ಪಟ್ಟಿ ಮಾಡಿಸಿತು.

347 ಕೆ.ಜಿ ಗಾಂಜಾ, ₹ 2.20 ಕೋಟಿ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದ ಸಂದರ್ಭದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿದ್ದ ರೈಲ್ವೆ ರಕ್ಷಣಾ ಪಡೆಯ (ಆರ್‌ಪಿಎಫ್) ಪೊಲೀಸರು, 347 ಕೆ.ಜಿ ಗಾಂಜಾ ಹಾಗೂ ₹ 2.20 ಕೋಟಿ ಜಪ್ತಿ ಮಾಡಿದ್ದಾರೆ.

ರೈಲು ನಿಲ್ದಾಣ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಪೊಲೀಸರು ಗಸ್ತು ಹೆಚ್ಚಿಸಿದ್ದರು. ಅನುಮಾನಾಸ್ಪದ ಸರಕು ಹಾಗೂ ಪ್ರಯಾಣಿಕರನ್ನು ತಪಾಸಣೆ ನಡೆಸಿದ್ದರು.

'ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದರಿಂದ, ವಿಶೇಷ ತಂಡಗಳನ್ನು ರಚಿಸಿ ನಿಲ್ದಾಣದಲ್ಲಿ ನಿಗಾ ಇರಿಸಲಾಗಿತ್ತು. ಇದೇ ವೇಳೆ, ರೈಲಿನ ಮೂಲಕ ಗಾಂಜಾ ಸಾಗಿಸುತ್ತಿದ್ದ 27 ಮಂದಿಯನ್ನು ಬಂಧಿಸಲಾಗಿದೆ. ಇವರೆಲ್ಲರ ವಿರುದ್ಧ ಎನ್‌ಡಿಪಿಎಸ್ ಕಾಯ್ದೆಯಡಿ 24 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ' ಎಂದು ಆರ್‌ಪಿಎಫ್ ಮೂಲಗಳು ಹೇಳಿವೆ.

'₹ 2.20 ಕೋಟಿ ಹಣವನ್ನು ಜಪ್ತಿ ಮಾಡಲಾಗಿದೆ. ನಿಯಮ ಪ್ರಕಾರ, ಹಣವನ್ನು ಆದಾಯ ತೆರಿಗೆ ಇಲಾಖೆ ಸುಪರ್ದಿಗೆ ನೀಡಲಾಗಿದೆ' ಎಂದಿವೆ.


ವನ್ಯಜೀವಿ ಸೊಬಗು

ನಗರದ ಚಿತ್ರಕಲಾ ಪರಿಷತ್ತಿನಲ್ಲಿ ಆಯೋಜಿಸಿರುವ ದೀಪಕ್ ಶಂಕರ್ ಅವರ 'ಇನ್ ಟು ದಿ ವೈಲ್ಡ್' ಏಕವ್ಯಕ್ತಿ ಛಾಯಾಚಿತ್ರಗಳ ಪ್ರದರ್ಶನವನ್ನು ಮಕ್ಕಳು ಪೋಷಕರೊಂದಿಗೆ ಕುತೂಹಲದಿಂದ ವೀಕ್ಷಿಸಿದರು –ಪ್ರಜಾವಾಣಿ ಚಿತ್ರ

ಕಂಪನಿ ಹಣ ಪ್ರಿಯಕರನ ಖಾತೆಗೆ: ದೂರು ದಾಖಲು

ಬೆಂಗಳೂರು: ಕೆಲಸಕ್ಕಿದ್ದ ಕಂಪನಿಯ ಹಣವನ್ನು ಪ್ರಿಯಕರ ಹಾಗೂ ಸ್ನೇಹಿತರಿಗೆ ವರ್ಗಾಯಿಸಿ ವಂಚಿಸಿರುವ ಆರೋಪದಡಿ ಮಹಿಳಾ ಉದ್ಯೋಗಿಯೊಬ್ಬರ ವಿರುದ್ಧ ವಿದ್ಯಾರಣ್ಯಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕಂಪನಿಯ ಮಾಲೀಕರು ದೂರು ನೀಡಿದ್ದಾರೆ. ಕಂಪನಿಯಲ್ಲಿ ಸ್ವಾಗತಕಾರ್ತಿಯಾಗಿ ಕೆಲಸ ಮಾಡುತ್ತಿದ್ದ ಯುವತಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಬ್ಯಾಂಕ್‌ವೊಂದರಲ್ಲಿ ಕಂಪನಿ ಹೆಸರಿನಲ್ಲಿ ಖಾತೆ ತೆರೆಯಲಾಗಿತ್ತು. ಫೋನ್ ಪೇ, ಗೂಗಲ್ ಪೇ ಮೂಲಕ ಹಣದ ವಹಿವಾಟು ನಡೆಸಲಾಗುತ್ತಿತ್ತು. ಕಂಪನಿಯ ಮೊಬೈಲ್ ತಮ್ಮ ಬಳಿ ಇಟ್ಟುಕೊಳ್ಳುತ್ತಿದ್ದ ಯುವತಿ, ವ್ಯವಹಾರದ ಪಾಸ್‌ವರ್ಡ್‌ಗಳನ್ನು ತಿಳಿದುಕೊಂಡಿದ್ದರು.'

'ಯುವತಿ ಹಂತ ಹಂತವಾಗಿ ತಮ್ಮ ಪ್ರಿಯಕರ ಹಾಗೂ ಸ್ನೇಹಿತರಿಗೆ ₹ 2.70 ಲಕ್ಷ ಹಣ ವರ್ಗಾಯಿಸಿದ್ದರು. ಇದು ಗೊತ್ತಾಗುತ್ತಿದ್ದಂತೆ ಮಾಲೀಕ ಪ್ರಶ್ನಿಸಿದ್ದರು. ತಮ್ಮ ತಂಗಿ–ತಾಯಿಗೆ ಹುಷಾರಿಲ್ಲದಿದ್ದರಿಂದ ಹಣ ಕಳುಹಿಸಿದ್ದಾರೆ ಎಂದು ಆರೋಪಿ ಹೇಳಿದ್ದರು. ಪರಿಶೀಲಿಸಿದಾಗ, ಪ್ರಿಯಕರ ಹಾಗೂ ಸ್ನೇಹಿತರ ಖಾತೆಗೆ ಹಣ ಹೋಗಿರುವುದು ಗೊತ್ತಾಗಿದೆ. ಬಳಿಕ ಮಾಲೀಕ, ಠಾಣೆಗೆ ದೂರು ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

₹ 5 ಸಾವಿರ ಬಾಕಿ ಕೊಡದಿದ್ದಕ್ಕೆ ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಜಗಜೀವನ್‌ರಾಮ ನಗರ ಠಾಣೆ ವ್ಯಾಪ್ತಿಯಲ್ಲಿ ಜಬೀವುಲ್ಲಾ (30) ಅವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಿದ್ದ ಆರೋಪದಡಿ ಏಳು ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

ಸ್ಥಳೀಯ ನಿವಾಸಿ ಅನ್ಸರ್ ಅಲಿಯಾಸ್ ಪಟ್ಟಾ, ತೌಸಿಫ್ ಅಲಿಯಾಸ್ ತುರಬ್, ನಯೀಮ್ ಪಾಷಾ ಅಲಿಯಾಸ್ ಎ. ಪಿಂಟು, ಇಮ್ರಾನ್ ಅಲಿಯಾಸ್ ಪೇಷ್ ವಾಶ್, ಶೇಖ್ ಜಬೀ, ಮುಬಾರಕ್ ಪಾಷಾ ಅಲಿಯಾಸ್ ಬಕ್ರಾ ಹಾಗೂ ಅಬೂಬಕರ್ ಸಿದ್ದಿಕ್ ಅಲಿಯಾಸ್ ಯಾಣ ಬಂಧಿತರು.

'ಪಾದರಾಯನಪುರ ಬಳಿಯ ಆಯಿಲ್ ಗಲ್ಲಿ ಬಳಿ ಮೇ 12ರಂದು ರಾತ್ರಿ ಜಬೀವುಲ್ಲಾ ಅವರನ್ನು ಆರೋಪಿಗಳು ಕೊಲೆ ಮಾಡಿದ್ದರು. ಕೃತ್ಯ ಸಂಬಂಧ ಜಬೀವುಲ್ಲಾ ಅವರ ಪತ್ನಿ ದೂರು ನೀಡಿದ್ದರು. ತನಿಖೆ ಕೈಗೊಂಡು, ಏಳು ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಕ್ಯಾಂಟರ್ ವ್ಯವಹಾರ: 'ಜಬೀವುಲ್ಲಾ ಅವರು ಆಟೊ ಚಲಾಯಿಸುತ್ತಿದ್ದರು. ದುಡಿಮೆ ಕಡಿಮೆಯಾಗಿದ್ದರಿಂದ ಆಟೊ ಚಲಾಯಿಸುವುದನ್ನು ಬಿಟ್ಟು, ಮನೆಯಲ್ಲಿದ್ದರು. ಇದೇ ವೇಳೆಯೇ ಅವರಿಗೆ ಆರೋಪಿ ಅನ್ಸರ್ ಪರಿಚಯವಾಗಿತ್ತು. ಜಬೀವುಲ್ಲಾ ಅವರಿಗೆ ₹ 3.50 ಲಕ್ಷ ಬೆಲೆಯ ಸೆಕೆಂಡ್ ಹ್ಯಾಂಡ್ ಕ್ಯಾಂಟರ್ ಕೊಡಿಸಿದ್ದ ಅನ್ಸರ್, ಪ್ರತಿ ತಿಂಗಳು ₹ 15 ಸಾವಿರ ನೀಡುವಂತೆ ಒಪ್ಪಂದ ಮಾಡಿಕೊಂಡಿದ್ದ' ಎಂದು ಪೊಲೀಸರು ತಿಳಿಸಿದರು.

'ಎರಡು ತಿಂಗಳು ಕ್ಯಾಂಟರ್ ಓಡಿಸಿದ್ದ ಜಬೀವುಲ್ಲಾ, ಅದರ ದುಡಿಮೆಯಲ್ಲಿ ₹ 25 ಸಾವಿರ ಹಣವನ್ನು ಅನ್ಸರ್‌ಗೆ ಕೊಟ್ಟಿದ್ದರು. ಆದರೆ, ₹ 5 ಸಾವಿರ ಬಾಕಿ ಇರಿಸಿಕೊಂಡಿದ್ದರು. ಬಾಕಿ ಹಣ ನೀಡುವಂತೆ ಅನ್ಸರ್ ಒತ್ತಾಯಿಸಿದ್ದ. ಅದೇ ವಿಚಾರವಾಗಿ ಇಬ್ಬರ ನಡುವೆ ವೈಷಮ್ಯ ಬೆಳೆದಿತ್ತು' ಎಂದು ಹೇಳಿದರು.

ಮಾತುಕತೆಗೆ ಕರೆಸಿ ಕೊಲೆ: 'ಹಣಕಾಸಿನ ವಿಚಾರವಾಗಿ ಮಾತನಾಡಬೇಕೆಂದು ಹೇಳಿ ಜಬೀವುಲ್ಲಾ ಅವರನ್ನು ಆಯಿಲ್ ಗಲ್ಲಿಗೆ ಕರೆಸಿದ್ದ ಆರೋಪಿಗಳು, ಚಾಕುವಿನಿಂದ ಇರಿದು ಕೊಲೆ ಮಾಡಿದ್ದರು. ಜಬೀವುಲ್ಲಾ ಅಣ್ಣನಿಗೆ ಕರೆ ಮಾಡಿದ್ದ ಆರೋಪಿಗಳು, 'ತಮ್ಮನನ್ನು ಕೊಲೆ ಮಾಡಿದ್ದೇವೆ. ಬಂದು ನೋಡಿ' ಎಂಬುದಾಗಿ ಹೇಳಿ ಸ್ಥಳದಿಂದ ಪರಾರಿಯಾಗಿದ್ದರು. ಕೊಲೆ ಪ್ರಕರಣ ದಾಖಲಾಗುತ್ತಿದ್ದಂತೆ, ತಾಂತ್ರಿಕ ಪುರಾವೆಗಳನ್ನು ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಲಾಗಿದೆ. ₹ 5 ಸಾವಿರ ಬಾಕಿ ಹಣಕ್ಕಾಗಿ ಕೊಲೆ ಮಾಡಿರುವುದಾಗಿ ಆರೋಪಿಗಳು ಹೇಳಿಕೆ ನೀಡಿದ್ದಾರೆ' ಎಂದರು.

ನಗರದಲ್ಲಿ ಇಂದು

ಮಕ್ಕಳು ಹಾಗೂ ಯುವಜನರನ್ನು ತಂಬಾಕು, ಮಾದಕ ವಸ್ತುಗಳ ವ್ಯಸನಗಳಿಂದ ರಕ್ಷಿಸುವಲ್ಲಿ ಮಾಧ್ಯಮಗಳ ಪಾತ್ರ ಕುರಿತ ಕಾರ್ಯಾಗಾರ: ಆರ್.ಎಸ್.ದೇಶಪಾಂಡೆ, ಡಾ.ವಿಜಯಲಕ್ಷ್ಮಿ ಬಿ., ರವೀಂದ್ರ ಭಟ್ಟ, ವಿಶಾಲ್ ರಾವ್, ಡಾ.ಪ್ರಗತಿ ಬಿ. ಹೆಬ್ಬಾರ್. ಆಯೋಜನೆ: 'ಕರ್ನಾಟಕ ನೋ ಫಾರ್ ತಂಬಾಕು', ಸ್ಥಳ: ಪ್ರೆಸ್‌ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11ಕ್ಕೆ

ರಾಷ್ಟ್ರೀಯ ಟೆಕ್ನೋ ಸಾಂಸ್ಕೃತಿಕ ಉತ್ಸವ: ವಾಸುಕಿ ವೈಭವ್, ನಿಟ್ಟೆ ತಾಂತ್ರಿಕ ವಿದ್ಯಾಲಯ, ಬಿಎಸ್‌ಎಫ್ ಕ್ಯಾಂಪಸ್, ಯಲಹಂಕ. ಬೆಳಿಗ್ಗೆ 10ಕ್ಕೆ

ಅಜಯ್ ಚೌಧರಿ ಅವರ 'ಜಸ್ಟ್ ಅಸ್ಪೈರ್' ಪುಸ್ತಕ ಬಿಡುಗಡೆ: ಸ್ಥಳ: ದಿ ಓಬೆರಾಯ್, ಮಹಾತ್ಮ ಗಾಂಧಿ ರಸ್ತೆ, ಬೆಳಿಗ್ಗೆ 11.30ರಿಂದ

'ಅಮೃತ ರಾಗಮಾಲಾ': ಗಾಯನ: ಧನಂಜಯ್ಯ ಹೆಗಡೆ, ಕೌಶಿಕ್ ಐತಾಳ, ಓಂಕಾರ್ ಹವಾಲ್ದಾರ್, ತಬಲಾ: ರವೀಂದ್ರ ಯಾವಗಲ್, ಸಿತಾರ್: ರಫೀಕ್ ಖಾನ್, ಕೊಳಲು: ಷಡಜ್ ಗೋಡ್ಖಿಂಡಿ, ಹಾರ್ಮೋನಿಯಂ: ರವೀಂದ್ರ ಗುರುರಾಜ್ ಕಟೋಟಿ, ಉಪನ್ಯಾಸ: ಶತಾವಧಾನಿ ಆರ್. ಗಣೇಶ್, ಆಯೋಜನೆ: ಬಿಜಾಪೂರೆ ಹಾರ್ಮೋನಿಯಂ ಫೌಂಡೇಷನ್, ಸಪ್ತಕ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6

ಕಾರಂತ-ತೇಜಸ್ವಿ ನಾಟಕೋತ್ಸವ–2023: ಗುಂಡಣ್ಣ ಚಿಕ್ಕಮಗಳೂರು, ಗಣೇಶ ಶೆಣೈ, ಕೆ.ಕನಕರಾಜ್, 'ಚೋಮನ ದುಡಿ' ನಾಟಕ ಪ್ರದರ್ಶನ, ಆಯೋಜನೆ: ರೂಪಾಂತರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6ರಿಂದ

ಹರಿನಾಮ ಸಂಕೀರ್ತನೆ: ಗಾಯನ: ಬೃಂದಾ ಸತ್ಯಪ್ರಸಾದ್, ವಸುಧಾ ಉದ್ದಗಟ್ಟಿ, ಕೀ–ಬೋರ್ಡ್: ಅಮಿತ್ ಶರ್ಮಾ, ತಬಲಾ: ಮುರಳಿ ನಾರಾಯಣರಾವ್ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ 5ನೇ ಬಡಾವಣೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ನೋಟರಿ ನೇಮಕ ಮಾಡಲು ಲಂಚ ಪಡೆಯುತ್ತಿದ್ದ ಪ್ರಕರಣ

ಹೆಚ್ಚುವರಿ ಕಾನೂನು ಸಲಹೆಗಾರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೋಟರಿ ನೇಮಕ ಮಾಡಲು ಲಂಚ ಪಡೆಯುತ್ತಿದ್ದ ಪ್ರಕರಣದಲ್ಲಿ ಕಾನೂನು ಮತ್ತು ನ್ಯಾಯ ಸಚಿವಾಲಯದ ಕಾನೂನು ವ್ಯವಹಾರದ ವಿಭಾಗದ ಹೆಚ್ಚುವರಿ ಕಾನೂನು ಸಲಹೆಗಾರ ಟಿ.ಕೆ. ಮಲಿಕ್ ಹಾಗೂ ಕೃತ್ಯಕ್ಕೆ ಸಹಕರಿಸಿದ್ದ ಆರೋಪದಡಿ ವಕೀಲರಾದ ವೀಣಾ ಜಿ.ಕೆ. ಅವರನ್ನು ಸಿಬಿಐ ಅಧಿಕಾರಿಗಳು ಬಂಧಿಸಿದ್ದಾರೆ.

ಕೇಂದ್ರ ಸರ್ಕಾರದ ಮಾನ್ಯತೆಯ ನೋಟರಿ ನೇಮಕ ಹಾಗೂ ನೋಂದಣಿ ಜವಾಬ್ದಾರಿಯನ್ನು ಕಾನೂನು ವ್ಯವಹಾರ ವಿಭಾಗಕ್ಕೆ ವಹಿಸಲಾಗಿದೆ. ವಿಭಾಗದ ಬೆಂಗಳೂರು ಶಾಖೆ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಮಲಿಕ್, ಅಧಿಕಾರ ದುರುಪಯೋಗಪಡಿಸಿಕೊಂಡು ಲಂಚ ಪಡೆದು ನೋಟರಿ ನೀಡುತ್ತಿದ್ದ ಬಗ್ಗೆ ವಕೀಲರೊಬ್ಬರು ಸಿಬಿಐಗೆ ದೂರು ನೀಡಿದ್ದರು.

ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡಿದ್ದ ಸಿಬಿಐ ಅಧಿಕಾರಿಗಳು, ಬೆಂಗಳೂರಿನಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ ಮಲಿಕ್ ಹಾಗೂ ವಾಣಿ ಅವರನ್ನು ಬಂಧಿಸಿದ್ದಾರೆ. ಇಬ್ಬರೂ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

'ಟಿ.ಕೆ. ಮಲಿಕ್ ಅವರು ನೋಟರಿ ನೇಮಕಕ್ಕೆ ವಕೀಲರೊಬ್ಬರಿಂದ ₹ 50 ಸಾವಿರ ಲಂಚ ಕೇಳಿದ್ದರು. ₹ 25,000 ಲಂಚ ಪಡೆಯುತ್ತಿದ್ದ ವೇಳೆ ದಾಳಿ ಮಾಡಿ, ಮಲಿಕ್ ಅವರನ್ನು ಬಂಧಿಸಲಾಗಿದೆ. ಅವರು ನೀಡಿದ್ದ ಮಾಹಿತಿ ಆಧರಿಸಿ ವಾಣಿ ಅವರನ್ನು ಬಂಧಿಸಲಾಗಿದೆ' ಎಂದು ಸಿಬಿಐ ಮೂಲಗಳು ಹೇಳಿವೆ.

'ದಾಳಿ ಸಂದರ್ಭದಲ್ಲಿ ಮಲಿಕ್ ಬಳಿ ₹ 4.32 ಲಕ್ಷ ನಗದು ಸಿಕ್ಕಿದೆ. ಅದೆಲ್ಲ ಲಂಚದ ಹಣವೆಂಬ ಸಂಶಯವಿದೆ. ಜೊತೆಗೆ, ಬೆಂಗಳೂರು ಹಾಗೂ ಗಾಜಿಯಾಬಾದ್‌ನಲ್ಲಿರುವ ಆರೋಪಿಗೆ ಸೇರಿದ್ದ ಎರಡು ಸ್ಥಳಗಳ ಮೇಲೂ ದಾಳಿ ಮಾಡಲಾಗಿದೆ. ಅಲ್ಲಿಯೇ ₹ 34 ಲಕ್ಷ ಜಪ್ತಿ ಮಾಡಲಾಗಿದೆ' ಎಂದು ಹೇಳಿವೆ.

'ಮಹತ್ವದ ಪ್ರಕರಣಗಳಲ್ಲಿ ಎದುರಾಳಿ ವಕೀಲರ ಜೊತೆಗೂ ಮಲಿಕ್ ಒಡನಾಟವಿಟ್ಟುಕೊಂಡು, ಪ್ರಕರಣ ಗೆಲ್ಲಲು ಸಹಕಾರ ನೀಡುತ್ತಿದ್ದ ಬಗ್ಗೆ ಮಾಹಿತಿ ಇದೆ. ದೇಶದ ಹಲವು ರಾಜ್ಯಗಳ ವಕೀಲರಿಗೆ ಅಕ್ರಮವಾಗಿ ನೋಟರಿ ನೀಡಿರುವ ಸಂಶಯ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಎಲ್ಲಿಗೆ ಹೋಯಿತು ಸಾವಿರಾರು ಕೋಟಿ ರೂಪಾಯಿ ಅನುದಾನ: ಸ್ಥಳೀಯರ ಪ್ರಶ್ನೆ

ಅವ್ಯವಸ್ಥೆಯ ಆಗರ ಶ್ರೀನಿವಾಸನಗರ ಬಡಾವಣೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಮುಚ್ಚಿರುವ ಚರಂಡಿ, ಚರಂಡಿ ಮೇಲೆ ಹಾಸಿದ್ದ ಕಲ್ಲುಗಳೇ ಮಾಯ, ಕಿತ್ತು ಹೋಗಿರುವ ಡಾಂಬರ್ ರಸ್ತೆ, ಅಪಾಯ ಆಹ್ವಾನಿಸುತ್ತಿರುವ ಒಳಚರಂಡಿ ವ್ಯವಸ್ಥೆ, ಎಲ್ಲೆಂದರಲ್ಲಿ ಕಸದರಾಶಿ...

– ರಾಜರಾಜೇಶ್ವರಿನಗರದ ಕೊಟ್ಟಿಗೆಪಾಳ್ಯ ವಾರ್ಡ್‌ನ ಶ್ರೀನಿವಾಸನಗರ ಬಡಾವಣೆಯಲ್ಲಿ ಕಂಡು ಬರುವ ಅವ್ಯವಸ್ಥೆ ಇದು.

ಶ್ರೀನಿವಾಸನಗರ ವ್ಯಾಪ್ತಿಯ ಕೆಲವು ರಸ್ತೆಗಳ ಚರಂಡಿ ಕಿತ್ತು ಹೋಗಿದ್ದು, ಕೆಲವೆಡೆ ಚರಂಡಿಯನ್ನೇ ನಿರ್ಮಿಸಿಲ್ಲ. ಚರಂಡಿ ಕಾಮಗಾರಿ ನಡೆದಿರುವ ಕಡೆಯೂ ಕಳಪೆಯಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಚರಂಡಿಯಿಲ್ಲದ ಕಾರಣ ಮಳೆ ನೀರು ಮನೆಗಳಿಗೆ ನುಗ್ಗುತ್ತಿದೆ. ಕೊಳಚೆ ನೀರು ನುಗ್ಗಿ ಪ್ರತಿಬಾರಿಯೂ ನಾಗರಿಕರು ಸಮಸ್ಯೆಗೆ ಸಿಲುಕುತ್ತಿದ್ದಾರೆ. ನಿವಾಸಿಗಳು ನೋವು, ಸಂಕಷ್ಟ ಅನುಭವಿಸುವುದು ಸಾಮಾನ್ಯವಾಗಿದೆ.

ಅನಿಬೆಸೆಂಟ್ ಶಾಲೆಯ ಸಮೀಪ ನೆಲದಲ್ಲಿ ವಿದ್ಯುತ್ ಪರಿವರ್ತಕವಿದ್ದು ಅಪಾಯದ ಮುನ್ಸೂಚನೆ ಇದೆ. ಬೆಸ್ಕಾಂ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಪರ್ಯಾಯ ವ್ಯವಸ್ಥೆ ಮಾಡಿಲ್ಲ ಎಂದು ನಿವಾಸಿಗಳು ದೂರಿದ್ದಾರೆ.


ಈ ವ್ಯಾಪ್ತಿಯಲ್ಲಿ ಕೂಲಿಕಾರ್ಮಿಕರು, ಗಾರ್ಮೆಂಟ್, ಸಣ್ಣ ಕೈಗಾರಿಕೆ, ಮಧ್ಯಮ ವರ್ಗದವರೇ ಬಹುತೇಕ ವಾಸ ಮಾಡುತ್ತಿದ್ದಾರೆ.

ನಾಗರಿಕರಿಗೆ ಮೂಲ ಸೌಲಭ್ಯಗಳು ಮರೀಚಿಕೆಯಾಗಿದೆ. ಒಳಚರಂಡಿ ಸರಿಯಾಗಿಲ್ಲದೆ ಮಳೆಬಂದಾಗ, ಮಲೀನ ನೀರು ಮನೆಗಳಿಗೆ ನುಗ್ಗುವುದರಿಂದ ಹಲವು ಮನೆಗಳ ನಿವಾಸಿಗಳು ಪ್ರತಿಬಾರಿಯೂ ನರಕಯಾತನೆ ಅನುಭವಿಸಬೇಕಾಗಿದೆ ಎಂದು ನಿವಾಸಿ ಚಲುವೇಗೌಡ ಹೇಳಿದರು.

ಆರ್.ಆರ್.ನಗರ ಕ್ಷೇತ್ರಕ್ಕೆ ಸಾವಿರಾರು ಕೋಟಿ ಅನುದಾನ ತಂದು ಅಭಿವೃದ್ಧಿ ಮಾಡಲಾಗಿದೆ ಎಂದು ಜನಪ್ರತಿನಿಧಿಗಳು ಚುನಾವಣೆ ವೇಳೆ ಹೇಳುತ್ತಾರೆ. ಆದರೆ, ಅಭಿವೃದ್ಧಿ ಮಾತ್ರ ನಡೆದಿಲ್ಲ ಎಂದು ಹೇಳಿದರು.

ಸಿರಿವಂತರ ಬಡಾವಣೆ, ಅಪಾರ್ಟ್‌ಮೆಂಟ್, ಖಾಸಗಿ ಮತ್ತು ಬಿಡಿಎ ಬಡಾವಣೆಗಳಲ್ಲಿ ಮಾತ್ರ ಅಭಿವೃದ್ಧಿಯಾಗಿದೆ ಹೊರತು, ನಮ್ಮಂತಹ ಬಡವರು, ಜನಸಾಮಾನ್ಯರು ವಾಸಿಸುವ ಬಡಾವಣೆಗಳಲ್ಲಿ ಮೂಲಸೌಲಭ್ಯ ಇಲ್ಲ ಎಂದು ಅಳಲು ತೋಡಿಕೊಂಡರು.

'ನಾನು ವರ್ಗಾವಣೆಗೊಂಡು ಬಂದು ಮೂರು ದಿನವಾಗಿದೆ. ಅಲ್ಲಿನ ಸ್ಥಿತಿಯ ಬಗ್ಗೆ ತಿಳಿದಿಲ್ಲ. ಪರಿಶೀಲಿಸಲಾಗುವುದು' ಎಂದು ಬಿಬಿಎಂಪಿ ಸಹಾಯಕ ಎಂಜಿನಿಯರ್ ಪ್ರಜ್ವಲ್ ಹೇಳಿದರು. ಸಹಾಯಕ ಕಾರ್ಯಪಾಲಕ ಎಂಜಿನಿಯರ್ ವಿಶ್ವಾಸ್ ಪ್ರತಿಕ್ರಿಯೆಗೆ ಸಿಗಲಿಲ್ಲ.



ಶ್ರೀನಿವಾಸನಗರ ಬಡಾವಣೆಯ ಚರಂಡಿ ಅವ್ಯವಸ್ಥೆ (ಎಡಚಿತ್ರ). ಅಪಾಯ ಆಹ್ವಾನಿಸುತ್ತಿರುವ ವಿದ್ಯುತ್ ಪರಿವರ್ತಕ (ಬಲಚಿತ್ರ)

ಸಿನಿಮಾ ಪುರವಣಿ

ಪ್ರಜಾವಾಣಿ ನೋಡಿಯೊ **ಸಿನಿಮಾತು** ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಇವರೇ ನೋಡಿ ಡೇರ್ ಡೆವಿಲ್!

ಪೂರ್ಣಚಂದ್ರ ತೇಜಸ್ವಿಯವರ ಕಥೆಯಾಧಾರಿತ 'ಡೇರ್ ಡೆವಿಲ್ ಮುಸ್ತಾಫಾ' ಚಿತ್ರ ಇಂದು ಬಿಡುಗಡೆಗೊಳ್ಳುತ್ತಿದೆ. ತೇಜಸ್ವಿಯವರ ಆ ಕಾಲಘಟ್ಟದ ಆಶಯಗಳನ್ನು ಈ ಕಾಲಘಟ್ಟದಲ್ಲಿ ತೆರೆಯ ಮೇಲೆ ತರುವುದು ಒಂದು ಸಂಕೀರ್ಣವಾದ ಪ್ರಕ್ರಿಯೆ. ಚಿತ್ರದ ಕುರಿತು ಚಿತ್ರದ ಪಾತ್ರಧಾರಿಗಳು ಒಂದಷ್ಟು ವಿಚಾರಗಳನ್ನು ಹಂಚಿಕೊಂಡಿದ್ದಾರೆ...

ವಿನಾಯಕ ಕೆ.ಎಸ್.


ಆದಿತ್ಯ

●ಆದಿತ್ಯ ಅವರೇ, ಸಿನಿಮಾದಲ್ಲಿ ನೀವು ಅಯ್ಯಂಗಾರಿ ಹುಡುಗನ ಪಾತ್ರ ಮಾಡಿದ್ದೀರಿ. ಈ ಪಾತ್ರಕ್ಕಾಗಿ ತಯಾರಿ ಹೇಗಿತ್ತು?

ಈ ಪಾತ್ರದಲ್ಲಿ ನಾನು ಪಿಯುಸಿ ಹುಡುಗ. ಅಂದರೆ ನನಗೆ 17 ರಿಂದ 18 ವರ್ಷ. ಹಾಗೆ ಕಾಣಿಸಿಕೊಳ್ಳಲು ನನ್ನ ತೂಕ ಇಳಿಸಬೇಕಿತ್ತು. ನನಗೀಗ 29 ವರ್ಷ. 10 ವರ್ಷ ಹಿಂದಕ್ಕೆ ಹೋಗುವುದು ಸವಾಲಾಗಿತ್ತು. ನಾಲ್ಕಾರು ತಿಂಗಳಿನಿಂದ ಇದಕ್ಕೆ ಬೇಕಾದ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡೆ.

●ಇದು ನಿಮ್ಮ ಮೊದಲನೇ ಸಿನಿಮಾವೇ? ನಿಮ್ಮ ನಟನೆ ಹಿನ್ನೆಲೆಯೇನು?

ನಾನು 18ನೇ ವರ್ಷದಿಂದ ರಂಗಭೂಮಿಯಲ್ಲಿ ಸಕ್ರಿಯ. ಮೂಲತಃ ಶಿವಮೊಗ್ಗದವನು. ಪಿಯುಸಿ ಮುಗಿಸಿ ಸಿನಿಮಾದಲ್ಲಿ ನಟಿಸಬೇಕೆಂದು ಬೆಂಗಳೂರಿಗೆ ಬಂದೆ. ಇಲ್ಲಿನ 'ವಿಜಯನಗರ ಬಿಂಬ', 'ಅನೇಕ', 'ಸೈಡ್ ವಿಂಗ್' ರಂಗತಂಡಗಳಲ್ಲಿ ಸಕ್ರಿಯನಾಗಿರುವೆ. ಈ ಸಿನಿಮಾಗೂ ಮೊದಲು 'ಆರನೇ ಮೈಲಿ' ಮತ್ತು 'ಆದಿಪುರಾಣ' ಸಿನಿಮಾಗಳಲ್ಲಿ ಸಣ್ಣ ಪಾತ್ರಗಳನ್ನು ನಿರ್ವಹಿಸಿರುವೆ. ನಾಯಕನಾಗಿ ಇದೇ ಮೊದಲನೆ ಸಿನಿಮಾ.

●ಬೇರೆ ಯಾವ ಸಿನಿಮಾಗಳು ಕೈಯಲ್ಲಿವೆ?

ಇನ್ನೊಂದು ಸಿನಿಮಾ ಪ್ರಿಪ್ರೊಡಕ್ಷನ್ ಹಂತದಲ್ಲಿದೆ. ಒಂದಷ್ಟು ಸಿನಿಮಾಗಳು ಚರ್ಚೆಯ ಹಂತದಲ್ಲಿವೆ. ಸೂಕ್ತ ಪಾತ್ರಗಳನ್ನು ನೋಡಿ ಆಯ್ದುಕೊಳ್ಳುವೆ.

●ನಿಮಗೆ ನಟನೆಯಲ್ಲಿ ಒಲವು ಮೂಡಿದ್ದು ಹೇಗೆ?

ನಾನು ರಾಜ್‌ಕುಮಾರ್ ಅವರ ದೊಡ್ಡ ಅಭಿಮಾನಿ. ಅವರ ಚಿತ್ರಗಳನ್ನು ನೋಡಿಕೊಂಡು ಬೆಳೆದವನು. ಅದೇ ರೀತಿಯ ಪಾತ್ರಗಳನ್ನು ಮಾಡಬೇಕೆಂಬ ಆಸೆ ಇದೆ. ಮುಂದೆ ಯಾವ ರೀತಿಯ ಪಾತ್ರಗಳು ಸಿಗುತ್ತವೆ ಎಂದು ನೋಡಬೇಕು.


ಶಶಾಂಕ್

●ಮೊದಲನೆ ಸಿನಿಮಾ ಅನುಭವ ಹೇಗಿತ್ತು?

'ಘಟಿಂಗ' ಎಂಬ ಕಿರುಚಿತ್ರ ಮಾಡಿದ್ದೆ. ಅದೇ ತಂಡ ಇಲ್ಲಿತ್ತು. ಹಾಗಾಗಿ ಇನ್ನೊಂದು ಪ್ರಾಜೆಕ್ಟ್ ಎಂಬ ರೀತಿಯ ಅನುಭವವಾಯ್ತು. ನಾವೇ ಎಲ್ಲ ಸೇರಿ ಮಾಡಿದ್ದು. ನಿರ್ದೇಶಕನಾಗಿ ಕಾಲೇಜಿನ ಮುಖ್ಯ ಶಿಕ್ಷಕನ ರೀತಿಯಲ್ಲಿ ಹೋದಂತಿತ್ತು. ಮೈಸೂರಲ್ಲಿ 60 ದಿನ ಶೂಟಿಂಗ್ ಮಾಡಿದೆವು. ಹೊರಾಂಗಣ ದೃಶ್ಯಗಳನ್ನು ಮೂಡಿಗೆರೆ, ಕೊಟ್ಟಿಗೆಹಾರದಲ್ಲಿ ಚಿತ್ರೀಕರಿಸಿದೆವು.

●ಆ ಕಾಲಘಟ್ಟದ ಕಥೆ ಇವತ್ತಿಗೆ ಎಷ್ಟು ಪ್ರಸ್ತುತ?

ನಾನು ಬಾಲ್ಯದಲ್ಲಿ ತೇಜಸ್ವಿ ಅವರ ಕಥೆ ಓದಿದಾಗ ಕಥೆ ನನಗೆ ಬಹಳ ಆಪ್ತವೆನಿಸಿತ್ತು. ಕಾಡಿತ್ತು. ನನ್ನಲ್ಲೂ ಒಂದಷ್ಟು ಪೂರ್ವಗ್ರಹ ಇತ್ತು. ಇದರಿಂದಾಗಿ ತೇಜಸ್ವಿ ಆಲೋಚನೆ ಕಾಡಿತ್ತು. ಹಾಗಾಗಿ ಈ ಕಥೆ ಆಯ್ಕೆ ಮಾಡಿಕೊಂಡೆ.

●ಇವತ್ತಿನ ಕಾಲೇಜು ಹುಡುಗರಿಗೆ ಇದು ಎಷ್ಟು ಪ್ರಸ್ತುತ?

ಆ ರೀತಿ ಆಲೋಚಿಸಿ ಈ ಸಿನಿಮಾ ಮಾಡಲಿಲ್ಲ. ಒಂದೊಳ್ಳೆ ಕಥೆ ಎಂದು ಮಾಡಿದ್ದು. ಆದಾಗ್ಯೂ ಮನರಂಜನೆಗೆ ಸಿನಿಮಾದ ಕಾಲೇಜಿನ ದೃಶ್ಯಗಳಲ್ಲಿ ಸಾಕಷ್ಟು ಘಟನೆಗಳಿವೆ. ಬೇರೆ ಬೇರೆ ಆಯ್ಕೆಗಳಿವೆ. 'ಒಂದು ಕಲೆ ಕ್ಲಾಸಿಕ್ ಆಗತ್ತೋ, ಇಲ್ಲವೋ ಎಂಬುದನ್ನು ಜನ ಮತ್ತು ಸಮಯ ನಿರ್ಧಾರ ಮಾಡುತ್ತೆ' ಎಂದು ತೇಜಸ್ವಿ ಹೇಳುತ್ತಾರೆ. ಚಿತ್ರದ ಫಲಿತಾಂಶವನ್ನು ಜನವೇ ಹೇಳಬೇಕು.

●ನಿಮ್ಮ ಮುಂದಿನ ಯೋಜನೆಗಳು?

ಇದರ ಬಿಡುಗಡೆಯೇ ಒಂದು ದೊಡ್ಡ ಪ್ರಾಜೆಕ್ಟ್‌ನಂತಾಗಿದೆ. ಒಂದಷ್ಟು ಕಾದಂಬರಿಗಳಿವೆ. ನನ್ನದೇ ಸ್ವಂತ ಕಥೆ ಇಟ್ಟುಕೊಂಡು ಮಜವಾದ ಸಿನಿಮಾ ಮಾಡಬೇಕೆಂಬ ಆಲೋಚನೆಯೂ ಇದೆ. ಎಲ್ಲವೂ ಈ ಸಿನಿಮಾದ ಫಲಿತಾಂಶದ ಮೇಲೆ ಅವಲಂಬಿತವಾಗಿದೆ.


ಶಿಶಿರ್

●ಶಿಶಿರ್ ನೀವು ಈ ಚಿತ್ರದಲ್ಲಿ 'ಮುಸ್ತಾಫಾ' ಪಾತ್ರ ಮಾಡಿದ್ದೀರಿ. ನಿಮ್ಮ ನಟನೆ ಹಿನ್ನೆಲೆ ಏನು?

ನಾನು ಮೂಲತಃ ಮೈಸೂರಿನವನು. ಮೈಸೂರಿನ 'ನಟನಾ' ನಾಟಕ ಶಾಲೆಯ ವಿದ್ಯಾರ್ಥಿ. ಆರನೇ ವರ್ಷದಿಂದಲೇ ನಟನೆ ಪ್ರಾರಂಭವಾಯಿತು. 'ಅಲಿಬಾಬ ಮತ್ತು ಕಳ್ಳರು' ನಾಟಕದಿಂದ ನನ್ನ ರಂಗಭೂಮಿ ಪಯಣ ಪ್ರಾರಂಭವಾಯಿತು. ಪಿಯುಸಿ ಮುಗಿಯುತ್ತಿದ್ದಂತೆ ರಂಗಭೂಮಿಯನ್ನು ತುಂಬಾ ಗಂಭೀರವಾಗಿ ಪರಿಗಣಿಸಿ, ಅದರಲ್ಲಿಯೇ ಬದುಕು ಕಟ್ಟಿಕೊಳ್ಳಬೇಕು ಎಂದು ನಿರ್ಧಾರ ಮಾಡಿದೆ.

●'ಮುಸ್ತಾಫಾ' ಪಾತ್ರದಲ್ಲಿ ನಿಮಗಿದ್ದ ಸವಾಲುಗಳೇನು?

ನಾನು ಹಿಂದೂ. ಆದರೆ ಮುಸ್ಲಿಂ ಹುಡುಗನ ಪಾತ್ರದಲ್ಲಿ ಅಭಿನಯಿಸಬೇಕಿತ್ತು. ಅವರ ಭಾಷೆ, ಹಾವಭಾವ ಮೊದಲಾದವುಗಳು ಸವಾಲೆನಿನಿಸಿದವು. ಮೈಸೂರಿನ ಮಂಡಿ ಮೊಹಲ್ಲಾಗೆ ಹೋಗುತ್ತಿದ್ದೆ. ಸುಮಾರು ಒಂದು ತಿಂಗಳು ಅಲ್ಲಿದ್ದು, ಮುಸ್ಲಿಮರ ಹಾವಭಾವ, ಭಾಷೆ ಗಮನಿಸುತ್ತಿದ್ದೆ. ನನ್ನೊಬ್ಬ ಮುಸ್ಲಿಂ ಸ್ನೇಹಿತನಿಗೆ ಪೂರ್ತಿ ಸ್ಕ್ರಿಪ್ಟ್ ನೀಡಿ, ನನ್ನ ಡೈಲಾಗ್‌ಗಳನ್ನು ಕೇಳಿಸಿಕೊಂಡು ಕಲಿಯುತ್ತ ಬಂದೆ. ಒಂದು ದಿನ ಮಸೀದಿಗೆ ಹೋಗಿ ನಮಾಜು ಕೂಡ ಮಾಡಿ ಬಂದಿದ್ದೇನೆ, ಈ ಪಾತ್ರಕ್ಕಾಗಿ.

●ಈ ಪಾತ್ರ ನಿರ್ವಹಿಸುವಾಗ ನಿಮ್ಮ ಮನೆಯವರ ಪ್ರತಿಕ್ರಿಯೆ ಹೇಗಿತ್ತು?

ನಮ್ಮ ತಂದೆ ಕೂಡ ರಂಗಭೂಮಿ ಹಿನ್ನೆಲೆಯವರು. ಹೀಗಾಗಿ ಸಮಸ್ಯೆಯಾಗಲಿಲ್ಲ. ಈ ಪಾತ್ರವನ್ನು ಪ್ರೋತ್ಸಾಹಿಸಿದರು. ಎಲ್ಲ ರೀತಿಯಲ್ಲಿ ಬೆಂಬಲ ನೀಡಿದರು.

●ಇದು ನಿಮ್ಮ ಮೊದಲ ಸಿನಿಮಾವೇ? ಇದರಿಂದ ಏನು ಕಲಿತಿರಿ?

ಹೌದು ಮೊದಲ ಸಿನಿಮಾ. ಇಲ್ಲಿ ನಾವು ನಟನೆಯಲ್ಲದೆ ಸಿನಿಮಾದ ಬೇರೆ ಬೇರೆ ವಿಭಾಗಗಳಲ್ಲಿ ಕೂಡ ಕೆಲಸ ಮಾಡಿದೆವು. ಹೀಗಾಗಿ ಸಿನಿಮಾ ಪ್ರಕ್ರಿಯೆ ತಿಳಿಯಿತು. ಜೊತೆಗೆ ರಂಗಭೂಮಿಗೂ ಸಿನಿಮಾಗೂ ಇರುವ ವ್ಯತ್ಯಾಸ ಗೊತ್ತಾಯಿತು. ಕ್ಯಾಮೆರಾ ಎದುರಿಸುವಾಗಿನ ಸವಾಲುಗಳು ತಿಳಿಯಿತು.

●ಈಗ ಬೇರೆ ಸಿನಿಮಾಗಳು ಕೈಯಲ್ಲಿಯಾ?

ಸಿನಿಮಾದ ಪ್ರೀಮಿಯರ್ ಶೋ ನೋಡಿ ಉತ್ತಮ ಪ್ರತಿಕ್ರಿಯೆ ಬರುತ್ತಿದೆ. ಆದರೆ ಸದ್ಯಕ್ಕೆ ಯಾವುದೇ ಸಿನಿಮಾ ಇಲ್ಲ. ಇದನ್ನೇ ವೃತ್ತಿಯಾಗಿಸಿಕೊಳ್ಳುವ ನಿಟ್ಟಿನಲ್ಲಿ ಒಂದಷ್ಟು ಪ್ರಯತ್ನಗಳು ನಡಿಯುತ್ತಿದೆ. ❖


ಅದ್ವಿತಿ ಶೆಟ್ಟಿ

ಆಸ್ಟ್ರೇಲಿಯಾದಲ್ಲಿ ಅರಳಿದ 'ಬ್ರಹ್ಮಕಮಲ'

ವಿಶ್ವದ ಹಲವು ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡಿರುವ ಸಿದ್ದು ಪೂರ್ಣಚಂದ್ರ ಅವರ 'ಬ್ರಹ್ಮಕಮಲ' ಚಿತ್ರವು ಇದೀಗ ಮೆಲ್ಬರ್ನ್ ಭಾರತೀಯ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಗಿದೆ.

ಈಗಾಗಲೇ ಫ್ರಾನ್ಸ್‌ನಲ್ಲಿ ನಡೆದ ಈಡಿಪ್ಲೇ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿ, ಸಿಡ್ನಿಯ ವಂಡರ್‌ಲ್ಯಾಂಡ್ ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಅತ್ಯುತ್ತಮ ಫೀಚರ್ ಫಿಲಂ ಪ್ರಶಸ್ತಿಯನ್ನು ಈ ಸಿನಿಮಾ ಬಾಚಿಕೊಂಡಿತ್ತು. ನೇಪಾಳದ ಓಲ್ಡ್ ಮಾಂಕ್ ಇಂಟರ್‌ನ್ಯಾಷನಲ್ ಫಿಲ್ಮ್ ಫೆಸ್ಟಿವಲ್‌ನಲ್ಲೂ ಅತ್ಯುತ್ತಮ ಫೀಚರ್ ಫಿಲ್ಮ್ ಹಾಗೂ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಯನ್ನು ಪಡೆದಿತ್ತು.

ಇಂಡೋ ಸಿಂಗಪುರ್ ಚಿತ್ರೋತ್ಸವದಲ್ಲಿ ನಟಿ ಅದ್ವಿತಿ ಶೆಟ್ಟಿ ಅವರಿಗೆ ಈ ಚಿತ್ರದಲ್ಲಿನ ನಟನೆಗಾಗಿ ಅತ್ಯುತ್ತಮ ನಟಿ ಪ್ರಶಸ್ತಿ ಬಂದಿತ್ತು. ದಾದಾ ಸಾಹೇಬ್ ಫಾಲ್ಕೆ, ಅರುಣೋದಯ ಚಲನಚಿತ್ರೋತ್ಸವ ಸೇರಿದಂತೆ ಹಲವು ಚಲನಚಿತ್ರೋತ್ಸವಗಳಿಗೆ ಈ ಸಿನಿಮಾ ಆಯ್ಕೆಯಾಗಿದೆ. 'ವಿಶೇಷವಾದ ಕಥಾಹಂದರ ಈ ಚಿತ್ರದಲ್ಲಿರುವುದರಿಂದ ನನಗೆ ಮೊದಲಿನಿಂದಲೂ ಈ ಕಥೆಯ ಮೇಲೆ ನಂಬಿಕೆ ಇತ್ತು. ಈ ಚಿತ್ರ ಇನ್ನೂ ಹಲವು ಪ್ರಶಸ್ತಿಗಳನ್ನು ತಂದು ಕೊಡುತ್ತದೆ ಎಂಬ ವಿಶ್ವಾಸವಿದೆ. ಈ ಕಥೆ ರಾಮನಗರದ ಹತ್ತಿರದ ಒಂದು ಹಳ್ಳಿಯಲ್ಲಿ ನಡೆದ ನೈಜ ಘಟನೆಯನ್ನು ಆಧರಿಸಿದ ಕಥೆ' ಎಂದಿದ್ದಾರೆ ಸಿದ್ದು. ❖

ಸಿನಿ ಸಮ್ಮಾನ: ನಾಮನಿರ್ದೇಶಿತರ ವಿವರ





ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ಕ್ಕೆ ದಿನಗಣನೆ ಶುರುವಾಗಿದೆ. 2022ನೇ ಸಾಲಿನ ಸಿನಿಮಾಗಳ ಪೈಕಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರನ್ನು ತಿಳಿಸುವ ಸಮಯ ಇದು. ಕಳೆದ ಬುಧವಾರ(ಮೇ 17) ಮೊದಲ ಹಂತದಲ್ಲಿ ಐದು ವಿಭಾಗಗಳಲ್ಲಿ ನಾಮನಿರ್ದೇಶನಗಳನ್ನು ಪ್ರಕಟಿಸಲಾಗಿತ್ತು. ಪ್ರಸ್ತುತ ಮೂರು ವಿಭಾಗಗಳಲ್ಲಿನ ನಾಮನಿರ್ದೇಶಿತರ ವಿವರ ಇಲ್ಲಿದೆ. ಇನ್ನಷ್ಟು ವಿಭಾಗಗಳಲ್ಲಿ ನಾಮನಿರ್ದೇಶಿತರಾದವರ ಹೆಸರುಗಳು ಹಂತಹಂತವಾಗಿ ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗಲಿದೆ. 'ಸಿನಿ ಸಮ್ಮಾನ'ದ ಕುರಿತ ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ.


prajavani.net/cinesamman

ಅತ್ಯುತ್ತಮ ಪೋಷಕ ನಟ


ದತ್ತಣ್ಣ
ಚಿತ್ರ: ನಾನು ಅದು ಮತ್ತು ಸರೋಜ


ಅಚ್ಯುತ್ ಕುಮಾರ್
ಚಿತ್ರ: ಕಾಂತಾರ


ಅನಂತನಾಗ್
ಚಿತ್ರ: ಗಾಳಿಪಟ-2


ಕಿಶೋರ್ ಕುಮಾರ್
ಚಿತ್ರ: ಕಾಂತಾರ


ಗೋಪಾಲಕೃಷ್ಣ ದೇಶಪಾಂಡೆ
ಚಿತ್ರ: ಶುಭಮಂಗಳ

ಅತ್ಯುತ್ತಮ ಪೋಷಕ ನಟಿ


ಅರ್ಚನಾ ಜೋಯಿಸ್
ಚಿತ್ರ: ಕೆ.ಜಿ.ಎಫ್ ಚಾಪ್ಟರ್-2


ಈಶ್ವರಿ ರಾವ್
ಚಿತ್ರ: ಕೆ.ಜಿ.ಎಫ್ ಚಾಪ್ಟರ್-2



ಎನ್.ಮಂಗಳ
ಚಿತ್ರ: ತಲೆದಂಡ


ಉಮಾಶ್ರೀ
ಚಿತ್ರ:ವೇದ


ಸುಧಾ ಬೆಳವಾಡಿ
ಚಿತ್ರ: ಸಾರಾ ವಜ್ರ

ಅತ್ಯುತ್ತಮ ಸಂಗೀತ ನಿರ್ದೇಶನ


ಬಿ.ಅಜನೀಶ್ ಲೋಕನಾಥ್
ಚಿತ್ರ: ಕಾಂತಾರ


ಧೀರೇಂದ್ರ ದಾಸ್
ಚಿತ್ರ: ತುರ್ತು ನಿರ್ಗಮನ


ಅರ್ಜುನ್ ಜನ್ಯ
ಚಿತ್ರ: ಗಾಳಿಪಟ-2


ಅಶ್ವಿನ್ ಪಿ.ಕುಮಾರ್
ಚಿತ್ರ: ಮೇಡ್ ಇನ್ ಬೆಂಗಳೂರು


ಜೆ.ಅನೂಪ್ ಸೀಳಿನ್
ಚಿತ್ರ: ಮಾನ್ಸೂನ್ ರಾಗ

'ಶ್ರೀಮಂತ'ನ ದರ್ಬಾರು

ಈ ವಾರ ತೆರೆಗೆ

ಚುನಾವಣೆ ನಂತರ ಮತ್ತೆ ಚಿತ್ರರಂಗ ಸಕ್ರಿಯಗೊಂಡಿದೆ. ಇಂದು ನಟ ಸೋನು ಸೂದ್ ಅಭಿನಯದ 'ಶ್ರೀಮಂತ' ಹಾಗೂ ಪೂರ್ಣಚಂದ್ರ ತೇಜಸ್ವಿ ಕಥೆ ಆಧಾರಿತ 'ಡೇರ್ ಡೆವಿಲ್ ಮುಸ್ತಾಫಾ' ಚಿತ್ರಗಳು ತೆರೆಗೆ ಬರುತ್ತಿವೆ.

ರಮೇಶ್ ಹಾಸನ್ ನಿರ್ದೇಶನದ 'ಶ್ರೀಮಂತ' ಏಪ್ರಿಲ್‌ನಲ್ಲಿಯೇ ತೆರೆಗೆ ಬರಬೇಕಿತ್ತು. ಹಿರಿಯ ರಾಜಕಾರಣಿಗಳಾದ ಎಚ್.ಡಿ.ದೇವೇಗೌಡ, ಬಿ.ಎಸ್. ಯಡಿಯೂರಪ್ಪ, ಬಸವರಾಜ್ ಹೊರಟ್ಟಿ, ಈಶ್ವರ ಖಂಡ್ರೆ ಚಿತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಹೀಗಾಗಿ ಚಿತ್ರ ಬಿಡುಗಡೆಗೆ ಚುನಾವಣಾ ನೀತಿ ಸಂಹಿತೆ ಅಡ್ಡಿಯಾಗಿತ್ತು.

ರೈತನೇ ನಿಜವಾದ ಶ್ರೀಮಂತ ಎಂಬ ಆಶಯ ಹೊಂದಿರುವ ಈ ಚಿತ್ರದಲ್ಲಿ ಹಳ್ಳಿಗಾಡಿನ ಬದುಕು ತೋರಿಸಲಾಗಿದೆ. ನಟ ಕ್ರಾಂತಿ, ನಟಿ ಕಲ್ಯಾಣಿ, ವೈಷ್ಣವಿ ಚಂದ್ರನ್ ಮೆನನ್, ರಮೇಶ್ ಭಟ್, ರವಿಶಂಕರ್ ಗೌಡ, ಸಾಧು ಕೋಕಿಲ, ಚರಣ್ ರಾಜ್, ಗಿರಿ, ರಾಜು ತಾಳಿಕೋಟೆ ತಾರಾಗಣದಲ್ಲಿದ್ದಾರೆ. ಚಿತ್ರಕ್ಕೆ ಹಂಸಲೇಖ ಅವರ ಸಂಗೀತ, ಸಾಹಿತ್ಯವಿದೆ. ಚಿತ್ರದ ಶೀರ್ಷಿಕೆ ಗೀತೆಯನ್ನು ದಿವಂಗತ ಎಸ್.ಪಿ.ಬಾಲಸುಬ್ರಹ್ಮಣ್ಯಂ ಹಾಡಿದ್ದಾರೆ. ಇದು ಅವರು ಹಾಡಿದ ಕೊನೆಯ ಹಾಡಾಗಿತ್ತಂತೆ. ರವಿಕುಮಾರ್ ಅವರ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನವಿದೆ.

ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಕಥೆ ಆಧಾರಿತ ಚಿತ್ರ 'ಡೇರ್ ಡೆವಿಲ್ ಮುಸ್ತಫಾ' ಕೂಡ ಇಂದು ತೆರೆ ಕಾಣುತ್ತಿದೆ. ಈ ಹಿಂದೆ ಕಿರುಚಿತ್ರಗಳನ್ನು ಮಾಡಿದ್ದ ಶಶಾಂಕ್ ಸೋಗಲ್ ಚಿತ್ರದ ನಿರ್ದೇಶಕರು. ತೇಜಸ್ವಿಯವರ ಓದುಗರೇ ಸಿನಿಮಾಮರ ಬ್ಯಾನರ್‌ನಲ್ಲಿ ಈ ಸಿನಿಮಾವನ್ನು ನಿರ್ಮಿಸಿದ್ದಾರೆ. ರಾಹುಲ್ ರಾಯ್ ಛಾಯಾಗ್ರಹಣ, ನವನೀತ್ ಶ್ಯಾಮ್ ಸಂಗೀತವಿದೆ.

ಎಂ.ಎಸ್. ಉಮೇಶ್, ಮಂಡ್ಯ ರಮೇಶ್, ಮೈಸೂರ್ ಆನಂದ್, ಸುಂದರ್ ವೀಣಾ, ನಾಗಭೂಷಣ್, ಪೂರ್ಣಚಂದ್ರ ಮೈಸೂರು ಸೇರಿ ಅನೇಕ ಕಲಾವಿದರು ಈ ಸಿನಿಮಾದ ಭಾಗವಾಗಿದ್ದಾರೆ.

ರಾಜ್ಯ ಮಟ್ಟದ ಹಾಕಿ ಆಟಗಾರ ಆದ್ಯ ತಿಮ್ಮಯ್ಯ ನಟಿಸಿ, ನಿರ್ದೇಶಿಸಿರುವ 'ಜರ್ಸಿ ನಂಬರ್ 10' ಚಿತ್ರ ಕೂಡ ತೆರೆ ಕಾಣುತ್ತಿದೆ. ಹಾಕಿ ಕ್ರೀಡೆ ಕುರಿತಾದ ಮೊದಲ ಅಧಿಕೃತ ಕನ್ನಡ ಚಿತ್ರ ಎಂದು ಚಿತ್ರತಂಡ ಹೇಳಿಕೊಂಡಿದೆ. ಆದ್ಯ ತಿಮ್ಮಯ್ಯ ಮತ್ತು ಲಾಲು ತಿಮ್ಮಯ್ಯ ಮತ್ತು ರಾಶಿನ್ ಸುಬ್ಬಯ್ಯ ಜಂಟಿಯಾಗಿ ನಿರ್ಮಿಸಿದ್ದಾರೆ.

ನಟ ಥ್ರಿಲ್ಲರ್ ಮಂಜು ಚಿತ್ರದಲ್ಲಿ ತರಬೇತುದಾರನಾಗಿ ನಟಿಸಿದ್ದಾರೆ. ಹಿರಿಯ ನಟ ದತ್ತಣ್ಣ, ಚಂದನ್ ಮಂಜುನಾಥ್, ಚಂದನ್ ಆಚಾರ್, ಮಂಡ್ಯ ರಮೇಶ್, ಟೆನ್ನಿಸ್ ಕೃಷ್ಣ ಮತ್ತು ಜೈ ಜಗದೀಶ್ ಮೊದಲಾದವರಿದ್ದಾರೆ. ಜುಬಿನ್ ಪೌಲ್ ಸಂಗೀತ ಸಂಯೋಜಿಸಿದ್ದಾರೆ. ಉದಯ್ ಬಲ್ಲಾಳ್ ಅವರ ಛಾಯಾಗ್ರಹಣ ಮತ್ತು ಸುರೇಶ್ ಅರಸ್ ಸಂಕಲನವಿದೆ. ❖


ಕಲ್ಯಾಣಿ

ವೆಬ್ ಸರಣಿಯಲ್ಲಿ 'ಲವ್ ಯು' ಎಂದ ಅದಿತಿ–ವಿಕ್ರಮ್


ಅದಿತಿ ಹಾಗೂ ವಿಕ್ರಮ್

ಬಾಲಿವುಡ್‌ನ ಹಲವು ಸಿನಿಮಾ ನಟ, ನಟಿಯರು ವೆಬ್ ಸರಣಿ ಲೋಕಕ್ಕೆ ಕಾಲಿಟ್ಟು ಮಿಂಚುತ್ತಿದ್ದಾರೆ. ಇದೀಗ ಈ ಸರದಿ ಚಂದನವನದ ಕಲಾವಿದರದ್ದು. ಕಾಳಿ ವೇಲಾಯುಧಂ ನಿರ್ಮಾಣ ಮಾಡಿ ನಿರ್ದೇಶಿಸಿರುವ 'ಲವ್ ಯು ಅಭಿ' ವೆಬ್ ಸರಣಿ ಜಿಯೋ ಸಿನಿಮಾದಲ್ಲಿ ಬಿಡುಗಡೆಗೆ ಸಜ್ಜಾಗಿದ್ದು, ವಿಕ್ರಮ್ ರವಿಚಂದ್ರನ್, ಅದಿತಿ ಪ್ರಭುದೇವ ಹಾಗೂ ರವಿಶಂಕರ್ ಈ ಸರಣಿಯಲ್ಲಿ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.

ಮೇ 19ರಂದು ಈ ಸರಣಿ ಬಿಡುಗಡೆಯಾಗಲಿದ್ದು, 30 ನಿಮಿಷಗಳ ಏಳು ಕಂತುಗಳಲ್ಲಿ 'ಅಭಿ'ಯ ಬದುಕಿನ ಕಥೆಯನ್ನು ಹೇಳಲಾಗಿದೆ ಎಂದಿದೆ ತಂಡ. ವಿಕ್ರಮ್ ರವಿಚಂದ್ರನ್ ಅವರಿಗೆ ಇದು ಮೊದಲ ವೆಬ್ ಸಿರೀಸ್. 'ಶಿವ ನಿಮ್ಮನ್ನು ಕಾಡುತ್ತಾನೆ, ನಿಮ್ಮ ಮನಸ್ಸನ್ನು ಚುಚ್ಚುತ್ತಾನೆ. ಏಕೆಂದರೆ ಈ ಶಿವ ಎಲ್ಲರೊಳಗೂ ಇದ್ದಾನೆ. ಹಲವು ನಿಗೂಢಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಅದನ್ನು ಯಾರೊಂದಿಗೂ ಹಂಚಿಕೊಳ್ಳದ ವ್ಯಕ್ತಿ ಆತ. ಒಂದೊಮ್ಮೆ ಅವನು ಹಂಚಿಕೊಳ್ಳಲು ಯತ್ನಿಸಿದರೂ ಪರಿಸ್ಥಿತಿ ಅದಕ್ಕೆ ವಿರುದ್ಧವಾದ ಸನ್ನಿವೇಶವನ್ನು ಸೃಷ್ಟಿಸಿಬಿಡುತ್ತದೆ' ಎಂದು ತಮ್ಮ ಪಾತ್ರದ ಕುರಿತು ವಿವರಿಸುತ್ತಾರೆ 'ಶಿವ'ನ ಪಾತ್ರದಲ್ಲಿ ನಟಿಸಿರುವ ವಿಕ್ರಮ್.

ಕಿರುತೆರೆ ಮತ್ತು ಬೆಳ್ಳಿತೆರೆಯಲ್ಲಿ ಮಿಂಚಿರುವ ಅದಿತಿ ಪ್ರಭುದೇವ 'ಲವ್ ಯು ಅಭಿ'ಯ ಮೂಲಕ ವೆಬ್ ಸರಣಿ ಜಗತ್ತಿಗೂ ಕಾಲಿಟ್ಟಿದ್ದಾರೆ. ವಿಕ್ರಮ್–ಅದಿತಿ ಕಾಂಬಿನೇಷನ್ ಜೊತೆ ನಟ ರವಿಶಂಕರ್ ಅವರ ಅಭಿನಯದ ಮೋಡಿಯೂ ಸರಣಿಯಲ್ಲಿದೆ. ಪೊಲೀಸ್ ಅಧಿಕಾರಿಯಾಗಿ ರವಿಶಂಕರ್ ಇಲ್ಲಿ ಕಾಣಿಸಿಕೊಂಡಿದ್ದಾರೆ.

'ಅಭಿ ಎನ್ನುವ ಪಾತ್ರ ನನ್ನ ಇಡೀ ವ್ಯಕ್ತಿತ್ವಕ್ಕೇ ಸವಾಲು ಹಾಕಿದ ಪಾತ್ರ. ಆ ಪಾತ್ರದಲ್ಲಿ ನಟಿಸುತ್ತ ನನ್ನ ವ್ಯಕ್ತಿತ್ವದಲ್ಲೂ ಸಾಕಷ್ಟು ಬದಲಾವಣೆಗಳನ್ನು ಮಾಡಿಕೊಂಡಿದ್ದೇನೆ. ಬಹುಶಃ ತುಂಬ ಜನರಿಗೆ 'ಅಭಿ' ಇಷ್ಟವಾಗುತ್ತಾಳೆ' ಎನ್ನುತ್ತಾರೆ ಅದಿತಿ.

ಈ ಸಸ್ಪೆನ್ಸ್ ಥ್ರಿಲ್ಲರ್ ಕಥೆಯಲ್ಲಿ ವಿನಯಾ ಪ್ರಸಾದ್, ರಚಿತಾ ಮಹಾಲಕ್ಷ್ಮಿ, ಅಶೋಕ್ ಶರ್ಮ, ಶ್ರೀನಾಥ್, ಅಂಬಿಕಾ, ಶ್ರೀನಿವಾಸ ಮೂರ್ತಿ, ಸುಂದರ್‌ರಾಜ್ ಹೀಗೆ ಕಲಾವಿದರ ದೊಡ್ಡ ಬಳಗವೇ ಇದೆ. 'ಲವ್ ಯು ಅಭಿ'ಗೆ ಅರುಣ್ ಬ್ರಹ್ಮ ಅವರ ಛಾಯಾಚಿತ್ರಗ್ರಹಣ, ಪ್ರದೀಪ್ ರಾಘವ್ ಸಂಕಲನವಿದೆ. ನಿಜಿಲ್ ದಿನಕರ್ ಸಂಗೀತ ನಿರ್ದೇಶನ ಮತ್ತು ಧ್ವನಿ ವಿನ್ಯಾಸವನ್ನು ನಿರ್ವಹಿಸಿದ್ದಾರೆ. ❖

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್ಎಸ್ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್ ನಂ. 75, ಮಹಾತ್ಮ ಗಾಂಧಿ ರಸ್ತೆ ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023 ರ ಸಾಲಿನ ಎಸ್ಎಸ್ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಶೈಕ್ಷಣಿಕ ನೆರವು, ವಿದ್ಯಾರ್ಥಿ ಮಾತು

ವಿದ್ಯಾರ್ಥಿ ವೇತನದಿಂದ ಪುಸ್ತಕ ಖರೀದಿ



ಕಾಲೇಜು ಹಂತದಲ್ಲಿ ಪುಸ್ತಕಗಳಿಗೆ ಹೆಚ್ಚು ಹಣ ವೆಚ್ಚವಾಗುತ್ತದೆ. 'ಪ್ರಜಾವಾಣಿ' ನೀಡಿದ ವಿದ್ಯಾರ್ಥಿ ವೇತನದಿಂದ ಪುಸ್ತಕಗಳನ್ನು ಖರೀದಿಸಿದೆ. ಪತ್ರಿಕೆಯ ಈ ಕೆಲಸ ಮೆಚ್ಚುವಂತಹದ್ದು. ಹೀಗೆ ನಿರಂತರವಾಗಿ ನಮ್ಮಂತಹ ವಿದ್ಯಾರ್ಥಿಗಳಿಗೆ ಅನುಕೂಲವಾಗುವ ಕೆಲಸವನ್ನು 'ಪ್ರಜಾವಾಣಿ' ಮುಂದುವರಿಸಲಿ.

ಬಿ.ಎಸ್.ಪೃಥ್ವಿಕ, ಗೌರಿಬಿದನೂರು, ಚಿಕ್ಕಬಳ್ಳಾಪುರ

ಶುಲ್ಕ ಕಟ್ಟಲು ನೆರವಾಯಿತು



ನನಗೆ ಹಣಕಾಸಿನ ತೊಂದರೆ ಇತ್ತು. ಶುಲ್ಕ ಕಟ್ಟಲು ಕಷ್ಟಸಾಧ್ಯವಾಗಿತ್ತು. ಅಂತಹ ಸಂದರ್ಭದಲ್ಲಿ 'ಪ್ರಜಾವಾಣಿ' ನೀಡಿದ ಆರ್ಥಿಕ ನೆರವು ಕಾಲೇಜು ಶುಲ್ಕ ಕಟ್ಟಲು ನೆರವಾಯಿತು. ಪ್ರಸ್ತುತ ಹಾವೇರಿಯ ಎಂಆರ್ ಎಂ ಕಾಲೇಜಿನಲ್ಲಿ ಸೈನ್ಸ್ ಓದುತ್ತಿದ್ದೇನೆ. ಐಎಎಸ್ ಅಧಿಕಾರಿಯಾಗುವ ಗುರಿಯಿದೆ. ಪ್ರಜಾವಾಣಿ ನನಗೆ ಸಹಾಯ ಮಾಡಿದೆ, ನಾನು ಅಧಿಕಾರಿಯಾಗಿ ಬಡ ವಿದ್ಯಾರ್ಥಿಗಳಿಗೆ ಸಹಾಯ ಮಾಡುವ ಹಂಬಲವಿದೆ.

ರೇಖಾ ಬಸಪ್ಪ ದ್ಯಾಮಣ್ಣನವರ, ಕಬ್ಬೂರು, ಹಾವೇರಿ

ಶೆಡ್ ಕುಸಿದು ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಮೈಸೂರು/ಕೊಡಗು: ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಹಾಗೂ ಕೊಡಗು ಜಿಲ್ಲೆಯ ಕುಶಾಲನಗರ, ನಾಪೋಕ್ಲು, ಮಡಿಕೇರಿ ನಗರ, ಸಿದ್ದಾಪುರ, ಸೋಮವಾರಪೇಟೆಯಲ್ಲಿ ಗುರುವಾರ ಬಿರುಗಾಳಿ ಸಹಿತ ಧಾರಾಕಾರ ಮಳೆ ಸುರಿದಿದೆ.

ಪಿರಿಯಾಪಟ್ಟಣ ತಾಲ್ಲೂಕಿನ ಕಂದೇಗಾಲ ಗ್ರಾಮದಲ್ಲಿ ಕೂಲಿಗೆ ತೆರಳಿದ್ದ ಶೋಭಾ (37) ಅವರ ಮೇಲೆ ಟ್ರ್ಯಾಕ್ಟರ್ ಶೆಡ್ ಕುಸಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಕೆಲವು ಗ್ರಾಮಗಳಲ್ಲಿ ಕೊಯ್ಲಿಗೆ ಬಂದಿದ್ದ ಮಾವಿನ ಕಾಯಿಗಳು ಬಿರುಗಾಳಿಗೆ ನೆಲಕಚ್ಚಿವೆ. ಪಿರಿಯಾಪಟ್ಟಣ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ದನದ ಕೊಟ್ಟಿಗೆ, ರೇಷ್ಮೆ ಶೆಡ್‌ನ ಚಾವಣಿಯ ಶೀಟ್‌ಗಳು ಹಾರಿ ಹೋಗಿವೆ. ಹಲವೆಡೆ ಭಾರಿ ಗಾತ್ರದ ಮರಗಳು ಬಿದ್ದು ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಕಂಬಗಳು ಉರುಳಿ ಬಿದ್ದ ಪರಿಣಾಮ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿತ್ತು.



ಪಿರಿಯಾಪಟ್ಟಣ ತಾಲ್ಲೂಕಿನ ಚಿಟ್ಟೇನಹಳ್ಳಿ ಬಳಿ ಮೈಸೂರು–ಮಡಿಕೇರಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾರಿ ಗಾತ್ರದ ಮರವೊಂದು ರಸ್ತೆಗೆ ಉರುಳಿ ಬಿದ್ದ ಪರಿಣಾಮ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು

ಕುಶಾಲನಗರ ತಾಲ್ಲೂಕಿನ ಚಿಟ್ಟೇನಹಳ್ಳಿ ಬಳಿ ಮೈಸೂರು–ಮಡಿಕೇರಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾರಿ ಗಾತ್ರದ ಮರ ಉರುಳಿ ವಾಹನ ಸಂಚಾರಕ್ಕೆ ತೊಂದರೆ ಉಂಟಾಗಿತ್ತು.

ಕುಶಾಲನಗರ ತಾಲ್ಲೂಕಿನ ಸುಂಟಿಕೊಪ್ಪ ಸಮೀಪದ ನಾಡ ಕಚೇರಿ ಹಿಂಭಾಗದ ಲೋಕೋಪಯೋಗಿ ಇಲಾಖೆಯ ನೌಕರ ಮುಕ್ತಾರ್ ಎಂಬುವರ ಮನೆಯ ಮೇಲೆ ಬೃಹತ್ ಮರವೊಂದು ಉರುಳಿ ಬಿದ್ದಿದೆ. ಈ ವೇಳೆ ನಾಲ್ವರು ಮಕ್ಕಳು ಸೇರಿ ಕುಟುಂಬದ ಆರು ಜನ ಮನೆಯಲ್ಲೇ ಇದ್ದರು. ಮರ ಬೀಳುವ ಸದ್ದು ಕೇಳಿ ಹೊರಗೆ ಓಡಿ ಬಂದು ಜೀವ ಉಳಿಸಿಕೊಂಡಿದ್ದಾರೆ. ರಾಮನಗರ ಜಿಲ್ಲೆಯ ಕನಕಪುರದಲ್ಲೂ ಮಳೆಯಾಗಿದೆ.

2 ದಿನ ಮಳೆ

ಬೆಂಗಳೂರು: ರಾಜ್ಯದ ಕರಾವಳಿ ಹಾಗೂ ಮಲೆನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಶುಕ್ರವಾರ ಹಾಗೂ ಶನಿವಾರ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ಕರಾವಳಿ ವ್ಯಾಪ್ತಿಯ ದಕ್ಷಿಣ ಕನ್ನಡ, ದಕ್ಷಿಣ ಒಳನಾಡಿನ ಚಾಮರಾಜನಗರ, ಕೊಡಗು, ಮಂಡ್ಯ, ಚಿಕ್ಕಮಗಳೂರು, ಮೈಸೂರು ಜಿಲ್ಲೆಯ ಅಲ್ಲಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಸೂಚನೆ ನೀಡಿದೆ. ಬೆಂಗಳೂರು ನಗರದಲ್ಲೂ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಅಥವಾ ರಾತ್ರಿ ವೇಳೆಯಲ್ಲಿ ಮಳೆಯಾಗಲಿದೆ.

ಗುರುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆ ಅವಧಿಯಲ್ಲಿ ಕೊಡಗಿನ ನಾಪೋಕ್ಲು ಸುತ್ತಮುತ್ತ 3 ಸೆಂ.ಮೀ ಮಳೆಯಾಗಿದೆ.

ಹುದ್ದೆ ಕಡಿತಕ್ಕೆ ಮುಂದಾದ ನೈರುತ್ಯ ರೈಲ್ವೆ

ಒಂದನೇ ಪುಟದಿಂದ...

'ರೈಲ್ವೆಯು ಹಲವು ವರ್ಷಗಳಿಂದ ಈ ಕೆಲಸ ಮಾಡಿಕೊಂಡು ಬಂದಿದೆ. ಇದರಿಂದ ಸೇವೆ ಒದಗಿಸಲು ಮತ್ತು ಪ್ರಕ್ರಿಯೆಗಳನ್ನು ಮತ್ತಷ್ಟು ಅತ್ಯುತ್ತಮಪಡಿಸಲು ಅನುಕೂಲವಾಗುತ್ತದೆ' ಎಂದು ನೈರುತ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಅನೀಶ್ ಹೆಗಡೆ ಪ್ರತಿಕ್ರಿಯಿಸಿದ್ದಾರೆ.

ಕೊರತೆ ಇದ್ದರೂ ಕಡಿತ: ನೈರುತ್ಯ ರೈಲ್ವೆಗೆ ಮಂಜೂರಾಗಿರುವ 42,545 ಹುದ್ದೆಗಳ ಪೈಕಿ 36,385 ಹುದ್ದೆಗಳನ್ನಷ್ಟೇ ತುಂಬಲಾಗಿದೆ. 6,610 ಸಿಬ್ಬಂದಿ ಕೊರತೆಯನ್ನು ರೈಲ್ವೆ ಎದುರಿಸುತ್ತಿದೆ. ಮಂಜೂರಾಗಿರುವ 41,947 ನಾನ್ ಗೆಜೆಟೆಡ್ ಹುದ್ದೆಗಳಲ್ಲಿ ಸದ್ಯ ಇರುವುದು 35,866 ಮಾತ್ರ. 598 ಗೆಜೆಟೆಡ್ ಹುದ್ದೆಗಳಲ್ಲಿ 519 ಮಾತ್ರ ಭರ್ತಿಯಾಗಿವೆ ಎಂದು ಮೂಲಗಳು ತಿಳಿಸಿವೆ.

ಹಳ್ಳಿಗಳಿಗೆ ಜೆಸ್ಕಾಂ ಸಿಬ್ಬಂದಿಗೆ ಪ್ರವೇಶವಿಲ್ಲ • ₹845 ಕೋಟಿ ಬಾಕಿ • ಶೇ 30ರಷ್ಟು ಮೀಟರ್ ಅಳವಡಿಸಿಲ್ಲ

ವಿದ್ಯುತ್ ಬಿಲ್ ಪಾವತಿಗೆ ಗ್ರಾಹಕರ ನಕಾರ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಪಡೆದ ಬಳಿಕ ಗ್ರಾಹಕರು ವಿದ್ಯುತ್ ಬಿಲ್ ಪಾವತಿಸಲು ನಿರಾಕರಿಸುತ್ತಿದ್ದಾರೆ. ಹಳ್ಳಿಗಳಲ್ಲಂತೂ ವಿದ್ಯುತ್ ಬಿಲ್ ಕೊಡಲು ಬರುವ 'ಗುಲ್ಬರ್ಗಾ ಇಲೆಕ್ಟ್ರಿಕಲ್ ಕಂಪನಿ'ಯ (ಜೆಸ್ಕಾಂ) ಸಿಬ್ಬಂದಿಯನ್ನು ಒಳಗೇ ಬಿಡುತ್ತಿಲ್ಲ.

'ಕಾಂಗ್ರೆಸ್ ಗೆದ್ದರೆ ಪ್ರತಿ ತಿಂಗಳು ಪ್ರತಿ ಮನೆಗೆ 200 ಯುನಿಟ್ ವಿದ್ಯುತ್ ಉಚಿತ ಎಂದು ಆ ಪಕ್ಷ ಗ್ಯಾರಂಟಿ ಕೊಟ್ಟಿದೆ. ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿರುವುದರಿಂದ ನಾವು ವಿದ್ಯುತ್ ಬಿಲ್ ಕಟ್ಟುವುದಿಲ್ಲ' ಎಂದು ಗ್ರಾಹಕರು ಹೇಳುತ್ತಿದ್ದಾರೆ.

ಮೇ 10ರಂದು ವಿಧಾನಸಭೆ ಚುನಾವಣೆ ನಡೆದು ಮೇ 13ರಂದು ಫಲಿತಾಂಶ ಪ್ರಕಟವಾಗಿದೆ. ಐದು ದಿನಗಳಿಂದ ಹಳ್ಳಿಗಳಿಗೆ ಹೋಗುತ್ತಿರುವ ಜೆಸ್ಕಾಂ ಮೀಟರ್ ರೀಡರ್‌ಗಳು ಇದೇ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಚಾಲ್ತಿ ವಿದ್ಯುತ್ ಬಿಲ್‌ಗಳು ಹೋಗಲಿ, ಹಳೇ ಬಾಕಿಯನ್ನು ಪಾವತಿಸುತ್ತಿಲ್ಲ ಎಂದು ಜೆಸ್ಕಾಂ ಮೂಲಗಳು ತಿಳಿಸಿವೆ.



ಬಳ್ಳಾರಿಯ ಜೆಸ್ಕಾಂ ಕಚೇರಿಯು ಗ್ರಾಹಕರೇ ಇಲ್ಲದೆ ಬಿಕೋ ಎನ್ನುತ್ತಿದೆ

ಬಳ್ಳಾರಿ, ವಿಜಯನಗರ ಜಿಲ್ಲೆಗಳಲ್ಲಿ ಒಟ್ಟು 7.76 ಲಕ್ಷ ಗ್ರಾಹಕರಿದ್ದು, ಈ ವರ್ಷ ಮಾರ್ಚ್ ಅಂತ್ಯದವರೆಗೆ ಬರಬೇಕಾದ ಬಾಕಿ ₹ 845 ಕೋಟಿ. ಪ್ರತಿ ತಿಂಗಳು ಜೆಸ್ಕಾಂ ತನ್ನ ಗ್ರಾಹಕರಿಗೆ ₹ 20.66 ಕೋಟಿ ಮೊತ್ತದ ವಿದ್ಯುತ್ ಪೂರೈಸುತ್ತಿದೆ. ವಸೂಲಾಗುತ್ತಿರುವ ಬಿಲ್ ₹ 18.80 ಕೋಟಿ. ಇದರಿಂದಾಗಿ ತಿಂಗಳಿಗೆ ಸುಮಾರು ₹ 2 ಕೋಟಿ ನಷ್ಟವಾಗುತ್ತಿದೆ ಎಂದೂ ಮೂಲಗಳು ಸ್ಪಷ್ಟಪಡಿಸಿವೆ.

ಪೂರೈಕೆ ಮತ್ತಿತರ ಸೋರಿಕೆಯಿಂದ ಶೇ 12ರಷ್ಟು ವಿದ್ಯುತ್ ನಷ್ಟವಾಗುತ್ತಿದೆ. ಮೊದಲು ನಷ್ಟದ ಪ್ರಮಾಣ ಶೇ 15ರಷ್ಟಿತ್ತು. ಈ ಪ್ರಮಾಣ ತಗ್ಗಿಸಲಾಗಿದೆ. ಭಾಗ್ಯಜ್ಯೋತಿ ಫಲಾನುಭವಿಗಳಿಗೆ 40 ಯುನಿಟ್ ಉಚಿತವಾಗಿ ಪೂರೈಕೆ ಮಾಡಲಾಗುತ್ತಿದೆ. ಕೃಷಿ ಪಂಪ್‌ಸೆಟ್‌ಗಳಿಗೆ 7 ಗಂಟೆ ಉಚಿತ ವಿದ್ಯುತ್ ಕೊಡಲಾಗುತ್ತಿದೆ. ಇದಲ್ಲದೆ, ಇನ್ನೂ ಶೇ 30ರಷ್ಟು ಗ್ರಾಹಕರಿಗೆ ಮೀಟರ್‌ಗಳನ್ನೇ ಅಳವಡಿಸಿಲ್ಲ.

ಕಾಂಗ್ರೆಸ್ ಗ್ಯಾರಂಟಿಯಂತೆ ಪ್ರತಿ ತಿಂಗಳು ಪ್ರತಿ ಮೀಟರ್‌ಗೆ 200 ಯುನಿಟ್ ವಿದ್ಯುತ್ ಉಚಿತವಾಗಿರುವುದರಿಂದ ತಿಂಗಳಿಗೆ ಒಂದು ಮೀಟರ್‌ಗೆ ₹ 450ರಿಂದ ₹ 500ರವರೆಗೆ ಸರ್ಕಾರಕ್ಕೆ ಹೊರೆಯಾಗಲಿದೆ. ಈಗಾಗಲೇ, ಉಚಿತವಾಗಿರುವ ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಯೋಜನೆಗಳನ್ನು 200 ಯುನಿಟ್‌ನಲ್ಲಿ ವಿಲೀನ ಮಾಡಲಾಗುವುದೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳು ವಿದ್ಯುತ್‌ಗೆ ಉಷ್ಣ ವಿದ್ಯುತ್ ಸ್ಥಾವರ ಮತ್ತು ಸೌರ ಶಕ್ತಿಯನ್ನು ಅವಲಂಬಿಸಿದೆ. ಬಳ್ಳಾರಿ ತಾಲ್ಲೂಕಿನ ಪಿ.ಡಿ. ಹಳ್ಳಿ ಬಳಿಯ ಸೌರಶಕ್ತಿ ಘಟಕಗಳಿಂದ 70 ಮೆಗಾವ್ಯಾಟ್ ವಿದ್ಯುತ್ ಪೂರೈಕೆ ಆಗುತ್ತಿದೆ ಎಂದೂ ಮೂಲಗಳು ಸ್ಪಷ್ಟಪಡಿಸಿವೆ.

ಯೋಜನೆ ವಿವರ (₹ಕೋಟಿಗಳಲ್ಲಿ)

ಯೋಜನೆ	ಬಾಕಿ
ಭಾಗ್ಯಜ್ಯೋತಿ	22.73
ಏತ ನೀರಾವರಿ	29.38
ವಿದ್ಯುತ್ ಪಂಪ್‌ಸೆಟ್	158.58
ಗೃಹಬಳಕೆದಾರರು	88
ಬೀದಿ ದೀಪ, ಕುಡಿಯುವ ನೀರು	546

ಬಳ್ಳಾರಿ, ವಿಜಯನಗರ ವಿದ್ಯುತ್ ಗ್ರಾಹಕರ ಅಂಕಿ–ಅಂಶ

7.76 ಲಕ್ಷ ಒಟ್ಟು ವಿದ್ಯುತ್ ಗ್ರಾಹಕರು

1.25 ಲಕ್ಷ ಭಾಗ್ಯಜ್ಯೋತಿ ಫಲಾನುಭವಿಗಳು

4.43 ಲಕ್ಷ ಗೃಹ ಬಳಕೆದಾರರು

64 ಸಾವಿರ ವಾಣಿಜ್ಯ ಬಳಕೆದಾರರು

95 ಸಾವಿರ ನೀರಾವರಿ ಪಂಪ್‌ಸೆಟ್

ನಿರ್ಧಾರದ ನಿರೀಕ್ಷೆ: ಎಸ್‌ಇ



ಪ್ರತಿ ಮೀಟರ್‌ಗೆ 200 ಯುನಿಟ್ ವಿದ್ಯುತ್ ಉಚಿತವಾಗಿ ನೀಡುವುದಾಗಿ ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಹೇಳಿದೆ. ರಾಜ್ಯ ಸರ್ಕಾರ ರಚನೆಯಾದ ಬಳಿಕ ಈ ಸಂಬಂಧ ತೀರ್ಮಾನ ಕೈಗೊಳ್ಳಲಿದೆದೆ. ಸರ್ಕಾರದ ತೀರ್ಮಾನದ ನಿರೀಕ್ಷೆಯಲ್ಲಿ ನಾವೂ ಇದ್ದೇವೆ ಎಂದು ಜೆಸ್ಕಾಂ ಬಳ್ಳಾರಿ ಸರ್ಕಲ್ (ಬಳ್ಳಾರಿ, ವಿಜಯನಗರ ಜಿಲ್ಲೆ) ಅಧೀಕ್ಷಕ ಎಂಜಿನಿಯರ್ ಬಿ. ವೆಂಕಟೇಶುಲು ಹೇಳಿದ್ದಾರೆ.

ರಾಜ್ಯ ಸರ್ಕಾರದ ತೀರ್ಮಾನ ಆಗುವವರೆಗೆ ಗ್ರಾಹಕರು ಸಹಕರಿಸಬೇಕು. ಬಿಲ್ ಮತ್ತು ಹಳೇ ಬಾಕಿ ಪಾವತಿಸಬೇಕು ಎಂದು ಮನವಿ ಮಾಡಿದ್ದಾರೆ.

ಮುಗಿದ ಮೇಲಾಟ: ಸಂಪುಟ ಜಂಜಾಟ

ಒಂದನೇ ಪುಟದಿಂದ...

135 ಶಾಸಕರು ಆಯ್ಕೆಯಾಗಿರುವುದರಿಂದಾಗಿ ಯಾರೆಲ್ಲ ಸಂಪುಟದಲ್ಲಿ ಇರಬೇಕು ಎಂಬ ತೀರ್ಮಾನ ಕೈಗೊಳ್ಳುವುದು ವರಿಷ್ಠರಿಗೆ ಸವಾಲಾಗಿದೆ. ಅನೇಕ ನಾಯಕರು ಈಗಾಗಲೇ, ಸಚಿವ ಸ್ಥಾನಕ್ಕೆ ತಮ್ಮ ಹಕ್ಕು ಮಂಡಿಸಿದ್ದಾರೆ. ಜಾತಿ, ಪ್ರಾದೇಶಿಕತೆ ಹಾಗೂ ಸಿದ್ದರಾಮಯ್ಯ–ಶಿವಕುಮಾರ್ ಅವರ ಆಪ್ತ ಬಣದ ವಾದವನ್ನು ಮುಂದಿಟ್ಟು, ಶಾಸಕರು ಹಕ್ಕೊತ್ತಾಯ ಮಂಡಿಸುವುದರಿಂದಾಗಿ, ಆಯ್ಕೆ ಮತ್ತು ಖಾತೆ ಹಂಚಿಕೆ ವರಿಷ್ಠರನ್ನು ಇಕ್ಕಟ್ಟಿಗೆ ದೂಡುವ ಸಾಧ್ಯತೆಯೂ ಇದೆ.

ಇಬ್ಬರು ನಾಯಕರು, ತಮ್ಮ ಆಪ್ತರಿಗೆ ಸಚಿವ ಸ್ಥಾನ ಹಾಗೂ ಆಯಕಟ್ಟಿನ ಖಾತೆ ಕೊಡಿಸಬೇಕಿದ್ದು, ಈ ಪ್ರಕ್ರಿಯೆ ಮೇಲೆ ಎಲ್ಲರ ಕುತೂಹಲ ನೆಟ್ಟಿದೆ.

'ಮಹದಾಯಿ'ಗೆ ಗೋವಾ ಬಿಜೆಪಿ ವಿರೋಧ

ಪಣಜಿ: 'ಕರ್ನಾಟಕವು ಕಳಸ–ಬಂಡೂರಿ ಯೋಜನೆ ಅನುಷ್ಠಾನಗೊಳಿಸುವುದನ್ನು ತಡೆಯಲು ಸಾಧ್ಯವಿರುವ ಎಲ್ಲ ಕ್ರಮಗಳನ್ನು ರಾಜ್ಯ ಸರ್ಕಾರ ಕೈಗೊಳ್ಳಬೇಕು' ಎಂಬ ನಿರ್ಣಯವನ್ನು ಬಿಜೆಪಿಯ ಗೋವಾ ಘಟಕ ಗುರುವಾರ ಅಂಗೀಕರಿಸಿದೆ.

ಕರ್ನಾಟಕ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಪಕ್ಷವು ಹೀನಾಯವಾಗಿ ಸೋತ ಬೆನ್ನಲ್ಲೇ, ಪಕ್ಷದ ರಾಜ್ಯ ಘಟಕ ಇಂತಹ ರಾಜಕೀಯ ನಿರ್ಣಯವನ್ನು ಕೈಗೊಂಡಿದೆ.

'ಮಹದಾಯಿ ನದಿ ನೀರು ಹಂಚಿಕೆ ಯೋಜನೆಗೆ ಸಂಬಂಧಿಸಿ ಕರ್ನಾಟಕ ಸಲ್ಲಿಸಿರುವ ಡಿಪಿಆರ್‌ಗೆ ಕೇಂದ್ರ ಜಲ ಆಯೋಗ ಅನುಮೋದನೆ ನೀಡಿದೆ. ಆದರೆ, ಈ ಯೋಜನೆಯು ಮಹದಾಯಿ ನದಿಯ ಅಸ್ತಿತ್ವಕ್ಕೇ ಬೆದರಿಕೆ ಒಡ್ಡಲಿದೆ' ಎಂದೂ ನಿರ್ಣಯದಲ್ಲಿ ಹೇಳಲಾಗಿದೆ.

ಇದೇ 28ಕ್ಕೆ ಹೊಸ ಸಂಸತ್ ಭವನ ಉದ್ಘಾಟನೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಇದೇ 28ರಂದು ನೂತನ ಸಂಸತ್ ಭವನವನ್ನು ಉದ್ಘಾಟಿಸಲಿದ್ದಾರೆ.

'ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಮೋದಿ ಅವರನ್ನು ಗುರುವಾರ ಭೇಟಿಯಾಗಿದ್ದರು. ಈ ವೇಳೆ ಅವರಿಗೆ ಆಹ್ವಾನ ಪತ್ರಿಕೆ ನೀಡಿದ್ದು, ಹೊಸ ಸಂಸತ್ ಭವನದ ಉದ್ಘಾಟನೆ ಕಾರ್ಯಕ್ರಮಕ್ಕೆ ಆಗಮಿಸುವಂತೆ ಕೋರಿದ್ದಾರೆ' ಎಂದು ಲೋಕಸಭೆ ಸಚಿವಾಲಯ ತಿಳಿಸಿದೆ.

ವಿವಾದಕ್ಕೀಡಾಗಿದ್ದ ಸುಪ್ರೀಂಕೋರ್ಟ್ ಕೊಲಿಜಿಯಂ ಕುರಿತ ರಿಜಿಜು ಹೇಳಿಕೆ

ನ್ಯಾಯಾಂಗದೊಂದಿಗೆ ಸಂಘರ್ಷವೇ ಹೆಚ್ಚು

ನವದೆಹಲಿ (ಪಿಟಿಐ): ಕಿರಣ್ ರಿಜಿಜು ಅವರು ಕೇಂದ್ರ ಕಾನೂನು ಸಚಿವರಾಗಿದ್ದ ಅವಧಿಯಲ್ಲಿ ಹಲವು ಬಾರಿ ನ್ಯಾಯಾಂಗದೊಂದಿಗೆ ಸಂಘರ್ಷಕ್ಕಿಳಿದಿದ್ದರು. ಅದರಲ್ಲೂ, ಹೈಕೋರ್ಟ್‌ಗಳಿಗೆ ಮತ್ತು ಸುಪ್ರೀಂಕೋರ್ಟ್‌ಗೆ ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಕೊಲಿಜಿಯಂ ವ್ಯವಸ್ಥೆಯನ್ನು ಕಟುವಾಗಿ ಟೀಕಿಸಿದ್ದರು. ಅವರಿಗೆ ಕಾನೂನು ಖಾತೆಯಿಂದ ತೆಗೆದು, ಭೂವಿಜ್ಞಾನದ ಹೊಣೆ ನೀಡುವುದಕ್ಕೆ ಈ ಸಂಘರ್ಷ, ಟೀಕೆಗಳೇ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

ಅರುಣಾಚಲಪ್ರದೇಶದಿಂದ ಮೂರು ಬಾರಿ ಲೋಕಸಭೆಗೆ ಆಯ್ಕೆಯಾಗಿರುವ ರಿಜಿಜು ಅವರಿಗೆ ಪ್ರಮುಖವಾದ ಕಾನೂನು ಖಾತೆ ಜವಾಬ್ದಾರಿಯನ್ನು ವಹಿಸಲಾಗಿತ್ತು. ಅವರು ನೀಡಿದ್ದ ಹೇಳಿಕೆಗಳು ಅನೇಕ ಬಾರಿ ವಿವಾದಕ್ಕೀಡಾಗಿದ್ದವು. 'ಕೊಲಿಜಿಯಂ ವ್ಯವಸ್ಥೆಯು ಸಂವಿಧಾನಕ್ಕೆ ವಿರುದ್ಧವಾಗಿದೆ' ಎಂಬ ಟೀಕೆ, ಕೆಲ ನಿವೃತ್ತ ನ್ಯಾಯಮೂರ್ತಿಗಳು ಭಾರತ ವಿರೋಧಿ ಗುಂಪಿನ ಭಾಗವಾಗಿದ್ದಾರೆ' ಎಂಬ ರಿಜಿಜು ಆರೋಪಗಳಿಗೆ ಭಾರಿ ಆಕ್ಷೇಪ ವ್ಯಕ್ತವಾಗಿತ್ತು.

ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿದ ವ್ಯವಸ್ಥೆಯನ್ನು 'ಅಂಕಲ್–ಜಡ್ಜ್ ಸಿಂಡ್ರೋಮ್' ಎಂದು ಹೇಳಿದ್ದು ವಿವಾದಕ್ಕೆ ಕಾರಣವಾಗಿತ್ತು. ನ್ಯಾಯಮೂರ್ತಿಗಳ ನೇಮಕಾತಿ ಸಂದರ್ಭದಲ್ಲಿ ತಾನು ಪರಿಶೀಲಿಸುವ ಗುಪ್ತಚರ ಸಂಸ್ಥೆ ಹಾಗೂ 'ಆರ್ ಆ್ಯಂಡ್ ಎಡಬ್ಲ್ಯು'ನ ವರದಿಗಳನ್ನು ಕೊಲಿಜಿಯಂ ಬಹಿರಂಗಪಡಿಸುತ್ತಿದ್ದ ಕ್ರಮದ ಬಗ್ಗೆ ರಿಜಿಜು ಅಸಮಾಧಾನ ವ್ಯಕ್ತಪಡಿಸಿದ್ದರು. ಇದಕ್ಕೂ ಭಾರಿ ಆಕ್ಷೇಪ ವ್ಯಕ್ತವಾಗಿತ್ತು.

ಸಲಿಂಗ ವಿವಾಹಕ್ಕೆ ಮಾನ್ಯತೆ ಕೋರಿ ಸಲ್ಲಿಕೆಯಾದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂಕೋರ್ಟ್ ಆರಂಭಿಸಿದ ಸಂದರ್ಭದಲ್ಲಿ, 'ಮದುವೆ ವಿಷಯಕ್ಕೆ ಸಂಬಂಧಿಸಿ ಸಂಸತ್ ನಿರ್ಧಾರ ಕೈಗೊಳ್ಳಬೇಕು. ಸಂಸತ್, ಜನರನ್ನು ಪ್ರತಿನಿಧಿಸುತ್ತದೆಯೇ ಹೊರತು ನ್ಯಾಯಾಲಯಗಳು ಅಲ್ಲ' ಎಂದು ಹೇಳಿದ್ದರು. ಇದು ಕೂಡ ತೀವ್ರ ಟೀಕೆಗೆ ಒಳಗಾಗಿತ್ತು.

ಆಗ, ನ್ಯಾಯಾಂಗ ಮತ್ತು ಸರ್ಕಾರದ ನಡುವೆ ಭಿನ್ನಾಭಿಪ್ರಾಯ ಇದೆ ಎಂಬ ಆರೋಪಗಳನ್ನು ರಿಜಿಜು ತಳ್ಳಿ ಹಾಕಿದ್ದರು. 'ನ್ಯಾಯಾಂಗ ಮತ್ತು ಸರ್ಕಾರದ ನಡುವೆ ಮಹಾಭಾರತ ನಡೆಯುತ್ತಿಲ್ಲ. ಪ್ರಜಾಪ್ರಭುತ್ವದಲ್ಲಿ ಚರ್ಚೆ ಇರುತ್ತದೆ' ಎಂದು ಪ್ರತಿಕ್ರಿಯಿಸಿದ್ದರು.

ನ್ಯಾಯಮೂರ್ತಿಗಳ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಟೀಕೆ ಮಾಡಲಾಗುತ್ತಿದ್ದ ಬಗ್ಗೆ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಪತ್ರವೊಂದನ್ನು ಬರೆದಿದ್ದರು. ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದ ರಿಜಿಜು, ಈ ಪತ್ರ ಕುರಿತು ಪ್ರಸ್ತಾಪಿಸಿ, 'ತೀರ್ಪುಗಳನ್ನು ಪ್ರಕಟಿಸುವಾಗ ನ್ಯಾಯಮೂರ್ತಿಗಳು ಎಚ್ಚರದಿಂದ ಇರಬೇಕು. ಅವುಗಳ ಬಗ್ಗೆ ಜನರಿಂದ ಭಾರಿ ಪ್ರತಿಕ್ರಿಯೆ ವ್ಯಕ್ತವಾಗಬಹುದು' ಎಂದಿದ್ದರು. 'ರಾಜಕಾರಣಿಗಳಂತೆ ನ್ಯಾಯಮೂರ್ತಿಗಳು ಚುನಾವಣೆಗಳನ್ನು ಎದುರಿಸಬೇಕಾಗಿಲ್ಲ' ಎಂದೂ ಹೇಳಿದ್ದರು.

ನ್ಯಾಯಾಂಗದ ನೇಮಕಾತಿಗಳಲ್ಲಿ ವಿಳಂಬ ಮಾಡಿದ್ದಕ್ಕಾಗಿ ಕಳೆದ ನವೆಂಬರ್‌ನಲ್ಲಿ ರಿಜಿಜು ಅವರು ಸುಪ್ರೀಂಕೋರ್ಟ್ ಕೆಂಗಣ್ಣಿಗೆ ಗುರಿಯಾಗಿದ್ದರು. 'ಉನ್ನತ ನ್ಯಾಯಾಲಯಗಳಿಗೆ ಮಾಡಿರುವ ನೇಮಕಾತಿಗಳಿಗೆ ಸರ್ಕಾರ ಅನುಮೋದನೆ ನೀಡದೇ ಇರುವುದಕ್ಕೆ 'ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ (ಎನ್‌ಜೆಎಸಿ) ವನ್ನು ರದ್ದುಪಡಿಸಿದ್ದು ಕಾರಣವೇ' ಎಂದು ಸುಪ್ರೀಂಕೋರ್ಟ್ ಪ್ರಶ್ನಿಸಿತ್ತು.

ಕ್ರೀಡಾ ಸಚಿವರಾಗಿದ್ದಾಗ ರಿಜಿಜು ಅವರು, ರಾಷ್ಟ್ರೀಯ ಕ್ರೀಡೆಗಳಲ್ಲಿ ವಿಜೇತರಿಗೆ ನೀಡುವ ಬಹುಮಾನದ ಮೊತ್ತವನ್ನು ಹೆಚ್ಚಿಸಲು ಕ್ರಮ ತೆಗೆದುಕೊಂಡಿದ್ದರು. ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದ ಹಾಲಿ ಹಾಗೂ ಮಾಜಿ ಅಥ್ಲೀಟ್‌ಗಳಿಗೆ ತ್ವರಿತವಾಗಿ ಹಣಕಾಸು ನೆರವು ನೀಡುವ ವ್ಯವಸ್ಥೆ ಮಾಡಿದ್ದರು.

ಟೋಕಿಯೊ ಒಲಿಂಪಿಕ್ಸ್ ಆರಂಭವಾಗುವುದಕ್ಕೆ 2 ವಾರಗಳ ಮುಂಚೆ, 2021ರ ಜುಲೈನಲ್ಲಿ ರಿಜಿಜು ಅವರಿಗೆ ಕಾನೂನು ಸಚಿವರಾಗಿ ಬಡ್ತಿ ನೀಡಲಾಯಿತು. ಆಗ ಕ್ರೀಡಾ ಸಚಿವರಾಗಿದ್ದ ಅನುರಾಗ್ ಠಾಕೂರ್ ಅವರನ್ನು ಕ್ರೀಡಾ ಸಚಿವರನ್ನಾಗಿ ನೇಮಕ ಮಾಡಲಾಯಿತು.

ಪ್ರಮುಖ ಖಾತೆ ನಿಭಾಯಿಸಿದ್ದ ರಿಜಿಜು

51 ವರ್ಷದ ರಿಜಿಜು ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಹಲವು ಪ್ರಮುಖ ಖಾತೆಗಳನ್ನು ನಿಭಾಯಿಸಿದ್ದಾರೆ. ಗೃಹ ಖಾತೆ ರಾಜ್ಯ ಸಚಿವ, ಅಲ್ಪಸಂಖ್ಯಾತರ ವ್ಯವಹಾರಗಳ ರಾಜ್ಯ ಸಚಿವ, ಯುವ ಮತ್ತು ಕ್ರೀಡಾ ವ್ಯವಹಾರಗಳ ರಾಜ್ಯ ಸಚಿವರಾಗಿ (ಸ್ವತಂತ್ರ ಹೊಣೆಗಾರಿಕೆ) ಕಾರ್ಯ ನಿರ್ವಹಿಸಿದ್ದರು. 2021ರಲ್ಲಿ ಅವರಿಗೆ ಕಾನೂನು ಖಾತೆ ಹೊಣೆ ನೀಡಲಾಗಿತ್ತು.

ರಿಜಿಜು ಅವರು ಕೇಂದ್ರ ಸಚಿವ ಸಂಪುಟದಲ್ಲಿ ಈಶಾನ್ಯ ಭಾರತ ಪ್ರತಿನಿಧಿಸುವವರಲ್ಲಿ ಪ್ರಮುಖರು. ಈಗ, ಕಾನೂನು ಖಾತೆಯ ಜವಾಬ್ದಾರಿ ಹೊತ್ತಿರುವ ಮೇಘವಾಲ್ ಅವರು ರಾಜಸ್ಥಾನದ ಬಿಕಾನೇರ್ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ರಾಜಕೀಯಕ್ಕೂ ಬರುವ ಮೊದಲು ಅವರು ಅಧಿಕಾರಿಯಾಗಿದ್ದ ಮೇಘವಾಲ್, ವಿವಾದಗಳಿಂದ ದೂರ.

ರಿಜಿಜು ಕೈ ತಪ್ಪಿದ ಕಾನೂನು ಖಾತೆ

ಒಂದನೇ ಪುಟದಿಂದ...

ಹಿರಿಯ ನಾಯಕ ರವಿಶಂಕರ್ ಪ್ರಸಾದ್ ರಾಜೀನಾಮೆಯಿಂದ ತೆರವಾಗಿದ್ದ ಈ ಪ್ರಮುಖ ಖಾತೆಯ ಹೊಣೆಯನ್ನು ರಿಜಿಜು ಅವರಿಗೆ ವಹಿಸಲಾಗಿತ್ತು. ಅದಕ್ಕೂ ಮೊದಲು ಅವರು ಕ್ರೀಡಾ ಸಚಿವರಾಗಿದ್ದರಲ್ಲದೇ, ಅಲ್ಪಸಂಖ್ಯಾತ ವ್ಯವಹಾರಗಳ ರಾಜ್ಯ ಸಚಿವರಾಗಿದ್ದರು. ಈ ವರೆಗೆ, ಜಿತೇಂದ್ರ ಸಿಂಗ್ ಅವರು ಭೂವಿಜ್ಞಾನಗಳ ಸಚಿವರಾಗಿದ್ದರು.

ರಿಜಿಜು ಪ್ರತಿಕ್ರಿಯೆ: ಖಾತೆ ಬದಲಾವಣೆ ಮಾಡಿದ ನಂತರ ಪ್ರತಿಕ್ರಿಯಿಸಿದ ಸಚಿವ ರಿಜಿಜು, 'ಕಾನೂನು ಸಚಿವನಾಗಿ ಸೇವೆ ಸಲ್ಲಿಸಿದ್ದು ನನ್ನ ಪಾಲಿಗೆ ಸಿಕ್ಕ ವಿಶೇಷ ಗೌರವ. ನನಗೆ ಬೆಂಬಲ ನೀಡಿದ್ದಕ್ಕಾಗಿ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಸೇರಿ ಇಡೀ ನ್ಯಾಯಾಂಗಕ್ಕೆ ಧನ್ಯವಾದ' ಎಂದು ಹೇಳಿದ್ದಾರೆ.

'ಭೂ ವಿಜ್ಞಾನಗಳ ಸಚಿವಾಲಯದ ಜವಾಬ್ದಾರಿ ವಹಿಸಿಕೊಂಡು ಪ್ರಧಾನಿ ನರೇಂದ್ರ ಮೋದಿ ಕನಸನ್ನು ನನಸು ಮಾಡಲು ಶ್ರಮಿಸುತ್ತೇನೆ' ಎಂದಿದ್ದಾರೆ.

'ತ್ವರಿತ ನ್ಯಾಯದಾನಕ್ಕೆ ಆದ್ಯತೆ': ಕೇಂದ್ರ ಕಾನೂನು ಖಾತೆ ರಾಜ್ಯ ಸಚಿವರಾಗಿ ನೇಮಕಗೊಂಡಿದ್ದಕ್ಕೆ ಪ್ರತಿಕ್ರಿಯಿಸಿರುವ ಅರ್ಜುನ್ ರಾಮ್ ಮೇಘವಾಲ್, 'ಎಲ್ಲರಿಗೂ ತ್ವರಿತವಾಗಿ ನ್ಯಾಯ ಸಿಗುವಂತೆ ಮಾಡುವುದೇ ನನ್ನ ಆದ್ಯತೆಯಾಗಿದೆ' ಎಂದು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, 'ಸರ್ಕಾರ ಮತ್ತು ನ್ಯಾಯಾಂಗದ ನಡುವೆ ಸಂಘರ್ಷ ಇಲ್ಲ' ಎಂದರು.

ರಿಜಿಜು ವಿರುದ್ಧ ವಿಪಕ್ಷಗಳ ವಾಗ್ದಾಳಿ

ನವದೆಹಲಿ (ಪಿಟಿಐ): ಕೇಂದ್ರ ಕಾನೂನು ಸಚಿವ ಸ್ಥಾನದಿಂದ ಕಿರಣ್ ರಿಜಿಜು ಅವರನ್ನು ತೆಗೆದು, ಭೂವಿಜ್ಞಾನಗಳ ಖಾತೆ ನೀಡಿದ ಬೆನ್ನಲ್ಲೇ, ವಿರೋಧ ಪಕ್ಷಗಳು ರಿಜಿಜು ವಿರುದ್ಧ ವಾಗ್ದಾಳಿ ನಡೆಸಿವೆ.

'ರಿಜಿಜು ಅವರು ಕಾನೂನು ಸಚಿವರಾಗಿ ತಮಗೆ ನೀಡಿದ ಖಾತೆಯನ್ನು ನಿಭಾಯಿಸುವಲ್ಲಿ ವಿಫಲರಾಗಿದ್ದರು' ಎಂದು ಕಾಂಗ್ರೆಸ್ ಸಂಸದ ಮಾಣಿಕಂ ಟ್ಯಾಗೋರ್ ಟೀಕಿಸಿದ್ದಾರೆ. ಮಾಣಿಕಂ ಅವರು ಲೋಕಸಭೆಯಲ್ಲಿ ಸಚೇತಕರೂ ಆಗಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಕಾನೂನು ಸಚಿವರಾಗಿ ವಿಫಲರಾದವರು ಭೂವಿಜ್ಞಾನಗಳ ಖಾತೆ ಹೊಣೆ ಹೊತ್ತಿದ್ದಾರೆ. ಅಲ್ಲಿ ಏನು ಮಾಡಬಲ್ಲರು' ಎಂದು ಪ್ರಶ್ನಿಸಿದ್ದಾರೆ.

'ಅವರು (ರಿಜಿಜು) ಈಗ ಕಾನೂನು ಸಚಿವರಲ್ಲ, ಭೂವಿಜ್ಞಾನಗಳ ಸಚಿವರು. ಕಾನೂನುಗಳ ಹಿಂದಿರುವ ತತ್ವಗಳನ್ನು ಅರ್ಥ ಮಾಡಿಕೊಳ್ಳುವುದು ಸುಲಭವಲ್ಲ. ಈಗ ಅವರು, ವಿಜ್ಞಾನದ ನಿಯಮಗಳೊಂದಿಗೆ ಗುದ್ದಾಡಲಿದ್ದಾರೆ' ಎಂದು ಹಿರಿಯ ವಕೀಲ ಹಾಗೂ ರಾಜ್ಯಸಭಾ ಸದಸ್ಯರಾದ ಕಪಿಲ್ ಸಿಬಲ್ ಹೇಳಿದ್ದಾರೆ.

'ಈ ಬೆಳವಣಿಗೆಯು ಆಡಳಿತ ಪಕ್ಷದಲ್ಲಿ ಪ್ರತಿಭಾವಂತರ ಕೊರತೆ ಇದೆ ಎಂಬುದನ್ನು ಮಾತ್ರವಲ್ಲ, ಸರ್ಕಾರ ಅಸಮರ್ಥವಾಗಿದೆ ಎಂಬುದನ್ನೂ ತೋರಿಸುತ್ತದೆ' ಎಂದು ಕಾಂಗ್ರೆಸ್ ಸಂಸದ ಅಭಿಷೇಕ್ ಮನು ಸಿಂಘ್ವಿ ಟ್ವೀಟ್ ಮಾಡಿದ್ದಾರೆ.

'ಮಹಾರಾಷ್ಟ್ರದ ರಾಜಕೀಯ ಕುರಿತು ಇತ್ತೀಚೆಗೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ರಿಜಿಜು ಅವರ ಖಾತೆ ಬದಲಾವಣೆಗೆ ಕಾರಣವಿರಬಹುದೇ' ಎಂದು ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ನಾಯಕಿ ಹಾಗೂ ರಾಜ್ಯಸಭಾ ಸದಸ್ಯೆ ಪ್ರಿಯಾಂಕಾ ಚತುರ್ವೇದಿ ಹೇಳಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, 'ಮಹಾರಾಷ್ಟ್ರದ ರಾಜಕೀಯ ಬೆಳವಣಿಗೆ ಕುರಿತ ತೀರ್ಪಿನಿಂದಾಗಿ ಈ ಬದಲಾವಣೆ ಮಾಡಲಾಗಿದೆಯೇ ಅಥವಾ, ಮೋದಾನಿ–ಸೆಬಿ ತನಿಖೆ ಕಾರಣವೇ' ಎಂದು ಕೇಳಿದ್ದಾರೆ.

'ಕಿರಣ್ ರಿಜಿಜು ಅವರನ್ನು ಕಾನೂನು ಸಚಿವ ಸ್ಥಾನದಿಂದ ತೆಗದಿರುವುದು ದೇಶದ ನ್ಯಾಯಾಂಗ ವ್ಯವಸ್ಥೆಯ ಜಯ' ಎಂದು ಶಿವಸೇನಾ (ಯುಬಿಟಿ) ನಾಯಕ, ರಾಜ್ಯಸಭಾ ಸದಸ್ಯ ಸಂಜಯ್ ರಾವುತ್ ಹೇಳಿದ್ದಾರೆ.

ಗಡಿಯಂಚಿನಲ್ಲಿ ನಕ್ಸಲರು ಮತ್ತೆ ಪ್ರತ್ಯಕ್ಷ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ಕೇರಳದ ಗಡಿ ಭಾಗದಲ್ಲಿ ಮತ್ತೆ ಐವರು ನಕ್ಸಲರ ತಂಡವು ಕಾಣಿಸಿಕೊಂಡಿದೆ.

ಮೇ 15ರಂದು ಕಣ್ಣೂರು ಜಿಲ್ಲೆಯ 5ನೇ ಕೊಲ್ಲಿ ಪಂಚಾಯಿತಿಯ 3ನೇ ವಾರ್ಡ್‌ನಲ್ಲಿರುವ ಎನ್. ಬೈಜು ಅವರ ಮನೆಗೆ ನಕ್ಸಲರ ತಂಡ ಬಂದು ಬೆದರಿಸಿ ಊಟ ಮಾಡಿಕೊಂಡು ಕರ್ನಾಟಕದ ಅರಣ್ಯದತ್ತ ಹೋಗಿದೆ.

'ಹಣ ಕೊಡುತ್ತೇವೆ. ಆಗಾಗ್ಗೆ ನಮಗೆ ಅಕ್ಕಿ ಹಾಗೂ ಇತರೆ ದಿನಸಿ ಪದಾರ್ಥಗಳನ್ನು ಕೊಡಬೇಕೆಂದು ಮನೆಯವರನ್ನು ಕೇಳಿದ್ದಾರೆ. ಅದಕ್ಕೆ ಮನೆಯವರು ಒಪ್ಪದಿದ್ದಾಗ ಕೋಪಗೊಂಡ ಅವರು ಮನೆಯಲ್ಲಿದ್ದ 10 ಕೆ.ಜಿ. ಅಕ್ಕಿ, ಈರುಳ್ಳಿ ಹಾಗೂ ತೆಂಗಿನ ಕಾಯಿಗಳನ್ನು ಕಸಿದುಕೊಂಡು ಕರ್ನಾಟಕದ ಅರಣ್ಯದತ್ತ ಹೋಗಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಘಟನೆಯಿಂದ ಆಘಾತಕ್ಕೆ ಒಳಗಾಗಿದ್ದ ಬೈಜು ಅವರು ತಡವಾಗಿ ಅಲ್ಲಿನ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ನಕ್ಸಲರು ಬಂದಿದ್ದ ಪ್ರದೇಶವು ಕೊಡಗಿನ ಗಡಿಭಾಗವಾದ ಕಡಮಕೊಲ್ಲಿಗೆ 15 ಕಿ.ಮೀ ದೂರದಲ್ಲಿದೆ. ನಕ್ಸಲರು ಕರ್ನಾಟಕಕ್ಕೆ ನುಸುಳುವುದನ್ನು ತಡೆಯಲು ಕೂಂಬಿಂಗ್ ಹೆಚ್ಚಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಈ ಘಟನೆಗೂ ಎರಡು ದಿನ ಮುಂಚೆ ಕಣ್ಣೂರು ಜಿಲ್ಲೆಯ ಕಲ್ಲಿತ್ತ ಪುನ್ನುಪಾರ ಎಂಬಲ್ಲಿ ಬಿಜು ಎಂಬುವರ ಮನೆಗೆ ಬಂದು ಬೆದರಿಸಿ ಊಟ ಮಾಡಿದ್ದು ಇದೇ ತಂಡ ಇರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

ಕಂಬಳ, ಜಲ್ಲಿಕಟ್ಟುಗೆ ಅಸ್ತು

ಒಂದನೇ ಪುಟದಿಂದ...

ಹದ ಮಾಡಿದ ಮಣ್ಣಿನ ಗದ್ದೆಯಲ್ಲಿ ನಿರ್ದಿಷ್ಟ ಮಟ್ಟಕ್ಕೆ ನೀರನ್ನು ತುಂಬಿ ಅದರಲ್ಲಿ ಬಲಿಷ್ಠ ಕೋಣಗಳನ್ನು ಓಡಿಸಲಾಗುತ್ತದೆ.

ತಮಿಳುನಾಡಿನಲ್ಲಿ ಸುಗ್ಗಿಯ ಹಬ್ಬವಾದ ಪೊಂಗಲ್ ವೇಳೆ, ಎತ್ತುಗಳನ್ನು ಪಳಗಿಸುವ 'ಜಲ್ಲಿಕಟ್ಟು' ಕ್ರೀಡೆಯನ್ನು ಆಯೋಜಿಸಲಾಗುತ್ತದೆ.

ನ್ಯಾಯಪೀಠ ಹೇಳಿದ್ದೇನು?: 'ಈ ಕಾಯ್ದೆಗೆ ತಮಿಳುನಾಡು ಸರ್ಕಾರ ತಂದಿರುವ ತಿದ್ದುಪಡಿಗಳಿಗೆ ಸಂಬಂಧಿಸಿ ನಾವು ನೀಡಿರುವ ತೀರ್ಪು, ಕರ್ನಾಟಕ ಮತ್ತು ಮಹಾರಾಷ್ಟ್ರ ಸರ್ಕಾರಗಳು ತಂದಿರುವ ತಿದ್ದುಪಡಿ ಕಾಯ್ದೆಗಳಿಗೂ ಅನ್ವಯಿಸುತ್ತದೆ. ಈ ಎಲ್ಲ ತಿದ್ದುಪಡಿ ಕಾಯ್ದೆಗಳು ಸಿಂಧುವಾಗಿವೆ' ಎಂದು ನ್ಯಾಯಪೀಠ ಹೇಳಿತು.

'ಈ ತಿದ್ದುಪಡಿ ಕಾಯ್ದೆಗಳಡಿ ರೂಪಿಸಲಾಗಿರುವ ನಿಯಮಗಳನ್ನು ಹಾಗೂ ಹೊರಡಿಸಿರುವ ಅಧಿಸೂಚನೆಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು. ಈ ನಿಯಮಗಳು/ಅಧಿಸೂಚನೆಗಳನ್ನು ಜಾರಿಗೊಳಿಸುವ ಹೊಣೆಗಾರಿಕೆ ಎಲ್ಲ ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಗಳದ್ದು' ಎಂದು ನ್ಯಾಯಮೂರ್ತಿ ಅನಿರುದ್ಧ ಬೋಸ್ ಹೇಳಿದರು.

> **ಮುಂದಿನ ವರ್ಷ ಪೊಂಗಲ್ ಹಬ್ಬದ ಸಂದರ್ಭದಲ್ಲಿ ವಿಜಯೋತ್ಸವ ಆಚರಿಸಲಾಗುವುದು. ಜಲ್ಲಿಕಟ್ಟುಗಾಗಿ ಅಲಂಗನಲ್ಲೂರಿನಲ್ಲಿ ಬೃಹತ್ ಅಖಾಡ ನಿರ್ಮಿಸಲಾಗುವುದು**
> **ಎಂ.ಕೆ.ಸ್ಟಾಲಿನ್,** ತಮಿಳುನಾಡು ಮುಖ್ಯಮಂತ್ರಿ

'ತಮಿಳುನಾಡಿನ ತಿದ್ದುಪಡಿ ಕಾಯ್ದೆಯು ಸಂವಿಧಾನದ 7ನೇ ಪರಿಚ್ಛೇದದ 3ನೇ ಪಟ್ಟಿಯ 17ನೇ ಅಂಶದಲ್ಲಿ ಅಡಕವಾಗಿರುವ ಆಶಯಕ್ಕೆ ಸಂಬಂಧಿಸಿದ್ದಾಗಿದೆ. ಸಂಬಂಧಪಟ್ಟ ಕ್ರೀಡೆಗಳಲ್ಲಿ ಪ್ರಾಣಿಗಳ ಮೇಲಿನ ಕ್ರೌರ್ಯವನ್ನು ಕಡಿಮೆಗೊಳಿಸುವ ಆಶಯವನ್ನು ಈ ತಿದ್ದುಪಡಿಗಳು ಒಳಗೊಂಡಿವೆ' ಎಂದೂ ನ್ಯಾಯಪೀಠ ಹೇಳಿತು.

'ಜಲ್ಲಿಕಟ್ಟು ಕ್ರೀಡೆಯು ಕೆಲ ಶತಮಾನಗಳಿಂದಲೂ ತಮಿಳುನಾಡಿನಲ್ಲಿ ಆಚರಣೆಯಲ್ಲಿದೆ. ಇದು ತಮಿಳು ಸಂಸ್ಕೃತಿಯ ಅವಿಭಾಜ್ಯ ಅಂಗವೇ ಅಥವಾ ಅಲ್ಲವೇ ಎಂಬುದನ್ನು ನಿರ್ಣಯಿಸಲು ಈ ಕ್ರೀಡೆಗೆ ಸಂಬಂಧಿಸಿದ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಅಂಶಗಳ ವಿಸ್ತೃತ ವಿಶ್ಲೇಷಣೆಯ ಅಗತ್ಯ ಇದೆ. ಈ ಕಾರ್ಯವನ್ನು ನ್ಯಾಯಾಂಗ ಕೈಗೊಳ್ಳುವುದಿಲ್ಲ' ಎಂದು ಸ್ಪಷ್ಟಪಡಿಸಿತು.

'ಒಂದು ರಾಜ್ಯದ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಮಾಡುವ ಉದ್ದೇಶದಿಂದ ತಮಿಳುನಾಡು ಸರ್ಕಾರ ಈ ಕಾಯ್ದೆಗೆ ತಿದ್ದುಪಡಿ ತಂದಿದೆ ಎಂಬ ವಿಷಯವೂ ಚರ್ಚಾಸ್ಪದ. ಇದನ್ನು ಜನರೇ ನಿರ್ಣಯಿಸಬೇಕು. ಈ ತಿದ್ದುಪಡಿಗೆ ರಾಷ್ಟ್ರಪತಿಯವರು ಅಂಕಿತ ಹಾಕಿರುವುದರಿಂದ ರಾಜ್ಯ ಸರ್ಕಾರದ ಕ್ರಮದಲ್ಲಿ ಏನಾದರೂ ನ್ಯೂನತೆ ಇರುತ್ತದೆ ಎಂದು ನಾವು ಭಾವಿಸುವುದಿಲ್ಲ' ಎಂದು ನ್ಯಾಯಮೂರ್ತಿಗಳು ಹೇಳಿದರು.


'ಜಲ್ಲಿಕಟ್ಟು' ಕ್ರೀಡೆ ಕುರಿತು 2014ರಲ್ಲಿ ತೀರ್ಪು ನೀಡಿದ್ದ ಸುಪ್ರೀಂಕೋರ್ಟ್, 'ಜಲ್ಲಿಕಟ್ಟು ಅಥವಾ ಗಾಡಿ ಓಡಿಸುವ ಸ್ಪರ್ಧೆಗಳಲ್ಲಿ ಎತ್ತುಗಳ ಬಳಕೆ ಮಾಡಬಾರದು' ಎಂದು ಹೇಳಿತ್ತು. ಇಂಥ ಕ್ರೀಡೆಗಳಲ್ಲಿ ಎತ್ತುಗಳನ್ನು ಬಳಸುವುದನ್ನು ದೇಶದಾದ್ಯಂತ ನಿಷೇಧಿಸಿತ್ತು.

ನೌಕರರ ಸೇವಾ ಸೌಲಭ್ಯ; ಪಿಯು ಡಿಡಿಗಳಿಗೆ ಅಧಿಕಾರ

ಬೆಂಗಳೂರು: ಬಡ್ತಿ, ವೇತನ ಬಡ್ತಿ, ಗಳಿಕೆ ರಜೆ ಮಂಜೂರಾತಿ ಸೇರಿದಂತೆ ಸೇವಾ ಸೌಲಭ್ಯಗಳಿಗಾಗಿ ಪದವಿಪೂರ್ವ ಶಿಕ್ಷಣ ಇಲಾಖೆ ಉಪನ್ಯಾಸಕರು ಹಾಗೂ ಸಿಬ್ಬಂದಿ ಬೆಂಗಳೂರು ಕಚೇರಿಗೆ ಅಲೆದಾಡುವುದು ಇನ್ನು ಮುಂದೆ ತಪ್ಪಲಿದೆ.

ನೌಕರರ ಸೇವಾಸೌಲಭ್ಯಗಳ ಕುರಿತು ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಆಯಾ ಜಿಲ್ಲೆಗಳ ಉಪ ನಿರ್ದೇಶಕರಿಗೆ ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ರಾಜ್ಯದಲ್ಲಿ ಸರ್ಕಾರಿ ಸೇರಿ 4,781 ಪದವಿಪೂರ್ವ ಕಾಲೇಜುಗಳಿವೆ. ಎಲ್ಲ ಜಿಲ್ಲೆಗಳಲ್ಲೂ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಸಿಬ್ಬಂದಿ ತಮ್ಮ ಸೇವಾ ಸೌಲಭ್ಯಗಳಿಗಾಗಿ ಜಿಲ್ಲಾ ಉಪ ನಿರ್ದೇಶಕರ ಮೂಲಕ ಕಡತ ಸಲ್ಲಿಸಿ, ಮಂಜೂರಾತಿಗಾಗಿ ಬೆಂಗಳೂರಿನ ನಿರ್ದೇಶಕರ ಕಚೇರಿಗೆ ಅಲೆಯಬೇಕಿತ್ತು. ಕಡತಗಳ ವಿಲೇವಾರಿ ವಿಳಂಬದಿಂದ ಪಾಠಪ್ರವಚನಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿತ್ತು. ಇಂತಹ ತೊಂದರೆಗಳನ್ನು ತಪ್ಪಿಸಲು ಉಪ ನಿರ್ದೇಶಕರಿಗೆ ಜವಾಬ್ದಾರಿ ಕೊಡಲು ಪರಿಶೀಲಿಸಬೇಕು ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ಪ್ರಸ್ತಾವ ಸಲ್ಲಿಸಿತ್ತು.



ಸುಭಾಷಿತ

ಒಮ್ಮೆ ನೀವು ಯಾವುದಾದರೂ ಕೆಲಸ ಮಾಡಲು ಪ್ರಾರಂಭಿಸಿದ ಬಳಿಕ ಸೋಲಿನ ಬಗ್ಗೆ ಭಯಪಡಬೇಡಿ ಅಥವಾ ಹಿಂದಡಿ ಇಡಬೇಡಿ. **-ಚಾಣಕ್ಯ**

ಅಸ್ತ್ರವಾಗಿ ಪಿಎಂಎಲ್‌ಎ ಬಳಕೆ ಇ.ಡಿ ನಡವಳಿಕೆ ಕಳವಳಕಾರಿ

ಭೀತಿಯ ವಾತಾವರಣ ಸೃಷ್ಟಿಸಬಾರದು ಎಂದು ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಸುಪ್ರೀಂ ಕೋರ್ಟ್ ನೀಡಿರುವ ಸಲಹೆಯು ಅತ್ಯಂತ ಅಗತ್ಯವಾದುದೇ ಆಗಿತ್ತು. ಜೊತೆಗೆ, ಇದು ಸಮಂಜಸವಾದ ಬುದ್ಧಿವಾದವೂ ಹೌದು. ಏಕೆಂದರೆ, ಈ ಸಂಸ್ಥೆಯು ದೇಶದಲ್ಲಿ 'ಅಂಕೆ ಮೀರಿ' ವರ್ತಿಸುತ್ತಿದೆ. ಆಡಳಿತಾರೂಢ ಪಕ್ಷದ ರಾಜಕೀಯ ಪ್ರತಿಸ್ಪರ್ಧಿಗಳು ಮತ್ತು ಸರ್ಕಾರದ ಟೀಕಾಕಾರರನ್ನೇ ಇ.ಡಿ ಗುರಿ ಮಾಡಿಕೊಳ್ಳುತ್ತಿದೆ ಎಂಬುದು ಹೊಸ ಆರೋಪವೇನೂ ಅಲ್ಲ. ನರೇಂದ್ರ ಮೋದಿ ಅವರು ಎರಡನೇ ಅವಧಿಗೆ ಪ್ರಧಾನಿಯಾದ ಬಳಿಕವಂತೂ ಈ ಆರೋಪ ಹೆಚ್ಚು ವ್ಯಾಪಕವಾಗಿ ಕೇಳಿಸುತ್ತಿದೆ; ಇದು ವೃಥಾ ಆರೋಪವೇನೂ ಅಲ್ಲ ಎಂಬ ಭಾವನೆಯೂ ಮೂಡಿದೆ. ಛತ್ತೀಸಗಢ ಸರ್ಕಾರವು ಸಲ್ಲಿಸಿದ ಅರ್ಜಿಯೊಂದರ ವಿಚಾರಣೆಯ ಸಂದರ್ಭದಲ್ಲಿ ಇ.ಡಿಗೆ ಸುಪ್ರೀಂ ಕೋರ್ಟ್ ಬುದ್ಧಿವಾದ ಹೇಳಿದೆ. ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರನ್ನು, ರಾಜ್ಯದಲ್ಲಿ ನಡೆದಿದೆ ಎನ್ನಲಾದ ₹ 2,000 ಕೋಟಿ ಮೊತ್ತದ ಮದ್ಯ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸಿಲುಕಿಸಲು ಇ.ಡಿ ಯತ್ನಿಸುತ್ತಿದೆ ಎಂದು ಸರ್ಕಾರದ ಅರ್ಜಿಯಲ್ಲಿ ವಾದಿಸಲಾಗಿದೆ. ತನ್ನ ರಾಜಕೀಯ ಮಾಲೀಕರ ಕುಮ್ಮಕ್ಕಿನಂತೆ ಕೆಲಸ ಮಾಡುತ್ತಿರುವ ಇ.ಡಿಯ ತನಿಖೆಯು ಸಂಪೂರ್ಣ ಪೂರ್ವಗ್ರಹಪೀಡಿತವಾಗಿದೆ, ರಾಜ್ಯದಲ್ಲಿ ಅಸ್ಥಿರತೆ ಸೃಷ್ಟಿಸುವುದೇ ಇದರ ಉದ್ದೇಶ ಎಂದು ಛತ್ತೀಸಗಢದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ನೇತೃತ್ವದ ಸರ್ಕಾರವು ಹೇಳಿದೆ.




ರಾಷ್ಟ್ರಮಟ್ಟದ ತನಿಖಾ ಸಂಸ್ಥೆಗಳು ಜನರ ನಂಬಿಕೆಯನ್ನು ಕಳೆದುಕೊಂಡಿರುವ ಈ ಸಂದರ್ಭದಲ್ಲಿ, ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಸುಪ್ರೀಂ ಕೋರ್ಟ್ ಹೇಳಿರುವ ಬುದ್ಧಿಮಾತು ಮಹತ್ವದ್ದಾಗಿದೆ

ಸಂವಿಧಾನದ 131ನೇ ವಿಧಿಯಲ್ಲಿರುವ ಅವಕಾಶವನ್ನು ಬಳಸಿಕೊಂಡು ಛತ್ತೀಸಗಢ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವೊಂದರ ಜೊತೆಗೆ ವಿವಾದ ಏರ್ಪಟ್ಟಾಗ ನೇರವಾಗಿ ನ್ಯಾಯಾಲಯಕ್ಕೆ ಹೋಗಲು ಸಂವಿಧಾನದ 131ನೇ ವಿಧಿಯು ಅವಕಾಶ ಕಲ್ಪಿಸಿದೆ. ಈ ವಿಧಿಯ ಅನುಸಾರ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಕೆಲವು ಅಂಶಗಳನ್ನು ಛತ್ತೀಸಗಢ ಸರ್ಕಾರವು ಪ್ರಶ್ನಿಸಿದೆ. ಈ ಕಾಯ್ದೆಯನ್ನು ಇ.ಡಿ ಅಸ್ತ್ರದಂತೆ ಬಳಸುತ್ತಿದೆ, ರಾಜಕೀಯ ಕಾರಣಗಳಿಗೆ ಇ.ಡಿಯನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ದೆಹಲಿ ಮತ್ತು ಪಂಜಾಬ್‌ನಲ್ಲಿರುವ ಎಎಪಿ ನೇತೃತ್ವದ ಸರ್ಕಾರಗಳು, ಪಶ್ಚಿಮ ಬಂಗಾಳದ ತೃಣಮೂಲ ಕಾಂಗ್ರೆಸ್ ನೇತೃತ್ವದ ಸರ್ಕಾರ, ಕೇರಳದ ಎಡರಂಗ ನೇತೃತ್ವದ ಸರ್ಕಾರ ಆರೋಪಿಸಿವೆ. ಪಿಎಂಎಲ್‌ಎಯಲ್ಲಿ ಇರುವ ಕೆಲವು ಕಠಿಣ ಅವಕಾಶಗಳನ್ನು ಬಳಸಿದರೆ ಜಾಮೀನು ದೊರೆಯುವುದು ಅಸಾಧ್ಯ ಎನ್ನುವಷ್ಟು ಕಷ್ಟ. ಈ ಕಾಯ್ದೆ ಮತ್ತು ಇ.ಡಿ ಇರುವುದೇ ಕಿರುಕುಳ ನೀಡುವುದಕ್ಕಾಗಿ ಎಂಬ ವಾದಕ್ಕೆ ಈ ಅಂಶವು ಪುಷ್ಟಿ ಕೊಡುತ್ತದೆ. ಇ.ಡಿ ಮುಖ್ಯಸ್ಥ ಸಂಜಯ್ ಕುಮಾರ್ ಮಿಶ್ರಾ ಅವರಿಗೆ ಮೂರನೇ ಬಾರಿಗೆ ಸೇವಾ ಅವಧಿ ವಿಸ್ತರಣೆ ಮಾಡಿದ್ದಕ್ಕಾಗಿ ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಕಳೆದ ತಿಂಗಳು ತರಾಟೆಗೆ ತೆಗೆದುಕೊಂಡಿತ್ತು. ಯಾವ ಕಾರಣದಿಂದಾಗಿ ಅವರು 'ಇಷ್ಟೊಂದು ಅನಿವಾರ್ಯ' ಎನಿಸಿಕೊಂಡಿದ್ದಾರೆ ಎಂದು ಕೋರ್ಟ್ ಪ್ರಶ್ನಿಸಿತ್ತು. ಮಿಶ್ರಾ ಅವರು ನವೆಂಬರ್ ನಂತರ ಹುದ್ದೆಯಲ್ಲಿ ಮುಂದುವರಿಯುವುದಿಲ್ಲ ಎಂದು ಕೋರ್ಟ್‌ಗೆ ಸರ್ಕಾರವು ಹೇಳಿತ್ತು. ಪಿಎಂಎಲ್‌ಎ ಅಡಿಯಲ್ಲಿ ಇ.ಡಿ ಹೊಂದಿರುವ ಅಧಿಕಾರಗಳನ್ನು ಕೂಡ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ.

ಇ.ಡಿ ತನಿಖೆ ನಡೆಸುತ್ತಿರುವ ಎಲ್ಲ ಪ್ರಕರಣಗಳೂ ರಾಜಕೀಯಪ್ರೇರಿತ ಎಂಬ ಭಾವನೆ ಬಂದುಬಿಟ್ಟರೆ, ಈ ಸಂಸ್ಥೆ ನಡೆಸುವ ಕ್ರಮಬದ್ಧವಾದ ತನಿಖೆಯ ಮೇಲೂ ಅನುಮಾನ ಮೂಡುತ್ತದೆ ಎಂದು ಕೋರ್ಟ್ ಹೇಳಿದೆ. ಇದು ಅತ್ಯಂತ ಮಹತ್ವದ ವಿಚಾರವಾಗಿದೆ. ಏಕೆಂದರೆ, ಭ್ರಷ್ಟ ಮತ್ತು ನಿಜವಾಗಿಯೂ ಅಪರಾಧ ಎಸಗಿದ ಜನರು ಇ.ಡಿ ತಮಗೆ ಕಿರುಕುಳ ನೀಡುತ್ತಿದೆ ಎಂದು ಹೇಳಿ, ತಾವೇ ಸಂತ್ರಸ್ತರು ಎಂದು ಬಿಂಬಿಸಿಕೊಳ್ಳಬಹುದು. ರಾಷ್ಟ್ರಮಟ್ಟದ ತನಿಖಾ ಸಂಸ್ಥೆಗಳು ರಾಷ್ಟ್ರಕ್ಕೆ ಬೇಕಾಗಿರುವ ವಿಚಾರಗಳಿಗಾಗಿ ಕೆಲಸ ಮಾಡಬೇಕೇ ವಿನಾ ಆಡಳಿತಾರೂಢ ಪಕ್ಷದ ರಾಜಕೀಯ ಗುರಿಗಳನ್ನು ಈಡೇರಿಸುವುದಕ್ಕೆ ಅಲ್ಲ. ಸಿಬಿಐ, ಇ.ಡಿಯಂತಹ ಸಂಸ್ಥೆಗಳು ತಾರತಮ್ಯದಿಂದ ಕೆಲಸ ಮಾಡಲೇಬಾರದು. ಈ ಸಂಸ್ಥೆಗಳ ಕಾರ್ಯಾಚರಣೆ ಶೈಲಿ ಮತ್ತು ವಿಶ್ವಾಸಾರ್ಹತೆಯು ಕಳೆದುಹೋದರೆ, ಮರಳಿ ಪಡೆಯುವುದು ಬಹಳ ಕಷ್ಟದ ಕೆಲಸ. ಈ ಸಂಸ್ಥೆಗಳು ಜನರ ನಂಬಿಕೆಯನ್ನು ಈಗಾಗಲೇ ಕಳೆದುಕೊಂಡಿವೆ. ಹಾಗಾಗಿಯೇ ನ್ಯಾಯಾಲಯವು ಹೇಳಿದ ಬುದ್ಧಿಮಾತು ಈ ಸಂದರ್ಭದಲ್ಲಿ ಮಹತ್ವದ್ದಾಗಿದೆ.

ಸರ್ಕಾರ, ಸೇನೆಯನ್ನು ಏಕಕಾಲಕ್ಕೆ ಎದುರು ಹಾಕಿಕೊಂಡು ತೊಡೆತಟ್ಟಿದ್ದಾರೆ ಇಮ್ರಾನ್

ಪಾಕ್: ಲಂಡನ್ ಪ್ಲ್ಯಾನ್ ಮತ್ತು ಮಿ.ಕ್ಲೀನ್?!



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

ಪಾಕಿಸ್ತಾನದ ಮಟ್ಟಿಗೆ ಇದು ವಿಶೇಷ ಸಂಗತಿಯಲ್ಲ. ಪಾಕಿಸ್ತಾನದ ಹಲವು ಮಾಜಿ ಪ್ರಧಾನಿಗಳು ವಿವಿಧ ಆರೋಪಗಳನ್ನು ಹೊತ್ತು ವಿಚಾರಣೆ ಎದುರಿಸಿದ್ದಾರೆ. ಜೈಲಿಗೆ ಹೋಗಿ ಬಂದಿದ್ದಾರೆ. ಸ್ಥಾನ ತೊರೆಯುತ್ತಿದ್ದಂತೆಯೇ ವಿದೇಶಕ್ಕೆ ಪಲಾಯನ ಮಾಡುವುದು ಪಾಕಿಸ್ತಾನದಲ್ಲಿ ಒಂದು ವಾಡಿಕೆಯೇ ಆಗಿಹೋಗಿದೆ.

ನವಾಜ್ ಷರೀಫ್ ಅವರ ಮೇಲೆ ಆರೋಪಗಳು ಬರುತ್ತಿದ್ದಂತೆ, ಅವರು ಇಂಗ್ಲೆಂಡಿಗೆ ಪಲಾಯನ ಮಾಡಿದ್ದರು. ಇಡೀ ದೇಶವನ್ನು ತಮ್ಮ ಅಂಕೆಗೆ ತೆಗೆದುಕೊಂಡಿದ್ದ, ಭಾರತದ ಮೇಲೆ ಯುದ್ಧ ಸಾರಿದ್ದ ಪರ್ವೇಜ್ ಮುಷರಫ್ ಕೊನೆಗಾಲದಲ್ಲಿ ಸೌದಿ ಅರೇಬಿಯಾವನ್ನು ನೆಚ್ಚಿಕೊಳ್ಳಬೇಕಾಯಿತು. ಬೆನಜೀರ್ ಭುಟ್ಟೊ, ಆಸಿಫ್ ಅಲಿ ಜರ್ದಾರಿ ಅವರ ನಸೀಬು ಭಿನ್ನವಾಗಿಯೇನೂ ಇರಲಿಲ್ಲ.

ಇದೀಗ ಇಮ್ರಾನ್ ಖಾನ್ ಅಂತಹುದೇ ಆರೋಪ ಎದುರಿಸುತ್ತಿದ್ದಾರೆ. ಅವರು ದೇಶ ತೊರೆದಿಲ್ಲ. ಸರ್ಕಾರ ಮತ್ತು ಸೇನೆಯನ್ನು ಏಕಕಾಲಕ್ಕೆ ಎದುರು ಹಾಕಿಕೊಂಡು ತೊಡೆತಟ್ಟಿ ನಿಂತಿದ್ದಾರೆ. ಪರಿಣಾಮವಾಗಿ, ರಾಜಕೀಯ ಬಿಕ್ಕಟ್ಟು ಎದುರಾಗಿದೆ. ಪಾಕಿಸ್ತಾನ ಅರಾಜಕತೆಯ ಬೀಡಾಗಿದೆ.

ಹೋದ ವಾರ ಇಮ್ರಾನ್ ತಮ್ಮ ಮೇಲಿನ ಮೊಕದ್ದಮೆಗಳ ಕುರಿತ ವಿಚಾರಣೆಗೆಂದು ಇಸ್ಲಾಮಾಬಾದ್ ಹೈಕೋರ್ಟ್‌ಗೆ ಆಗಮಿಸಿದ ವೇಳೆ ಅವರನ್ನು ನಾಟಕೀಯ ರೀತಿಯಲ್ಲಿ ಬಂಧಿಸಲಾಯಿತು. ಪಾಕಿಸ್ತಾನದ ಅರೆಸೇನಾ ಪಡೆಯ ಕಮಾಂಡೊಗಳು ಇಮ್ರಾನ್ ಅವರು ಇದ್ದ ಕೊಠಡಿಗೆ ನುಗ್ಗಿ, ವಕೀಲರನ್ನು, ಭದ್ರತಾ ಸಿಬ್ಬಂದಿಯನ್ನು ದೂಡಿ ಅವರನ್ನು ಬಲವಂತದಿಂದ ಎಳೆದೊಯ್ದರು.

ಇಮ್ರಾನ್ ಬಂಧನದ ವಿಡಿಯೊ ತುಣುಕು ಹೆಚ್ಚು ಹರಿದಾಡುತ್ತಿದ್ದಂತೆಯೇ ಅವರ ಪಕ್ಷವಾದ ಪಿಟಿಐ (ಪಾಕಿಸ್ತಾನ್ ತೆಹ್ರಿಕ್- ಎ- ಇನ್ಸಾಫ್) ಕಾರ್ಯಕರ್ತರು ರಸ್ತೆಗಿಳಿದರು. ಸಿಕ್ಕ ಕಡೆ ಕಲ್ಲು ತೂರಿದರು. ಕರಾಚಿಯಲ್ಲಿ ಹಲವು ಬಸ್ಸುಗಳನ್ನು ಸುಡಲಾಯಿತು. ಲಾಹೋರಿನಲ್ಲಿ ಸೇನಾ ಕಮಾಂಡರ್ ವಸತಿಗೃಹಕ್ಕೆ ಬೆಂಕಿ ಹಚ್ಚಲಾಯಿತು. ಪೇಶಾವರದ ರೇಡಿಯೊ ಪಾಕಿಸ್ತಾನದ ಕಟ್ಟಡ ಅಗ್ನಿಗೆ ಆಹುತಿಯಾಯಿತು. ಐಎಸ್‌ಐಗೆ ಸೇರಿದ ಕಚೇರಿಗಳನ್ನೂ ಪ್ರತಿಭಟನಾಕಾರರು ಬಿಡಲಿಲ್ಲ. ಪ್ರತಿಭಟನೆಯ ವೇಳೆ ಹನ್ನೊಂದು ಜನ ಪ್ರಾಣತೆತ್ತರು. ಅಲ್ ಖಾದಿರ್ ಟ್ರಸ್ಟ್ ಮೊಕದ್ದಮೆಗೆ ಸಂಬಂಧಿಸಿದಂತೆ ಇಮ್ರಾನ್ ಖಾನ್ ಅವರನ್ನು ಬಂಧಿಸಲಾಗಿದೆ ಎಂದು ಸರ್ಕಾರ ಕಾರಣ ನೀಡಿತು. ಎರಡು ದಿನಗಳ ಬಳಿಕ ಪಾಕಿಸ್ತಾನದ ಸುಪ್ರೀಂ ಕೋರ್ಟ್, ಇಮ್ರಾನ್ ಖಾನ್ ಅವರನ್ನು ಬಂಧಿಸಿದ್ದು ಕಾನೂನಾತ್ಮಕವಲ್ಲ ಎಂದು ಅವರನ್ನು ಬಿಡುಗಡೆ ಮಾಡಿತು.

ಆದರೆ ಇಷ್ಟಕ್ಕೇ ಎಲ್ಲವೂ ಮುಗಿಯುತ್ತದೆಯೇ? ಇದು ಪಾಕಿಸ್ತಾನದಲ್ಲಿ ಚುನಾವಣಾ ವರ್ಷವಾಗಿರುವುದರಿಂದ ಕಾವು ಬೇಗ ಆರುವುದಿಲ್ಲ. 2016ರಲ್ಲಿ ಪನಾಮ ಪೇಪರ್ಸ್ ಬಿಡುಗಡೆಯಾದಾಗ, ನವಾಜ್ ಷರೀಫ್ ಸಹೋದರರ ವಿರುದ್ಧ ಭ್ರಷ್ಟಾಚಾರದ ಆರೋಪ ಕೇಳಿಬಂದಿತ್ತು. ಇಮ್ರಾನ್ ಖಾನ್ ತಮ್ಮ ಎದುರಾಳಿಗಳನ್ನು ಕಳ್ಳರು, ದರೋಡೆಕೋರರು ಎಂದು ಕರೆಯುತ್ತಾ ತಮ್ಮನ್ನು 'ಮಿಸ್ಟರ್ ಕ್ಲೀನ್' ಎಂಬಂತೆ ಬಿಂಬಿಸಿಕೊಂಡಿದ್ದರು. ಪಾಕಿಸ್ತಾನವನ್ನು ಭ್ರಷ್ಟಾಚಾರಮುಕ್ತ ಮಾಡಿ ಹೊಸ ಎತ್ತರಕ್ಕೆ ಕೊಂಡೊಯ್ಯುವ ಭರವಸೆಯನ್ನು ಜನರಲ್ಲಿ ತುಂಬಿದ್ದರು.

ಇದೀಗ ಇಮ್ರಾನ್ ಖಾನ್ ಅವರ 'ಮಿಸ್ಟರ್ ಕ್ಲೀನ್' ಮುಖವಾಡವನ್ನು ಕಳಚಬೇಕು ಎಂದು, ಲಂಡನ್‌ನಲ್ಲಿ ಕುಳಿತಿರುವ ನವಾಜ್ ಷರೀಫ್ ಅವರು ತೀರ್ಮಾನಿಸಿದಂತೆ ಕಾಣುತ್ತಿದೆ. ಅದಕ್ಕೆ ಪೂರಕವಾಗಿ ಅಲ್ ಖಾದಿರ್ ಟ್ರಸ್ಟ್ ಪ್ರಕರಣ ಷರೀಫ್‌ದ್ವಯರಿಗೆ ಅಸ್ತ್ರವಾಗಿ ಸಿಕ್ಕಿದೆ. ಹಿಂದಿನ ಜೂನ್‌ನಲ್ಲಿ ಬಿಡುಗಡೆಗೊಂಡಿದ್ದ ಆಡಿಯೊ ಟೇಪ್ ಒಂದು ಪಾಕಿಸ್ತಾನದಲ್ಲಿ ಬಹಳ ಸದ್ದು ಮಾಡಿತ್ತು. ಇಮ್ರಾನ್ ಅವರು ಪ್ರಧಾನಿಯಾಗಿದ್ದ ಅವಧಿಯಲ್ಲಿ ಅವರ ಪತ್ನಿ ಸರ್ಕಾರದಿಂದ ಕೆಲಸ ಮಾಡಿಸಿಕೊಡಲು ಐದು ಕ್ಯಾರೆಟ್ ವಜ್ರದ ಉಂಗುರವನ್ನು ಉಡುಗೊರೆಯಾಗಿ ಕೇಳಿದ್ದರು ಎಂದು ಬಹರಿಯಾ ಟೌನ್ ಎಂಬ ರಿಯಲ್ ಎಸ್ಟೇಟ್ ಸಂಸ್ಥೆಯ ಮುಖ್ಯಸ್ಥ ಮಲಿಕ್ ರಿಯಾಸ್ ಅವರ ಮಗಳು ತನ್ನ ತಂದೆಗೆ ಹೇಳಿದ್ದ ಸಂಭಾಷಣೆ ಆಡಿಯೊದಲ್ಲಿ ಇತ್ತು.

ಅದರ ಬೆನ್ನಲ್ಲೇ ಪಾಕಿಸ್ತಾನದ ಪ್ರಮುಖ ರಿಯಲ್ ಎಸ್ಟೇಟ್ ಸಂಸ್ಥೆಯೊಂದರ ಐವತ್ತು ಸಾವಿರ ಕೋಟಿ ರೂಪಾಯಿ ಕಾಳಧನವನ್ನು ಕಾನೂನುಬದ್ಧಗೊಳಿಸಲು ಇಮ್ರಾನ್ ಖಾನ್ ಮತ್ತು ಅವರ ಪತ್ನಿ, ಹಣ ಮತ್ತು ಜಮೀನನ್ನು ಪಡೆದುಕೊಂಡಿದ್ದಾರೆ ಎಂಬ ಆರೋಪ ಕೇಳಿಬಂತು. ನೂರಾರು ಎಕರೆ ಜಾಗವನ್ನು ಅಲ್ ಖಾದಿರ್ ಟ್ರಸ್ಟ್‌ಗೆ ದಾನದ ರೂಪದಲ್ಲಿ ನೀಡಲಾಗಿದೆ. ಈ ಟ್ರಸ್ಟ್‌ನಲ್ಲಿರುವ ಟ್ರಸ್ಟಿಗಳು ಎಂದರೆ ಇಮ್ರಾನ್ ಖಾನ್ ಮತ್ತು ಅವರ ಪತ್ನಿ ಮಾತ್ರ. ಹಾಗಾಗಿ ಇಮ್ರಾನ್ ಖಾನ್ ಭ್ರಷ್ಟಾಚಾರದಲ್ಲಿ ಭಾಗಿಯಾಗಿದ್ದಾರೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು. ಈಗ ಸರ್ಕಾರ ಅದೇ ಪ್ರಕರಣವನ್ನು ಇಮ್ರಾನ್ ವಿರುದ್ಧ ಅಸ್ತ್ರವಾಗಿ ಬಳಸುತ್ತಿದೆ.

ಹಾಗಾದರೆ ಇಮ್ರಾನ್ ಇತರ ನಾಯಕರಂತೆ ದೇಶ ಬಿಡಬೇಕಾದ ಸಂದರ್ಭ ಬರಬಹುದೇ? ಪಾಕಿಸ್ತಾನದ ಮಟ್ಟಿಗೆ ಇಂದಿಗೂ ಇಮ್ರಾನ್ ಖಾನ್ ಬಹಳ ಜನಪ್ರಿಯ ನಾಯಕ. ಇಮ್ರಾನ್ ಪರ ಪ್ರತಿಭಟನೆಗೆ ಇಳಿದವರು ಬರೀ ಸರ್ಕಾರದ ವಿರುದ್ಧ ಪ್ರತಿಭಟಿಸಲಿಲ್ಲ. ಸೇನೆಯ ವಿರುದ್ಧವೂ ತಿರುಗಿಬಿದ್ದಿರುವುದು ಅಚ್ಚರಿ. ಇಂಗ್ಲೆಂಡ್ ಮತ್ತು ಕೆನಡಾದಲ್ಲಿ ವಾಸವಾಗಿರುವ ಪಾಕಿಸ್ತಾನ ಸೇನೆಯ ಮಾಜಿ ಅಧಿಕಾರಿಗಳು ಪಿಟಿಐ ಕಾರ್ಯಕರ್ತರನ್ನು ಪ್ರತಿಭಟನೆಗೆ ಉತ್ತೇಜಿಸಿರುವ ಸಂಗತಿ ಇದೀಗ ಬೆಳಕಿಗೆ ಬಂದಿದೆ. ಇಮ್ರಾನ್ ಖಾನ್ ಸುಪ್ರೀಂ ಕೋರ್ಟ್ ಅನ್ನು ಪ್ರವೇಶಿಸಿದಾಗ, ನ್ಯಾಯಮೂರ್ತಿಗಳು ಇಮ್ರಾನ್ ಖಾನ್ ಅವರಿಗೆ 'ನೈಸ್ ಟು ಸೀ ಯು' ಎಂದದ್ದು ಎಷ್ಟು ಸರಿ ಎಂಬ ಚರ್ಚೆ ಪಾಕಿಸ್ತಾನದಲ್ಲಿ ನಡೆಯುತ್ತಿದೆ.

ಇಮ್ರಾನ್ ಖಾನ್ ಅವರಿಗೆ ಪಿಟಿಐ ಕಾರ್ಯಕರ್ತರ ಜೊತೆಗೆ, ಕೆಲವು ಸರ್ಕಾರಿ ಅಧಿಕಾರಿಗಳು ಮತ್ತು ನಿವೃತ್ತ ಸೇನಾಧಿಕಾರಿಗಳ ಬೆಂಬಲವೂ ಇದ್ದಂತೆ ಕಾಣುತ್ತಿದೆ. ಅಭೂತಪೂರ್ವ ಜನಪ್ರಿಯತೆ ಮತ್ತು ಸಾಂಸ್ಥಿಕ ಬೆಂಬಲ ಗಳಿಸಿಕೊಂಡಿರುವ ಇಮ್ರಾನ್, ಪ್ರಬಲ ರಾಜಕಾರಣಿಯಾಗಿ ಹೊರಹೊಮ್ಮಿದ್ದಾರೆ. ರಾಜಕೀಯ ಭ್ರಷ್ಟಾಚಾರ ಮತ್ತು ಸೇನೆಯ ಸರ್ವಾಧಿಕಾರದಿಂದ ಬಸವಳಿದಿರುವ ಪಾಕಿಸ್ತಾನದ ಒಂದು ವರ್ಗ ಇಮ್ರಾನ್ ಅವರ ಜೊತೆಗೆ ನಿಂತಿದೆ ಮತ್ತು ಇಮ್ರಾನ್ ಅವರನ್ನು ಬೆಂಬಲಿಸುವುದೆಂದರೆ ಮಾಡು ಇಲ್ಲವೇ ಮಡಿ ಹೋರಾಟ ಎಂದು ಪರಿಗಣಿಸಿದಂತೆ ಕಾಣುತ್ತಿದೆ. ಇಷ್ಟರ ಮೇಲೆ ಇಮ್ರಾನ್ ಪದೇಪದೇ 'ಪಶ್ಚಿಮ ಪಾಕಿಸ್ತಾನದಲ್ಲಿ ಏನಾಯಿತು ನೆನಪಿಸಿಕೊಳ್ಳಿ' ಎಂದು ಬಾಂಗ್ಲಾ ವಿಮೋಚನಾ ಹೋರಾಟವನ್ನು ನೆನಪಿಸುತ್ತಿದ್ದಾರೆ. ಈ ಕಾರಣದಿಂದಲೇ ಸೇನೆಯು ಇಮ್ರಾನ್ ವಿಷಯದಲ್ಲಿ ಬಹಳಷ್ಟು ಸಂಯಮ ಪ್ರದರ್ಶಿಸುತ್ತಿದೆ.


ತಮ್ಮ ಬಂಧನದ ವಿಷಯವನ್ನು ಇಮ್ರಾನ್ ಇಲ್ಲಿಗೇ ಬಿಡುವಂತೆ ಕಾಣುತ್ತಿಲ್ಲ. 'ಭಯೋತ್ಪಾದಕನನ್ನು ಸೆರೆ ಹಿಡಿಯುವಂತೆ ಬಂಧಿಸಲಾಯಿತು. ನನ್ನನ್ನು ಬಂಧಿಸಿ ಜೈಲಿಗಟ್ಟಬೇಕು ಇಲ್ಲವೇ ಇಲ್ಲವಾಗಿಸಬೇಕು. ಅದರ ಹೊರತು ಪ್ರತಿಪಕ್ಷಕ್ಕೆ ಚುನಾವಣೆ ಗೆಲ್ಲಲು ಅವಕಾಶಗಳಿಲ್ಲ. ಎಲ್ಲವೂ 'ಲಂಡನ್ ಪ್ಲ್ಯಾನ್'ನಂತೆಯೇ ನಡೆಯುತ್ತಿದೆ' ಎಂದು ಅವರು ಹೇಳುತ್ತಿದ್ದಾರೆ. ಸೇನೆಯ ಬೆಂಬಲದೊಂದಿಗೆ ಹನ್ನೆರಡು ಪಕ್ಷಗಳ ಒಕ್ಕೂಟ ತಮ್ಮ ವಿರುದ್ಧ ಸ್ಪರ್ಧಿಸಿದರೂ ಜನ ಪಿಟಿಐ ಪಕ್ಷವನ್ನೇ ಬೆಂಬಲಿಸುತ್ತಾರೆ ಎಂಬ ಅತಿವಿಶ್ವಾಸ ಇಮ್ರಾನ್ ಅವರಲ್ಲಿ ಇದ್ದಂತಿದೆ.

ಇಮ್ರಾನ್ ಖಾನ್ ಸುಪ್ರೀಂ ಕೋರ್ಟ್‌ನ ಎದುರು ಹಾಜರಾದಾಗ, ನ್ಯಾಯಮೂರ್ತಿ ಅಥರ್ ಮಿನಲ್ಲಾ ಅವರು 'ರಾಜಕೀಯ ದ್ವೇಷ ಮತ್ತು ಭಿನ್ನಾಭಿಪ್ರಾಯಗಳನ್ನು ಮೀರಿ ದೇಶದ ಸ್ಥಿರತೆಗೆ ಜನರನ್ನು ಒಗ್ಗೂಡಿಸಬಲ್ಲ ರಾಜಕೀಯ ಮುತ್ಸದ್ದಿಯ ಅಗತ್ಯ ಪಾಕಿಸ್ತಾನಕ್ಕಿದೆ' ಎಂದು ಇಮ್ರಾನ್ ಸಮ್ಮುಖದಲ್ಲೇ ಹೇಳಿದ್ದು ವರದಿಯಾಗಿದೆ.

ವಿಪರ್ಯಾಸ ನೋಡಿ, ಪಾಕಿಸ್ತಾನದ ಜನತೆ ಅಂತಹ ರಾಜಕೀಯ ಮುತ್ಸದ್ದಿಯನ್ನು ಇದುವರೆಗೂ ಕಂಡಿಲ್ಲ. ಅಸಲಿಗೆ ಪಾಕ್ ಸೇನೆ ಅಂತಹ ರಾಜಕೀಯ ನಾಯಕನನ್ನು ಅಪೇಕ್ಷಿಸುವುದೂ ಇಲ್ಲ, ಬೆಳೆಯಗೊಡುವುದೂ ಇಲ್ಲ. ಇಮ್ರಾನ್ ಖಾನ್ 'ಮಿಸ್ಟರ್ ಕ್ಲೀನ್' ಆಗಿ ಉಳಿಯುತ್ತಾರೋ, ಅವರು ದೇಶ ತೊರೆಯುವ ಪರಿಸ್ಥಿತಿ ಬರುತ್ತದೋ, ಇಮ್ರಾನ್, ಷರೀಫ್ ಮತ್ತು ಸೇನೆ ನಡುವಿನ ಈ ರಾಜಕೀಯ ಗುದ್ದಾಟ ಪಾಕಿಸ್ತಾನದಲ್ಲಿ ಅಂತರ್ಯುದ್ಧಕ್ಕೆ ಕಾರಣವಾಗುತ್ತದೋ ಕಾದು ನೋಡಬೇಕು.



ಚುರುಮುರಿ



ಹೋಟೆಲ್ ರೈಸ್!

• ಬಿ.ಎನ್.ಮಲ್ಲೇಶ್

'ಮಂಜಮ್ಮ, ತಿಂಡಿ ಏನೈತೆ? ಗೀರೈಸ್, ಕರ್ಡ್ ರೈಸ್ ಏನರೆ ಮಾಡಿದೀಯ?' ಗುಡ್ಡೆ ಕೇಳಿದ.

ಮಂಜಮ್ಮನಿಗೆ ಸಿಟ್ಟು ಬಂತು. 'ಇಡ್ಲಿ ಸಾಂಬಾರ್ ಬಾಕೀನೆ ಇನ್ನೂ ಕೊಟ್ಟಿಲ್ಲ, ನಿನ್ ಮೂತಿಗೆ ಗೀರೈಸ್ ಬೇರೆ ಕೇಡು' ಎಂದಳು.

'ನಿನ್ ಡಬ್ಬಾ ತಿಂಡಿ ಎಲ್ಲ ಬದ್ಲಾಗಬೇಕು ಮಂಜಮ್ಮ, ಇನ್ಮೇಲೆ ಪಲಾವು, ಟಮೊಟೋ ರೈಸು, ಲೆಮನ್ ರೈಸು, ಗೀರೈಸು ಇಂತವು ಮಾಡು, ಹೆಂಗೂ ನಮ್ ಸರ್ಕಾರ ಬಂದೇತಿ, ಒಬ್ರಿಗೆ ಹತ್ ಕೇಜಿ ಅಕ್ಕಿ ಫ್ರೀ' ಗುಡ್ಡೆ ನಕ್ಕ.

'ಕರೆಕ್ಟ್ ಮಂಜಮ್ಮ, ಇನ್ಮೇಲೆ ನಿನ್ ಹೋಟ್ಲಿಗೆ 'ಹೋಟೆಲ್ ರೈಸ್' ಅಂತ ಬೋರ್ಡ್ ಹಾಕ್ಬಿಡು, ವ್ಯಾಪಾರ ಹೆಂಗಾಗುತ್ತೆ ನೋಡ್ತಿರು' ತೆಪರೇಸಿನೂ ದನಿಗೂಡಿಸಿದ.

'ಅಕ್ಕಿ ಕೊಟ್‌ಬಿಟ್ರೆ? ಗ್ಯಾಸು, ಎಣ್ಣೆ, ಉಪ್ಪು, ಹುಣಸೆಹಣ್ಣು ನಿಮ್ಮಪ್ಪ ಕೊಡ್ತಾನಾ?'

'ಅದ್ಕೆ ಅಲ್ವ ನಿಂಗೆ ಎರಡು ಸಾವಿರ ಕೊಡೋದು? ಕರೆಂಟೂ ಫ್ರೀ. ಇನ್ನೇನಾಗಬೇಕು?' ದುಬ್ಬೀರ ಪ್ರಶ್ನಿಸಿದ.

'ದುಬ್ಬೀರ್ ಭೈ, ಯೇ ಅಚ್ಛಾ ನಹೀ... ಮನ್‌ಶಾ ದುಡ್ದು ತಿನ್ಬೇಕು, ಆಗ್ಲೇ ಖುಷಿ. ಈ ಪುಗ್ಸೇಟೆ ಗಿಗ್ಸೇಟೆ ಎಲ್ಲ ಬಹುತ್ ದಿನ್ ಚಲ್ತಾ ನಹೀ' ಗೌಸು ಆಕ್ಷೇಪಿಸಿದ.

'ಇವನ್ಯಾವನಲೆ, ಅಲ್ಲೋ ಅವರಾಗೇ ಕೊಡ್ತೀವಿ ಅಂದ್ರ ನಾವ್ಯಾಕೆ ಬ್ಯಾಡ ಅನ್ಬೇಕು? ಎಷ್ಟ್ ದಿನ ಕೊಡ್ತಾರೆ ಕೊಡ್ಲಿ ಬಿಡು' ಗುಡ್ಡೆಗೆ ಕೋಪ.

ಇಷ್ಟೆಲ್ಲ ನಡೆದರೂ ಏನೂ ಮಾತಾಡದೆ ಕೂತಿದ್ದ ಕೊಟ್ರೇಶಿಯನ್ನು ಕಂಡು ತೆಪರೇಸಿ, 'ಯಾಕಲೆ ಕೊಟ್ರ ಏನೂ ಮಾತಾಡ್ತಿಲ್ಲ, ನಿಂಗೆ ಫ್ರೀ ಅಕ್ಕಿ, ಫ್ರೀ ಕರೆಂಟು, ರೊಕ್ಕ ಎಲ್ಲ ಬ್ಯಾಡ್ವಾ?' ಕೇಳಿದ.

'ಲೇ ತೆಪರ, ಡಬ್ಬಲ್ ಇಂಜಿನ್‌ನೋರು ಅಕೌಂಟಿಗೆ ಹಾಕಿದ್ದ ಹದಿನೈದು ಲಕ್ಷನೇ ಇನ್ನೂ ಖರ್ಚಾಗಿಲ್ಲ, ಇನ್ನು ಈ ಡಬ್ಬಲ್ ಸ್ಟೇರಿಂಗ್‌ನೋರು ಕೊಡೋ ಜುಜುಬಿ ರೊಕ್ಕ ತಗಂಡ್ ನಾನೇನ್ ಮಾಡ್ಲಲೆ...' ಎಂದ ಆಕಾಶ ನೋಡುತ್ತ.

ಕೊಟ್ರೇಶಿ ಕೀಟಲೆಗೆ ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ದಿನದ ಟ್ವೀಟ್


ಏನಾಗುತ್ತಿದೆ?



ಕಾಶ್ಮೀರವು ಇಂಟರ್‌ನೆಟ್ ಸೇವೆ ಇಲ್ಲದೆ ಒಂದು ವರ್ಷ ಕಾಲ ಲಾಕ್‌ಡೌನ್ ಆಗಿದ್ದಾಗ, ನಾವು ಆ ರಾಜ್ಯದೆಡೆಗೆ ಇದೇ ರೀತಿಯ ತಾರತಮ್ಯ ತೋರಿದೆವು... ಆದರೆ ಇಂದು ನಾವು ಅದನ್ನು ಪ್ರವಾಸಕ್ಕೆ ಯೋಗ್ಯವಾದ ರಾಜ್ಯ ಎಂದುಕೊಂಡು ಮೋಜು ಅನುಭವಿಸುತ್ತಿದ್ದೇವೆ... ಈಗ ಮಣಿಪುರಕ್ಕೂ ಅದೇ ರೀತಿ ಮಾಡಿ... ಅದು ಉರಿಯಲಿ. ನಂತರ ಅಲ್ಲಿ ಏನು ಉಳಿದುಕೊಳ್ಳುತ್ತದೋ ಹಾಗೂ ಪುನರ್‌ನಿರ್ಮಾಣಗೊಳ್ಳುತ್ತದೋ ಅದನ್ನು ಹೋಗಿ ಖುಷಿಯಿಂದ ಅನುಭವಿಸಿ... ನಮ್ಮೊಳಗೆ ಏನೋ ಒಂದು ಸತ್ತುಹೋಗಿದೆ ಹಾಗೂ ಅದು ಕೊಳೆತುಹೋಗುತ್ತಿದೆ...

ಚೇತನಾ ಗೌತಮ್

ಕಿಡಿನುಡಿ



ಚುನಾವಣಾ ಪ್ರಣಾಳಿಕೆಯಲ್ಲಿ ರಾಜಕೀಯ ಪಕ್ಷವು ನೀಡಿರುವ ಆಶ್ವಾಸನೆಗಳನ್ನು ಈಡೇರಿಸುವಂತೆ ನಾಗರಿಕರು ತಾಕೀತು ಮಾಡಲಾಗದು. ಇವು, ಜಾರಿಗೊಳಿಸಲಾಗದ ರಾಜ್ಯ ನಿರ್ದೇಶಕ ತತ್ವಗಳು. ಹಾಗೇ ಜನಪರ ಆಶ್ವಾಸನೆಗಳನ್ನು ಒಲ್ಲದವರು ಸರ್ಕಾರಿ ಯೋಜನೆಗಳ ಫಲಾನುಭವಿಗಳನ್ನು ಅಪಹಾಸ್ಯಕ್ಕೆ ಗುರಿಮಾಡಿ ಕೀಳಾಗಿ ಮಾತನಾಡುವುದು ಶಿಕ್ಷಾರ್ಹವಲ್ಲದ ಅನಾಗರಿಕ ಮಾನಸಿಕ ಸ್ಥಿತಿ!

ಕೆ.ಬಿ.ಕೆ. ಸ್ವಾಮಿ, ವಕೀಲ

25 ವರ್ಷಗಳ ಹಿಂದೆ

ಮಂಗಳವಾರ, 19-5-1998

• ಪ್ರಜ್ಞಾಹೀನ ಸ್ಥಿತಿಯಲ್ಲಿ ತಾರೆ ನಿವೇದಿತಾ ಜೈನ್

ಬೆಂಗಳೂರು, ಮೇ 18– ಉದಯೋನ್ಮುಖ ಚಿತ್ರನಟಿ ನಿವೇದಿತಾ ಜೈನ್ ಅವರು ಮನೆಯಲ್ಲಿ ಜಾರಿ ಬಿದ್ದು ತಲೆ, ಕೈ ಮತ್ತು ಕಿಬ್ಬೊಟ್ಟೆಗೆ ತೀವ್ರ ಸ್ವರೂಪದ ಗಾಯಗಳಾಗಿವೆ.

ಅವರನ್ನು ಚಿಕಿತ್ಸೆಗಾಗಿ ನಗರದ ಆಸ್ಪತ್ರೆಗೆ ದಾಖಲಿಸಲಾಗಿದೆ.

ರಾಜರಾಜೇಶ್ವರಿ ನಗರದಲ್ಲಿ ವಾಸವಾಗಿರುವ ಅವರು, ಭಾನುವಾರ ರಾತ್ರಿ 10.30ರ ವೇಳೆಯಲ್ಲಿ ಮಹಡಿ ಮೇಲೆ ವ್ಯಾಯಾಮ ಮಾಡಿ ಕೆಳಗಡೆ ಇಳಿಯುತ್ತಿದ್ದಾಗ ಎರಡನೇ ಅಂತಸ್ತಿನಿಂದ ಜಾರಿ ಬಿದ್ದು ತೀವ್ರ ಗಾಯಗೊಂಡರು. ಬಲ ಮುಂಗೈ ಮರಿದಿದೆ.

ಪ್ರಜ್ಞಾಹೀನರಾಗಿರುವ ಅವರನ್ನು ತೀವ್ರ ನಿಗಾ ವಾರ್ಡಿನಲ್ಲಿ ಇಡಲಾಗಿದೆ. ಅವರ ಸ್ಥಿತಿಯ ಬಗ್ಗೆ ಇನ್ನೂ 48 ಗಂಟೆಗಳ ಕಾಲ ಏನನ್ನೂ ಹೇಳಲು ಸಾಧ್ಯವಿಲ್ಲವೆಂದು ವೈದ್ಯರು ಹೇಳುತ್ತಿರುವುದಾಗಿ ಆಕೆಯ ತಂದೆ ಕ್ಯಾ. ರಾಜೇಂದ್ರ ಜೈನ್ ತಿಳಿಸಿದರು.

• ರಾಜ್ಯದಾದ್ಯಂತ ಭೂ ಮರುಮಾಪನಕ್ಕೆ ಕ್ರಮ

ಬೆಂಗಳೂರು, ಮೇ 18– ಆಧುನಿಕ ಉಪಕರಣಗಳನ್ನು ಬಳಸಿ ರಾಜ್ಯದಾದ್ಯಂತ ಎಲ್ಲ ಜಮೀನುಗಳ ಮರು ಭೂಮಾಪನ ನಡೆಸಲು ಸರ್ಕಾರ ತೀರ್ಮಾನಿಸಿದ್ದು, ಇದಕ್ಕಾಗಿ ಸುಮಾರು 500 ಕೋಟಿ ರೂಪಾಯಿ ಅಂದಾಜು ಯೋಜನೆಯೊಂದನ್ನು ರೂಪಿಸಲಾಗಿದೆ ಎಂದು ಕಂದಾಯ ಸಚಿವ ಬಿ. ಸೋಮಶೇಖರ್ ತಿಳಿಸಿದರು.

'ರಾಜ್ಯ ಸರ್ಕಾರದ ಈ ಮಹತ್ವಾಕಾಂಕ್ಷಿ ಯೋಜನೆಗೆ ಕೇಂದ್ರ ಸರ್ಕಾರದ ಆರ್ಥಿಕ ನೆರವು ಪಡೆಯಲಾಗುವುದು. ಒಂದು ವೇಳೆ ಕೇಂದ್ರದ ನೆರವು ದೊರೆಯದೇ ಇದ್ದರೆ ವಿದೇಶಿ ಹಣಕಾಸು ಸಂಸ್ಥೆಗಳ ನೆರವು ಪಡೆದು ಯೋಜನೆಯನ್ನು ಜಾರಿಗೊಳಿಸಲು ಉದ್ದೇಶಿಸಲಾಗಿದೆ' ಎಂದು ಅವರು ವರದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಶನಿವಾರ, 19-5-1973

• ಪ್ರತಿಭಟನೆ, ಧರಣಿ, ತಂತ್ರ ವಿಧೇಯಕ ಮಂಡನೆಗೆ ತಡೆ

ಬೆಂಗಳೂರು, ಮೇ 18– ಉಗ್ರ ಪ್ರತಿಭಟನೆ, ಕ್ರಿಯಾಲೋಪಗಳ ಸರಣಿ, ಅಧ್ಯಕ್ಷ ಪೀಠ ಸುತ್ತುವರಿಯುವ ಯತ್ನ ಮತ್ತು ಧರಣಿ ಮೊದಲಾದ ಎಲ್ಲ ಅಸ್ತ್ರಗಳನ್ನೂ ಬಳಸಿದ ವಿರೋಧ ಪಕ್ಷದ ಸದಸ್ಯರು ಇಂದು ವಿಧಾನಸಭೆಯಲ್ಲಿ ಕೃಷಿ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದ ವಿಧೇಯಕವು ಪರಿಶೀಲನೆಗೆ ಮಂಡನೆಯಾಗುವುದಕ್ಕೂ ಅವಕಾಶ ಕೊಡದಿರುವ ಅಪೂರ್ವ ಸನ್ನಿವೇಶ ತರುವುದರಲ್ಲಿ ಯಶಸ್ವಿಯಾದರು.

ಉಪಾಧ್ಯಕ್ಷ ಶ್ರೀ ಬಿ.ಪಿ. ಕದಂ ಅವರು ರಾಜ್ಯಪಾಲರು ವಿಧೇಯಕಕ್ಕೆ ಕಳುಹಿಸಿದ್ದ ಶಿಫಾರಸನ್ನು ಓದುವುದಕ್ಕೂ ಒಕ್ಕೊರಲಿನಲ್ಲಿ 'ನೋ ನೋ' ಎಂದು ಅಧ್ಯಕ್ಷ ಪೀಠದ ಬಳಿಯೇ ನಿಂತು ಕೂಗಿ ಅವಕಾಶ ಕೊಡದ ಸದಸ್ಯರು, ಕೃಷಿ ಸಚಿವ ಶ್ರೀ ಕೆ.ಎಚ್. ಪಾಟೀಲರು ಎದ್ದಾಗ ತಮ್ಮ ಪ್ರತಿರೋಧವನ್ನು ಹೆಚ್ಚು ಮಾಡಿದರು.

ಸಂಗತ

ಆಹಾರ, ಆರೋಗ್ಯ, ಆತಂಕ

ಆರೋಗ್ಯದ ವಿಷಯದಲ್ಲಿ ಜೀವಜಗತ್ತಿನ ಯಾವುದೇ ಜೀವಿಗಿರದ ಆತಂಕ, ಅಪನಂಬಿಕೆಗಳು ಮನುಷ್ಯರನ್ನು ಕಾಡುವುದೇಕೆ?

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಆಧುನಿಕ ಜೀವನಶೈಲಿಯಲ್ಲಿ ಸಕಲ ವೈಭೋಗವನ್ನೂ ಅನುಭವಿಸುತ್ತಾ ಮತ್ತಷ್ಟು ಸೌಲಭ್ಯಗಳನ್ನು ಅಪೇಕ್ಷಿಸುವ ನಾವು, ತಿನ್ನುವ ಆಹಾರ ವಿಷಯುಕ್ತವಾಗುತ್ತಿರುವ ಬಗ್ಗೆ ಹೆಚ್ಚು ತಲೆಕೆಡಿಸಿಕೊಂಡಿಲ್ಲ. ದುರಂತವೆಂದರೆ, ಆರೋಗ್ಯ, ಆಯುಷ್ಯವನ್ನು ಅಗತ್ಯವಾಗಿ ನೀಡಬೇಕಾದ ನಮ್ಮ ಆಹಾರ ಮತ್ತು ಔಷಧಗಳೇ ನಮ್ಮನ್ನೀಗ ಬಾಧಿಸುತ್ತಿವೆ. ಜೀವದಾತರು, ದೇವರು ಎನಿಸಿಕೊಳ್ಳುವ ಬಹುತೇಕ ವೈದ್ಯರ ನಿಸ್ಪೃಹ ಸೇವೆಯನ್ನು ನೆನೆಯುತ್ತಲೇ, ಆಧುನಿಕ ವೈದ್ಯಪದ್ಧತಿ ದುಬಾರಿಯೂ ಕೆಲವೊಮ್ಮೆ ಜೀವವಿರೋಧಿಯೂ ಆಗಿರುವುದನ್ನು ಗಮನಿಸಬೇಕಿದೆ. 'ಉಗುರಿನಿಂದ ತೆಗೆಯಬಹುದಾದ ಚಿಕಿತ್ಸೆಗೆ ಕೊಡಲಿ'ಯನ್ನು ಬಳಸುತ್ತಿರುವ ಲಾಭಕೋರ ಚಿಕಿತ್ಸಾಕ್ರಮಗಳ ಬಗ್ಗೆಯೂ ಚಿಂತಿಸಬೇಕಿದೆ.

ಆರೋಗ್ಯಸೇವೆಗಳು ಆಧುನೀಕರಣಗೊಂಡಂತೆಲ್ಲಾ ಜನರ ಆರೋಗ್ಯ ಹೆಚ್ಚಾಗಬೇಕಿತ್ತು, ಆಯುಷ್ಯರೇಖೆಯೂ ಮೇಲ್ಮುಖವಾಗಿ ಜಿಗಿಯಬೇಕಿತ್ತು, ನೆಮ್ಮದಿ ನೆಲೆಯೂರಬೇಕಿತ್ತು. ಆಗಿದ್ದೇ ಬೇರೆ. ಆರೋಗ್ಯದ ವಿಷಯದಲ್ಲಿ ಜೀವಜಗತ್ತಿನ ಯಾವುದೇ ಜೀವಿಗಿರದ ಆತಂಕ, ಅಪನಂಬಿಕೆಗಳು ಮನುಷ್ಯರನ್ನು ಕಾಡುತ್ತವೆ. 'ಭೂಮಿಯ ಮೇಲಿನ ಕೋಟ್ಯಂತರ ಜೀವಪ್ರಭೇದಗಳಲ್ಲಿ ಜೀವಿತಾವಧಿಯು ಇಳಿಮುಖಗೊಳ್ಳುತ್ತಿರುವ ಆತಂಕವಿದ್ದರೆ ಅದು ಮನುಷ್ಯನಲ್ಲೇ ಹೆಚ್ಚು' ಎನ್ನುತ್ತದೆ ಸಮೀಕ್ಷೆ. ಪ್ರಾಯಶಃ ಮನುಷ್ಯನ ಹಸ್ತಕ್ಷೇಪವಿಲ್ಲದಿದ್ದರೆ ಉಳಿದೆಲ್ಲ ಜೀವಿಗಳೂ ಈಗಿಗಿಂತ ಹೆಚ್ಚು ಕ್ಷೇಮಕರವಾಗಿ ಬದುಕಬಹುದೇನೊ. ಸಹಜವಾಗಿ, ಸ್ವಚ್ಛಂದವಾಗಿ, ಸ್ವಸ್ಥವಾಗಿ ಬದುಕುವ ಗುಣ ವನ್ಯಜೀವಿಗಳಿಗೆ ಒಲಿದಿದೆ. ಆದರೆ ಮನುಷ್ಯನ ತ್ಯಾಜ್ಯಗಳೇ ನೀರು, ಗಾಳಿ, ಆಹಾರವನ್ನು ವಿಷಮಯಗೊಳಿಸಿ ಅವುಗಳನ್ನು ಕೊಲ್ಲುತ್ತಿರುವುದು.

ಸ್ತನಿಗಳಿಗೆ ಈಗಲೂ ಸಹಜ ಹೆರಿಗೆಯಲ್ಲಿ ಮರಿಗಳು ಜನಿಸುತ್ತಿವೆ. ಅವುಗಳ ಅದೆಷ್ಟೋ ಕಾಯಿಲೆಗಳನ್ನು, ಮೈಮುರಿತಗಳನ್ನು ದೇಹ ತಂತಾನೆ ರಿಪೇರಿ ಮಾಡಿಕೊಳ್ಳುತ್ತದೆ. ವಿಚಿತ್ರವೆಂದರೆ, ಮನುಷ್ಯನ ದೇಹದ ಸುಸ್ಥಿತಿ ಮತ್ತು ಸರಾಗ ಜೀವನಕ್ರಿಯೆಗಾಗಿ ನಿತ್ಯವೂ ಪಡೆಯುತ್ತಿರುವ ಚಿಕಿತ್ಸೆಯಾಗಲಿ, ವೈದ್ಯಕೀಯ ತಪಾಸಣೆಯಾಗಲಿ ಇತರ ಜೀವಿಗಳ ಪಾಲಿಗಿಲ್ಲ. ಅವೆಲ್ಲಾ ರಕ್ತದೊತ್ತಡ, ಮಧುಮೇಹ, ಥೈರಾಯಿಡ್‌ನಂತಹ ಸಮಸ್ಯೆಗಳಿಗೆ ವಿಪರೀತ ಮದ್ದು-ಗುಳಿಗೆಗಳ ಬಳಕೆ ಮಾಡುತ್ತಿಲ್ಲ. ದೇಶದ ಹತ್ತರಲ್ಲಿ ಐವರು ರಕ್ತದೊತ್ತಡ, ಮಧುಮೇಹಕ್ಕೆ ಮಾತ್ರೆ ತಿನ್ನುವವರು. ಉಳಿದವರು ವಾರ, ಹದಿನೈದು ದಿನಗಳಿಗೊಮ್ಮೆ ಯಾವುದೋ ಚಿಕಿತ್ಸೆಗೆ ವೈದ್ಯರನ್ನು ಸಂಪರ್ಕಿಸುವವರು. ಬಹುತೇಕರು ಆರೋಗ್ಯ ವಿಮೆಯನ್ನು ಹೊಂದಿದವರು. ಯೋಚಿಸಬೇಕಿದೆ. ಒಟ್ಟಾರೆಯಾಗಿ, ಕೆಲವು ದಶಕಗಳಿಂದೀಚೆಗೆ ಬದಲಾದ ನಮ್ಮ ಜೀವನಶೈಲಿಯ ದುಷ್ಪರಿಣಾಮಗಳು ಈಗೀಗ ಸ್ಪಷ್ಟವಾಗಿ ಗೋಚರಿಸುತ್ತಿವೆ.

ಜನರ ಜೀವನಮಟ್ಟ ದುಬಾರಿಯಾಗುತ್ತಿರುವ ಇಂದಿನ ದಿನಗಳಲ್ಲಿ ಬೆಂಗಳೂರಿನಂತಹ ನಗರಗಳಲ್ಲಿ ವೈದ್ಯರ ಸಲಹಾ ಶುಲ್ಕ ದುಬಾರಿಯಾದ ಕಾರಣ, ಗೂಗಲ್ ನೋಡಿ ಸ್ವಯಂಚಿಕಿತ್ಸೆ ಪಡೆದುಕೊಳ್ಳುತ್ತಿರುವ ಸುದ್ದಿ ಅಪಾಯಕಾರಿ. ಕೋವಿಡ್ ನಂತರವಂತೂ ಖಾಸಗಿ ಆಸ್ಪತ್ರೆಗಳ ಹೊರರೋಗಿಗಳ ಸಲಹಾ ಶುಲ್ಕ ದುಪ್ಪಟ್ಟಾಗಿರುವ ಬಗ್ಗೆ ದೂರುಗಳಿವೆ. ಇನ್ನು ಸಣ್ಣ ಕಾಯಿಲೆಗೆ ಆಸ್ಪತ್ರೆಯ ಮೆಟ್ಟಿಲು ಹತ್ತುವವರನ್ನು ಪೂರ್ತಿ ಬಾಡಿ ಚೆಕಪ್, ಸ್ಕ್ಯಾನಿಂಗ್ ಪಟ್ಟಿ ಕೈಗಿಟ್ಟು ಕಳಿಸುವುದು, ಮೂತ್ರ, ರಕ್ತದ ಎಲ್ಲ ಪರೀಕ್ಷೆಗಳೂ ಕಡ್ಡಾಯ. ಆಸ್ಪತ್ರೆಯ ಎಲ್ಲ ಉಪಕರಣಗಳಿಗೂ ಕೆಲಸ ಸಿಗಬೇಕು! ಖ್ಯಾತ ವೈದ್ಯರೊಬ್ಬರು, 'ಬೇಕಿದ್ದರೆ ಕನ್ಸಲ್ಟೇಷನ್ ಶುಲ್ಕ ಸಾವಿರ ರೂಪಾಯಿ ಪಡೆದರೂ ಸರಿ, ಆದರೆ ಹಾನಿಕಾರಕ ಔಷಧ ಪ್ರಯೋಗ ಮತ್ತು ಅನಗತ್ಯ ಶಸ್ತ್ರಕ್ರಿಯೆಗಳಿಗೆ ಮುಗ್ಧ ಜನರನ್ನು ನೂಕಬೇಡಿ' ಎಂದು ವೈದ್ಯಲೋಕವನ್ನು ವಿನಂತಿಸಿದ್ದನ್ನೂ ಮರೆಯಬಾರದು.



ಇಡಿಯ ವ್ಯವಸ್ಥೆ ದಾರಿತಪ್ಪುತ್ತಾ, ಜೀವ-ಜೀವನದೊಂದಿಗೆ ಆಡುತ್ತಿರುವ ಆಟದ ಸೂಕ್ತ ನಿಯಂತ್ರಣಕ್ಕಾಗಿ ನಾವು ಒತ್ತಾಯಿಸಬೇಕು. ನಮ್ಮ ಜನಪ್ರತಿನಿಧಿಗಳು ವೈದ್ಯಕೀಯ ಮತ್ತು ಶಿಕ್ಷಣ ಸಂಸ್ಥೆಗಳ ಒಡೆಯರಾಗುತ್ತಿರುವ ಸಂದರ್ಭದಲ್ಲಿ, ಸರ್ಕಾರಿ ವ್ಯವಸ್ಥೆಗಳು ಜನರ ವಿಶ್ವಾಸ ಕಳೆದುಕೊಳ್ಳುತ್ತಿವೆ ಅಥವಾ ಅಂತಹ ಸ್ಥಿತಿಗೆ ಅವನ್ನು ನೂಕಲಾಗುತ್ತಿದೆ. ವೈದ್ಯಕೀಯ ಶಿಕ್ಷಣ ಪಡೆಯಲು ಲಕ್ಷಾಂತರ ಹಣ ತೆರುವುದು, ನಂತರದಲ್ಲಿ ದುಬಾರಿ ಬೆಲೆಗೆ ಜಾಗ ಪಡೆದು, ಕೋಟಿಗಟ್ಟಲೆ ಹಣ ಸುರಿದು ಕಟ್ಟಡ ಕಟ್ಟುವುದು, ಕೊನೆಗೆ ರೋಗಪೀಡಿತರ ಅಸಹಾಯಕ ಸ್ಥಿತಿಯಲ್ಲಿ ಹಣ ವಸೂಲಿಗಿಳಿಯುವುದೇ ಒಂದು ವಿಷಚಕ್ರ. ಬದುಕಿನ ಅನಿವಾರ್ಯ ಮತ್ತು ಅವಲಂಬಿತ ಕ್ಷೇತ್ರಗಳು ಈ ಪರಿ ದುಬಾರಿಯಾಗುತ್ತಿರುವುದೇ ಜನಸಾಮಾನ್ಯರ ಮೋಸ, ಭ್ರಷ್ಟಾಚಾರ ಮತ್ತು ಅತಿಯಾದ ಲಾಭಕೋರ ಮನಃಸ್ಥಿತಿಗಳಿಗೆ ಉತ್ತೇಜಕ.

ದೇಹದ ಸುಸ್ಥಿತಿಯನ್ನು ಅತ್ಯಾಧುನಿಕ ಯಂತ್ರೋಪಕರಣಗಳಿಂದ ಪರೀಕ್ಷಿಸಿಕೊಳ್ಳುವ ನಾವು, ಯಾವತ್ತೂ ನಮ್ಮ ಮಾನಸಿಕ ಸ್ಥಿತಿಗತಿಯ ಬಗ್ಗೆ ಹೆಚ್ಚು ಆಸಕ್ತರಲ್ಲ. ನಮ್ಮ ದೊಡ್ಡ ಸಮಸ್ಯೆಯೇ ಅದು. ದೇಹದ ಆರೋಗ್ಯ ಕೆಡಲು ಮುಖ್ಯ ಕಾರಣವೇ ಮನಸ್ಸು. ಸಹಚರರೊಂದಿಗಿನ ಪ್ರೀತಿ, ಕರುಣಾಭಾವ, ಸಕಾರಾತ್ಮಕ ಧೋರಣೆಗಳೇ ನಮ್ಮ ಆರೋಗ್ಯದ ಗುಟ್ಟು. ದುರಾಸೆ, ಮೋಸ, ಮಾನಸಿಕ ಒತ್ತಡದಲ್ಲಿ ದಕ್ಕಿಸಿಕೊಂಡ ಯಶಸ್ಸು ಮುಂಬಾಗಿಲಿನಿಂದ ಪ್ರವೇಶ ಮಾಡುವ ಹೊತ್ತಿಗೆ ನಿದ್ದೆ, ನೆಮ್ಮದಿ ಮಾತ್ರವಲ್ಲ ಆಯುಷ್ಯವೂ ಹಿಂಬಾಗಿಲಿನಿಂದ ಸದ್ದಿಲ್ಲದೆ ಹೊರನಡೆದಿರುತ್ತದೆ!

ಹಾಗಾಗಿ, ಅತ್ಯಗತ್ಯ ಸೇವಾ ಕ್ಷೇತ್ರಗಳು ಅಗ್ಗವಾಗಿ, ಸರಳ ಜೀವನಶೈಲಿ ನಮಗೊಲಿದರೆ, ನಾವು ಪ್ರಾಮಾಣಿಕ ಮತ್ತು ನೈತಿಕ ಬದುಕನ್ನು ಬದುಕಲು ಸಾಧ್ಯ. ಸಮಾಧಾನದ ಬದುಕೇ ಸಾತ್ವಿಕ ಬದುಕು, ಅದೇ ಸಾರ್ಥಕ ಬದುಕು.

ವಾಚಕರ ವಾಣಿ

ತಾರೆಯರಿಗೆ ತಿಳಿಯದೇ ಸಂಚಾರ ನಿಯಮ?

ಮುಂಬೈನಲ್ಲಿ ನಡೆದ ಎರಡು ಪ್ರಕರಣಗಳಲ್ಲಿ, ಸಂಚಾರ ದಟ್ಟಣೆಯಿಂದ ತಪ್ಪಿಸಿಕೊಳ್ಳಲು ಡ್ರಾಪ್ ಕೇಳಿದ ಚಿತ್ರನಟರಾದ ಅಮಿತಾಭ್ ಬಚ್ಚನ್ ಮತ್ತು ಅನುಷ್ಕಾ ಶರ್ಮಾ ಅವರನ್ನು ಕರೆದೊಯ್ದ ಇಬ್ಬರು ದ್ವಿಚಕ್ರ ವಾಹನ ಸವಾರರಿಗೆ ಸಂಚಾರ ಪೊಲೀಸರು ದಂಡ ವಿಧಿಸಿರುವುದು ವರದಿಯಾಗಿದೆ (ಪ್ರ.ವಾ., ಮೇ 18). ಹಿಂಬದಿ ಕುಳಿತಿದ್ದ ಈ ಇಬ್ಬರೂ ಹೆಲ್ಮೆಟ್ ಧರಿಸದ ಕಾರಣಕ್ಕೆ, ಅಮಾಯಕರಾದ ವಾಹನಗಳ ಮಾಲೀಕರಿಗೆ ದಂಡ ವಿಧಿಸಲಾಗಿದೆ. ಇದು ಎಷ್ಟು ಸರಿ?

ತಪ್ಪು ಮಾಡಿದ ಚಿತ್ರನಟರಿಂದಲೇ ದಂಡ ವಸೂಲಿ ಮಾಡಿದ್ದರೆ ಸರಿಯಾಗುತ್ತಿತ್ತು. ಸಿನಿ ತಾರೆಯರಿಗೆ ಸಂಚಾರ ನಿಯಮ ತಿಳಿದಿರಬೇಕಿತ್ತು. ಅವರಿಗೆ ತಾಕೀತು ಮಾಡುವುದನ್ನು ಬಿಟ್ಟು ಅವರನ್ನು ಕರೆದೊಯ್ದವರಿಗೆ ದಂಡ ವಿಧಿಸಿದ್ದು ಸರಿಯಾದ ಕ್ರಮವಲ್ಲ.

ಪೂಜಾ ಎಸ್., ಕಲಬುರಗಿ

ಉಚಿತ ಯೋಜನೆ: ಫಲಾನುಭವಿಗಳ ಆಯ್ಕೆಯಾಗಲಿ

ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿದ ಉಚಿತ ಸೌಲಭ್ಯಗಳೇ ಈ ಬಾರಿಯ ಚುನಾವಣೆಯಲ್ಲಿ ಅದರ ಗೆಲುವಿಗೆ ಮುಖ್ಯ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ. ಇರಬಹುದು, ಬಹುಪಾಲು ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವವರಿಂದಲೇ ತುಂಬಿಹೋಗಿರುವ ನಮ್ಮ ಸಮಾಜದಲ್ಲಿ, ಯಾರಿಂದಲಾದರೂ ಉಚಿತವಾಗಿ ಏನಾದರೂ ಸಿಗುವುದಾದರೆ ಅದು ಸ್ವಾಗತಾರ್ಹವೇ. ಉಚಿತ ಕೊಡುಗೆಗಳ ಘೋಷಣೆ ಮಾಡಿದ ಕಾಂಗ್ರೆಸ್ ಪಕ್ಷ, ಈಗ ಸರ್ಕಾರ ರಚನೆಯ ಸಂಭ್ರಮದಲ್ಲಿರುವಂತೆ, ಮತದಾರರೂ ತಮಗೆ ಏನೆಲ್ಲ ಉಚಿತವಾಗಿ ದೊರೆಯಬಹುದು ಎಂದು ಲೆಕ್ಕ ಹಾಕುತ್ತಾ ಸಂಭ್ರಮ ಪಡುತ್ತಿದ್ದಾರೆ. ಆದರೆ ಉಚಿತ ಯೋಜನೆಗಳ ಬಗ್ಗೆ ಸರ್ಕಾರದ ಆದೇಶ ಹೊರಬೀಳುವವರೆಗೆ ಯಾರೂ ಅಂತಹ ಯೋಜನೆಗಳಿಗೆ ಅರ್ಹರಾಗುವುದಿಲ್ಲ.

ಕಾಂಗ್ರೆಸ್ ಪಕ್ಷ ಘೋಷಿಸಿರುವ ಉಚಿತ ಯೋಜನೆಗಳನ್ನು ಸಂಪೂರ್ಣವಾಗಿ ಜಾರಿಗೆ ತರುವುದಕ್ಕೆ ಸಾಧ್ಯವೂ ಇಲ್ಲ. ಹಾಗೇನಾದರೂ ಆದರೆ ನಮ್ಮ ರಾಜ್ಯ ಬಹುಬೇಗ ಆರ್ಥಿಕ ಸಂಕಷ್ಟಕ್ಕೆ ಸಿಲುಕುವುದರಲ್ಲಿ ಅನುಮಾನವಿಲ್ಲ. ಹಾಗಾಗಿ, ಆರ್ಥಿಕವಾಗಿ ಬಹಳ ಹಿಂದುಳಿದಿರುವವರನ್ನು ಗುರುತಿಸಿ, ಅವರಿಗೆ ಮಾತ್ರ ಈ ಉಚಿತ ಯೋಜನೆಗಳನ್ನು ಜಾರಿಗೆ ತರಬೇಕು. ಉಳ್ಳವರನ್ನು ನಿರ್ದಾಕ್ಷಿಣ್ಯವಾಗಿ ಈ ಯೋಜನೆಗಳಿಂದ ಹೊರಗಿಡಬೇಕು. ಮೊತ್ತಮೊದಲಿಗೆ ಸರ್ಕಾರ ಮಾಡಬೇಕಾದ ಕೆಲಸ, ಅರ್ಹ ಫಲಾನುಭವಿಗಳನ್ನು ಗುರುತಿಸುವುದು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಪದಗ್ರಹಣ...

ಸೂರ್ಯ ಚಂದ್ರರ
ನಡುವೆ ಭೂಮಿ ಬಂದರೆ
ಸೂರ್ಯಗ್ರಹಣ,
ನೂತನ ಸಿಎಂ
ಡಿಸಿಎಂಗಳ ನಡುವೆ
ಮೇಡಂ ಬಂದರೆ
ಪದಗ್ರಹಣ!

ಮ.ಗು.ಬಸವಣ್ಣ
ನಂಜನಗೂಡು

ಸರ್ವರನ್ನೂ ಸಮನಾಗಿ ಕಾಣುವುದು ಧರ್ಮ

ಬೂತ್‌ವಾರು ಮತಗಟ್ಟೆಗಳಲ್ಲಿ ಅಭ್ಯರ್ಥಿಗಳು ಪಡೆದ ಮತದಾನದ ವಿವರ ಬಹಿರಂಗಪಡಿಸುವುದರಿಂದ ಮತದಾನದ ಗೋಪ್ಯತೆ ಉಳಿಸಿಕೊಳ್ಳಲು ಸಾಧ್ಯವಾಗದು ಎಂಬ ಮುರಳೀಧರ ಕಿರಣಕೆರೆ ಅವರ ಆತಂಕ (ಸಂಗತ, ಮೇ 18) ಸರಿಯಾದುದು. ಈ ಬಾರಿಯ ಚುನಾವಣೆಯಲ್ಲಿ ಪಕ್ಷವೊಂದರ ಅಭ್ಯರ್ಥಿಗೆ ನನ್ನ ಸ್ನೇಹಿತನ ಊರಿನಲ್ಲಿ ಕಡಿಮೆ ಮತಗಳು ಬಂದಿದ್ದವು. ಅದಕ್ಕೆ ಅವರು ಗ್ರಾಮಸ್ಥರನ್ನು ಉದ್ದೇಶಿಸಿ 'ನೀವು ಯಾವುದೇ ಕೆಲಸವನ್ನು ನನ್ನಿಂದ ಕೇಳಬೇಡಿ. ನಿಮ್ಮ ಬೂತ್‌ನಲ್ಲಿ ನಮಗೆ ಲೀಡ್ ಬಂದಿಲ್ಲ' ಎಂದು ಹೇಳಿದರಂತೆ!

ಹಲವೆಡೆ ಇಂತಹದ್ದು ನಡೆಯುತ್ತದೆ. ಜನಪ್ರತಿನಿಧಿಗಳು ಸರ್ವರನ್ನೂ ಒಂದೇ ದೃಷ್ಟಿಯಿಂದ ನೋಡಬೇಕು. ತಮಗೆ ಹೆಚ್ಚು ಮತ ಬಂದ ಊರಿನಲ್ಲಿ ಮಾತ್ರ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದು ಸರಿಯಲ್ಲ. ಆತ ಇಡೀ ಕ್ಷೇತ್ರದ ಜನಪ್ರತಿನಿಧಿ. ಹಾಗಾಗಿ ಇಡೀ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಬೇಕೇ ವಿನಾ 'ನನಗೆ ಮತ ಹಾಕಿಲ್ಲ, ಕೆಲಸ ಕೇಳಬೇಡಿ' ಎಂದು ಹೇಳುವ ಸಣ್ಣತನಕ್ಕೆ ಇಳಿಯಬಾರದು.

ಡಿಂಡಿಮ ಭೂಷಣ್ ಎನ್., ಮೈಸೂರು

ನಿರ್ಲಕ್ಷ್ಯ ಧೋರಣೆ ಬಯಲಿಗೆ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುದಾನ ಬಿಡುಗಡೆ ಮಾಡದಿರುವುದರಿಂದ, ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ರಾಜ್ಯದ ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಲಾಗದೇ ಸಂಕಷ್ಟಕ್ಕೆ ಸಿಲುಕಿರುವ ಕುರಿತ ವಿಶೇಷ ವರದಿ (ಪ್ರ.ವಾ., ಮೇ 18), ನಮ್ಮ ಸರ್ಕಾರಗಳ ನಿರ್ಲಕ್ಷ್ಯ ಧೋರಣೆಯನ್ನು ಬಯಲಿಗೆಳೆದಿದೆ. ಕುಂದಗೋಳ ತಾಲ್ಲೂಕಿಗೆ ಸೇರಿದ ನನ್ನ ಊರು ಯರಗುಪ್ಪಿಯಲ್ಲೂ ಇಂತಹುದೇ ಸಮಸ್ಯೆ ಇದೆ. ಇಲ್ಲಿರುವ ಆರು ಅಂಗನವಾಡಿಗಳಲ್ಲಿ ಐದಕ್ಕೆ ಕಟ್ಟಡಗಳಿವೆ. ಒಂದನೇ ವಾರ್ಡ್‌ನಲ್ಲಿರುವ ಒಂದು ಅಂಗನವಾಡಿಗೆ ಮಾತ್ರ ಮೂರ್ನಾಲ್ಕು ವರ್ಷಗಳಿಂದ ಸರಿಯಾದ ಕಟ್ಟಡವಿಲ್ಲ. ಚಿಕ್ಕ ಜಾಗದಲ್ಲಿಯೇ ಮಕ್ಕಳ ಕಲಿಕೆ, ನಿದ್ರೆ, ಅಡುಗೆ ಎಲ್ಲವೂ ಆಗಬೇಕಿದೆ. ಆಟವಾಡುವ ಸ್ಥಳವಂತೂ ಮರೀಚಿಕೆಯಾಗಿದೆ. ಇದರಿಂದ ಮಕ್ಕಳಿಗೆ, ಅಂಗನವಾಡಿಗೆ ಬರುವ ಗರ್ಭಿಣಿಯರಿಗೆ ತುಂಬಾ ಅನನುಕೂಲವಾಗುತ್ತಿದೆ. ಸ್ಥಳೀಯ ಜನಪ್ರತಿನಿಧಿಗಳು ಇತ್ತ ಗಮನಹರಿಸಲಿ.

ಬಸನಗೌಡ ಪಾಟೀಲ, ಯರಗುಪ್ಪಿ

ಶಾಸಕಾಂಗ ಪಕ್ಷದ ಸಭೆಗೆ ಬೆಲೆ ಇದೆಯೇ?

ವಿಧಾನಸಭಾ ಚುನಾವಣೆಯಲ್ಲಿ ಅತಿ ಹೆಚ್ಚು ಸ್ಥಾನ ಪಡೆದ ಪಕ್ಷದ ಶಾಸಕರು ಸಭೆ ನಡೆಸಿ, ಶಾಸಕಾಂಗ ಪಕ್ಷದ ನಾಯಕನನ್ನು ಆಯ್ಕೆ ಮಾಡುವುದು, ಆ ನಾಯಕ ಮುಖ್ಯಮಂತ್ರಿ ಆಗುವುದು ವಾಡಿಕೆ. ಆದರೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಪಡೆದು ಐದಾರು ದಿನಗಳಾದರೂ ನಾಯಕನನ್ನು ಆಯ್ಕೆ ಮಾಡಲು ಸಾಧ್ಯವಾಗದೆ, ಕಡೆಗೆ ಹೈಕಮಾಂಡ್ ಸೂಚಿಸಿದ ನಾಯಕನನ್ನೇ ಶಾಸಕಾಂಗ ಸಭೆಯಲ್ಲಿ ಆಯ್ಕೆ ಮಾಡುವಂತಾಗುವುದು ನಾಟಕೀಯ ಬೆಳವಣಿಗೆಯೇ ಸರಿ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ನಿರುದ್ಯೋಗವೇ ಚುನಾವಣಾ ವಿಷಯ


ಚುನಾವಣಾ ಕಣದಲ್ಲಿ ರಾಜ್ಯದಲ್ಲಿನ ಸಮಸ್ಯೆಗಳ ಕುರಿತು ಮತದಾರರ ಅಭಿಪ್ರಾಯ ಏನಾಗಿತ್ತು ಎಂದು ತಿಳಿಯುವುದು ಲೋಕನೀತಿ–ಸಿಎಸ್‌ಡಿಎಸ್ ಸಮೀಕ್ಷೆಯ ಒಂದು ಉದ್ದೇಶವಾಗಿತ್ತು. ಈ ಚುನಾವಣೆಯಲ್ಲಿ ಯಾವ ವಿಷಯ ಹೆಚ್ಚು ಮುಖ್ಯವಾಗುತ್ತದೆ ಎಂಬುದರ ಬಗ್ಗೆ ಜನರಲ್ಲಿ ಭಿನ್ನ ನಿಲುವಿದ್ದರೂ, ಹೆಚ್ಚು ಜನರು 'ನಿರುದ್ಯೋಗ'ದತ್ತ ಬೊಟ್ಟು ಮಾಡಿದ್ದಾರೆ. ಬೆಲೆಏರಿಕೆ, ಹಣದುಬ್ಬರದಂತಹ ವಿಷಯಗಳು ರಾಷ್ಟ್ರ ಮಟ್ಟದಲ್ಲಿ ಚರ್ಚೆಯಲ್ಲಿದ್ದರೂ, ರಾಜ್ಯ ಚುನಾವಣೆಯಲ್ಲಿ ಅವು ಅಷ್ಟಾಗಿ ಮಹತ್ವ ಪಡೆದಿಲ್ಲ ಎಂಬುದರತ್ತ ಸಮೀಕ್ಷೆ ಬೆಳಕು ಚೆಲ್ಲಿದೆ

ನಿರುದ್ಯೋಗವೇ ದೊಡ್ಡ ಸಮಸ್ಯೆ

2023ರ ಪ್ರಮುಖ ಚುನಾವಣಾ ವಿಷಯಗಳು



ಉದ್ಯೋಗ ಅವಕಾಶಗಳು ಹೆಚ್ಚಿವೆಯೇ?



(ಕಳೆದ ಐದು ವರ್ಷಗಳ ಅವಧಿಯಲ್ಲಿ, ನಿಮ್ಮ ಪ್ರದೇಶದಲ್ಲಿ ಉದ್ಯೋಗ ಅವಕಾಶವು ಹೆಚ್ಚಾಗಿದೆಯೇ ಅಥವಾ ಕಡಿಮೆಯಾಗಿದೆಯೇ?)

• ವಿಭಾ ಅತ್ರಿ ಮತ್ತು ಹಿಮಾಂಶು ಕಪೂರ್

ರಾಜ್ಯದಲ್ಲಿ 5 ವರ್ಷಗಳಲ್ಲಿ 33 ಲಕ್ಷ ಉದ್ಯೋಗ ಸೃಷ್ಟಿ ಹಾಗೂ ಕಳೆದ ಒಂದು ವರ್ಷದಲ್ಲಿ 13 ಲಕ್ಷ ಉದ್ಯೋಗ ಸೃಷ್ಟಿಸುವಲ್ಲಿ ಕರ್ನಾಟಕಕ್ಕೆ ಕೇಂದ್ರ ಸರ್ಕಾರ ದೊಡ್ಡ ಬೆಂಬಲವಾಗಿ ನಿಂತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಧಾರವಾಡದ ಐಐಟಿ ಉದ್ಘಾಟನೆ ಸಮಯದಲ್ಲಿ ಹೇಳಿದ್ದರು. ಈ ಕಾರಣದಿಂದ ಕರ್ನಾಟಕದಲ್ಲಿ ನಿರುದ್ಯೋಗ ಸಮಸ್ಯೆ ಕಡಿಮೆಯಿದೆ ಎಂದು ಅವರು ಹೇಳಿದ್ದರು. ಆದರೆ, ಲೋಕನೀತಿ–ಸಿಎಸ್‌ಡಿಎಸ್ ನಡೆಸಿದ ಚುನಾವಣೋತ್ತರ ಸಮೀಕ್ಷೆಯಲ್ಲಿ ನಿರುದ್ಯೋಗವೇ ರಾಜ್ಯದ ಅತಿದೊಡ್ಡ ಚುನಾವಣಾ ವಿಷಯವಾಗಿತ್ತು ಎಂಬುದು ತಿಳಿದುಬಂದಿದೆ.

ರಾಜ್ಯದ ಬಿಜೆಪಿ ಸರ್ಕಾರವು ಭ್ರಷ್ಟಾಚಾರ ಆರೋಪಗಳ ಬಗ್ಗೆ ಮೌನವಾಗಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಆರೋಪಿಸಿದ್ದರು. ಆದರೆ ಭ್ರಷ್ಟಾಚಾರವು ಅತಿಮುಖ್ಯ ವಿಷಯ ಎಂದು ಸಮೀಕ್ಷೆಯಲ್ಲಿ ಪ್ರತಿಕ್ರಿಯೆ ನೀಡಿದವರ ಪೈಕಿ ಶೇ 4ರಷ್ಟು ಜನರು ಹೇಳಿದ್ದಾರೆ. 2018ರಲ್ಲಿ, ನಿರುದ್ಯೋಗವು ಚುನಾವಣೆಯಲ್ಲಿ ದೊಡ್ಡ ವಿಷಯವಾಗಿರಲಿಲ್ಲ. ಅಭಿವೃದ್ಧಿ ಆಗಿಲ್ಲ ಎಂಬುದೇ ಆಗ ದೊಡ್ಡ ಸಮಸ್ಯೆ ಎನಿಸಿಕೊಂಡಿತ್ತು. ಈ ಚುನಾವಣೆಯಲ್ಲಿ ನಿರುದ್ಯೋಗವೇ ಮತದಾರರ ಮನಸ್ಸಿನಲ್ಲಿ ದೊಡ್ಡ ವಿಷಯ ಎನಿಸಿದೆ.

ಮತ ನಿರ್ಧರಿಸಿದ ನಾಲ್ಕು ಮುಖ್ಯ ವಿಷಯಗಳು

	ಕಾಂಗ್ರೆಸ್‌ಗೆ ಮತ ನೀಡಿದವರು	ಬಿಜೆಪಿಗೆ ಮತ ನೀಡಿದವರು	ಜೆಡಿಎಸ್‌ಗೆ ಮತ ನೀಡಿದವರು	ಇತರರಿಗೆ ಮತ ನೀಡಿದವರು
ನಿರುದ್ಯೋಗ	47%	30%	18%	5%
ಬಡತನ	48%	33%	12%	7%
ಅಭಿವೃದ್ಧಿಯ ಕೊರತೆ	29%	48%	15%	8%
ಬೆಲೆಏರಿಕೆ/ಹಣದುಬ್ಬರ	60%	28%	8%	4%

(ಸಮೀಕ್ಷೆಯಲ್ಲಿ ನಾಲ್ಕು ಪ್ರಮುಖ ವಿಷಯಗಳನ್ನು ನೀಡಲಾಗಿತ್ತು. ಉಳಿದ ವಿಷಯಗಳು ಇತರೆ ವರ್ಗದಲ್ಲಿದ್ದವು. ಈ ಚುನಾವಣೆಯಲ್ಲಿ ಯಾವ ಪಕ್ಷವನ್ನು ಆಯ್ಕೆ ಮಾಡಬೇಕು ಎಂದು ನೀವು ನಿರ್ಧರಿಸುವಾಗ, ನೀವು ಯಾವ ಮುಖ್ಯ ಚುನಾವಣಾ ವಿಷಯಗಳನ್ನು ಪರಿಗಣಿಸುತ್ತೀರಿ ಎಂಬ ಪ್ರಶ್ನೆ ಕೇಳಲಾಗಿತ್ತು)

ಮತ ನಿರ್ಧರಿಸಿದ ನಾಲ್ಕು ಮುಖ್ಯ ವಿಷಯಗಳು: ಈ ಚುನಾವಣೆಯಲ್ಲಿ ನಿರುದ್ಯೋಗ, ಬಡತನ, ಅಭಿವೃದ್ಧಿ ಕೊರತೆ ಹಾಗೂ ಬೆಲೆ ಏರಿಕೆ ಮುಖ್ಯ ವಿಷಯಗಳು ಎಂದು ಹೇಳಿದವರ ಪೈಕಿ, ಯಾವ ಸರ್ಕಾರವನ್ನು ಆಯ್ಕೆ ಮಾಡುತ್ತೀರಿ ಎಂದು ಪ್ರಶ್ನಿಸಿದಾಗ, ಅವರ ಮೊದಲ ಆಯ್ಕೆ ಕಾಂಗ್ರೆಸ್ ಆಗಿತ್ತು. ನಿರುದ್ಯೋಗ ಹಾಗೂ ಬಡತನ ವಿಚಾರಗಳೇ ಅತಿಮುಖ್ಯ ಎಂದು ಹೇಳಿದ ಹತ್ತರಲ್ಲಿ ಐದು ಜನರು ಕಾಂಗ್ರೆಸ್ ಪಕ್ಷದ ಪರ ಮತ ಚಲಾಯಿಸಿದ್ದಾಗಿ ಹೇಳಿದ್ದಾರೆ. ನಿರುದ್ಯೋಗ ಮುಖ್ಯ ವಿಷಯ ಎಂದವರಲ್ಲಿ ಶೇ 47ರಷ್ಟು ಹಾಗೂ ಬಡತನ ಮುಖ್ಯ ವಿಷಯ ಎಂದವರಲ್ಲಿ ಶೇ 46ರಷ್ಟು ಜನರು ಕಾಂಗ್ರೆಸ್‌ಗೆ ಮತ ಹಾಕಿದ್ದಾರೆ. 10ರಲ್ಲಿ ಮೂರು ಜನರು ಬಿಜೆಪಿಗೆ ಮತ ಹಾಕಿದ್ದಾರೆ. ಬೆಲೆ ಏರಿಕೆ ಮುಖ್ಯ ಎಂದು ಹೇಳಿದವರಲ್ಲಿ, ಶೇ 60ಕ್ಕೂ ಹೆಚ್ಚು ಮಂದಿ ಕಾಂಗ್ರೆಸ್‌ಗೆ, ಶೇ 30ರಷ್ಟು ಜನರು ಬಿಜೆಪಿಗೆ ಆದ್ಯತೆ ನೀಡಿದ್ದಾರೆ.

- ಹತ್ತರಲ್ಲಿ ಮೂರು ಜನರು ನಿರುದ್ಯೋಗವೇ ದೊಡ್ಡ ವಿಷಯ ಎಂದು ಹೇಳಿದ್ದಾರೆ (ಶೇ 30)
- ಬಡತನವು ಎರಡನೇ ದೊಡ್ಡ ಚುನಾವಣಾ ವಿಷಯವಾಗಿದೆ. ಶೇ 21ರಷ್ಟು ಜನರು ಬಡತನದತ್ತ ಬೊಟ್ಟು ಮಾಡಿದ್ದಾರೆ
- ಬೆಲೆ ಏರಿಕೆಯು ಶೇ 6ರಷ್ಟು ಜನರಿಗೆ ದೊಡ್ಡ ವಿಷಯವಾಗಿದೆ
- ಅಭಿವೃದ್ಧಿ ಆಗಿಲ್ಲ ಎಂಬುದೇ ದೊಡ್ಡ ವಿಷಯ ಎಂದು ಶೇ 15ರಷ್ಟು ಜನರು ಅಭಿಪ್ರಾಯಪಟ್ಟಿದ್ದಾರೆ
- ಕಳಪೆ ಗುಣಮಟ್ಟದ ಶಿಕ್ಷಣ ಚುನಾವಣಾ ವಿಷಯ ಎಂದು ಹತ್ತರಲ್ಲಿ ಒಬ್ಬರು ಅಭಿಪ್ರಾಯಪಟ್ಟಿದ್ದಾರೆ

ಆದರೆ, ಸರಿಯಾದ ಅಭಿವೃದ್ಧಿ ಆಗಿಲ್ಲ ಎಂದು ಹೇಳಿದ ಶೇ 15ರಷ್ಟು ಜನರಲ್ಲಿ ಅರ್ಧದಷ್ಟು ಜನರು ತಾವು ಬಿಜೆಪಿಗೆ ಮತ ಹಾಕುತ್ತೇವೆ ಎಂದಿದ್ದಾರೆ. ಅವರಲ್ಲಿ ಕಾಂಗ್ರೆಸ್‌ಗೆ ಶೇ 29ರಷ್ಟು ಜನರು ಹಾಗೂ ಜೆಡಿಎಸ್‌ಗೆ ಶೇ 15ರಷ್ಟು ಜನರು ಆದ್ಯತೆ ನೀಡಿದ್ದಾರೆ. ನಿರುದ್ಯೋಗ ಹಾಗೂ ಬಡತನ ಸಮಸ್ಯೆಗಳನ್ನು ನಿಭಾಯಿಸುವಲ್ಲಿ ಬಿಜೆಪಿ ಸರ್ಕಾರ ಎಡವಿರುವುದೇ ಕಾಂಗ್ರೆಸ್ ಗೆಲುವಿಗೆ ಭಾಗಶಃ ನೆರವಾಗಿದೆ ಎಂದು ಸಮೀಕ್ಷೆ ಅಭಿಪ್ರಾಯಪಟ್ಟಿದೆ.

ಲೇಖಕರು: ಲೋಕನೀತಿ–ಸಿಎಸ್‌ಡಿಎಸ್‌ನಲ್ಲಿ ಸಂಶೋಧಕರು


ಮೀಸಲಾತಿ ಬದಲಾವಣೆ ಪರಿಣಾಮವೆಷ್ಟು?

• ಡಾ. ವೀಣಾ ದೇವಿ, ಡಾ. ನಾಗೇಶ್ ಕೆ.ಎಲ್.

ರಾಜ್ಯದ ವಿಧಾನಸಭಾ ಚುನಾವಣೆಗೆ ಸಂಬಂಧಿಸಿ ಲೋಕನೀತಿ–ಸಿಎಸ್‌ಡಿಎಸ್ ನಡೆಸಿದ ಸಮೀಕ್ಷೆಯಲ್ಲಿ, ಬಿಜೆಪಿ ಸರ್ಕಾರದ ಮೀಸಲಾತಿ ನೀತಿಯ ಬಗ್ಗೆಯೂ ಪ್ರಶ್ನೆಗಳನ್ನು ಕೇಳಲಾಗಿತ್ತು. ಸರ್ಕಾರದ ಮೀಸಲಾತಿ ನೀತಿಗೆ ಮತದಾರರು ಹೇಗೆ ಪ್ರತಿಕ್ರಿಯಿಸುತ್ತಿದ್ದಾರೆ ಎಂಬುದನ್ನು ಗ್ರಹಿಸುವುದೇ ಈ ಪ್ರಶ್ನೆಯ ಹಿಂದಿನ ಉದ್ದೇಶವಾಗಿತ್ತು. ಆದರೆ ಸಮೀಕ್ಷೆಯಲ್ಲಿ ಭಾಗಿಯಾಗಿದ್ದವರಲ್ಲಿ ಮೂರನೇ ಒಂದರಷ್ಟು ಜನರು ಮಾತ್ರ ಬಿಜೆಪಿ ಸರ್ಕಾರದ ಮೀಸಲಾತಿಯ ಬಗ್ಗೆ ಕೇಳಿದ್ದೇವೆ ಎಂದು ಉತ್ತರ ನೀಡಿದ್ದರು.

ಮೀಸಲಾತಿಯ ಬಗ್ಗೆ ಕೇಳಿದ್ದೇವೆ ಎಂದವರಿಗೆ ಪೂರಕ ಪ್ರಶ್ನೆಗಳನ್ನು ಕೇಳಲಾಗಿತ್ತು. ಲಿಂಗಾಯತರು ಮತ್ತು ಒಕ್ಕಲಿಗರಿಗೆ ಪ್ರತ್ಯೇಕ ಮೀಸಲಾತಿ ಹಾಗೂ ಪರಿಶಿಷ್ಟ ಜಾತಿ– ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಹೆಚ್ಚಳವನ್ನು ಮೂರನೇ ಒಂದರಷ್ಟು ಜನರು ಸಂಪೂರ್ಣವಾಗಿ ಬೆಂಬಲಿಸುತ್ತೇವೆ ಮತ್ತು ಮೂರನೇ ಒಂದರಷ್ಟು ಜನರು ಸ್ವಲ್ಪ ಬೆಂಬಲಿಸುತ್ತೇವೆ ಎಂದು ಹೇಳಿದ್ದರು. ಮುಸ್ಲಿಮರ ಮೀಸಲಾತಿ ರದ್ದತಿಯನ್ನು ಬೆಂಬಲಿಸುವವರು ಮತ್ತು ವಿರೋಧಿಸುವವರ ಪ್ರಮಾಣ ಸರಿಸುಮಾರು ಒಂದೇ ರೀತಿ ಇದೆ.

ಹೊಸ ಮೀಸಲಾತಿ ನೀತಿಯ ಬಗ್ಗೆ ಅರಿವು



ಮೀಸಲಾತಿ ಬದಲಾವಣೆಗಳಿಗೆ ಮತದಾರರ ಬೆಂಬಲದ ಸ್ವರೂಪ

	ಸಂಪೂರ್ಣ ಬೆಂಬಲ	ಸ್ವಲ್ಪ ಬೆಂಬಲ	ಸ್ವಲ್ಪ ವಿರೋಧ	ಸಂಪೂರ್ಣ ವಿರೋಧ	ಪ್ರತಿಕ್ರಿಯೆ ನೀಡದವರು
ಲಿಂಗಾಯತರಿಗೆ ಪ್ರತ್ಯೇಕ ಮೀಸಲಾತಿ	28%	45%	12%	12%	3%
ಒಕ್ಕಲಿಗರಿಗೆ ಪ್ರತ್ಯೇಕ ಮೀಸಲಾತಿ	27%	37%	20%	13%	3%
ಪರಿಶಿಷ್ಟ ಜಾತಿಗಳ ಮೀಸಲಾತಿ ಏರಿಕೆ	27%	41%	17%	13%	2%
ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಏರಿಕೆ	26%	41%	18%	12%	3%
ಮುಸ್ಲಿಮರ ಮೀಸಲಾತಿ ರದ್ದು	24%	25%	23%	24%	4%

ಬಿಜೆಪಿ ಸರ್ಕಾರದ ಮೀಸಲಾತಿ ನೀತಿಯನ್ನು ಬೆಂಬಲಿಸಿದವರು, ಮತದಾನದ ವೇಳೆ ಬಿಜೆಪಿಗೇ ಮತ ಹಾಕಲು ನಿರ್ಧರಿಸಿರಬಹುದು. ಅದರಂತೆಯೇ ಮೀಸಲಾತಿ ನೀತಿಯನ್ನು ವಿರೋಧಿಸುವವರು, ಕಾಂಗ್ರೆಸ್‌ಗೆ ಮತ ನೀಡಲು ನಿರ್ಧರಿಸಬಹುದು. ಬಿಜೆಪಿ ಸರ್ಕಾರದ ಮೀಸಲಾತಿ ನೀತಿಯ ಬಗ್ಗೆ ಗೊತ್ತಿದ್ದವರ ಪ್ರಮಾಣವೇ ಕಡಿಮೆ ಇತ್ತು. ಅಂತಹವರಲ್ಲಿ ಅರ್ಧದಷ್ಟು ಜನರು ಬಿಜೆಪಿಯನ್ನು ಬೆಂಬಲಿಸಿರುವ ಸಾಧ್ಯತೆ ಇದೆ.

ಲೇಖಕರು: ಡಾ. ವೀಣಾ ದೇವಿ ಅವರು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್‌ನ ರಾಜ್ಯಶಾಸ್ತ್ರ ವಿಭಾಗದಲ್ಲಿ ಪ್ರೊಫೆಸರ್, ಡಾ.ನಾಗೇಶ್ ಕೆ.ಎಲ್. ಅವರು ಉಪನ್ಯಾಸಕ

ಸಮೀಕ್ಷೆ ನಡೆದಿದ್ದು ಹೀಗೆ...

- ಲೋಕನೀತಿ–ಸಿಎಸ್‌ಡಿಎಸ್‌ನಿಂದ 2023ರ ಕರ್ನಾಟಕ ವಿಧಾನಸಭಾ ಚುನಾವಣೆಯ ಸಮೀಕ್ಷೆ
- ಮೇ 10 ಹಾಗೂ ಮೇ 12ರಂದು ಆಯ್ದ 15 ವಿಧಾನಸಭಾ ಕ್ಷೇತ್ರಗಳ 60 ಮತಗಟ್ಟೆಗಳ 1,650 ಮತದಾರರ ಸಂದರ್ಶನ
- ರಾಜ್ಯದ ಕಾಲೇಜು ವಿದ್ಯಾರ್ಥಿಗಳಿಂದ ಮತದಾರರ ಮನೆಗೆ ಭೇಟಿ; ಮಾಹಿತಿ ಸಂಗ್ರಹ

49.5% ಸಮೀಕ್ಷೆಯಲ್ಲಿ ಭಾಗಿಯಾದವರಲ್ಲಿ ಮಹಿಳೆಯರ ಪ್ರಮಾಣ (ರಾಜ್ಯದ ಜನಸಂಖ್ಯೆಯಲ್ಲಿ ಮಹಿಳೆಯರ ಪ್ರಮಾಣ ಶೇ 49.3)

13.9% ಸಮೀಕ್ಷೆಯಲ್ಲಿ ಭಾಗಿಯಾದವರಲ್ಲಿ ಮುಸ್ಲಿಮರ ಪ್ರಮಾಣ (ರಾಜ್ಯದ ಜನಸಂಖ್ಯೆಯಲ್ಲಿ ಮುಸ್ಲಿಮರ ಪ್ರಮಾಣ ಶೇ 12.9)

40.7% ಸಮೀಕ್ಷೆಯಲ್ಲಿ ಭಾಗಿಯಾದವರಲ್ಲಿ ನಗರವಾಸಿಗಳ ಪ್ರಮಾಣ (ರಾಜ್ಯದ ಜನಸಂಖ್ಯೆಯಲ್ಲಿ ನಗರವಾಸಿಗಳ ಪ್ರಮಾಣ ಶೇ 38.7)

17% ಸಮೀಕ್ಷೆಯಲ್ಲಿ ಭಾಗಿಯಾದವರಲ್ಲಿ ಎಸ್‌ಸಿ ಸಮುದಾಯದ ಪ್ರಮಾಣ (ರಾಜ್ಯದ ಜನಸಂಖ್ಯೆಯಲ್ಲಿ ಎಸ್‌ಸಿ ಸಮುದಾಯದವರ ಪ್ರಮಾಣ ಶೇ 17.2)

12.7% ಸಮೀಕ್ಷೆಯಲ್ಲಿ ಭಾಗಿಯಾದವರಲ್ಲಿ ಎಸ್‌ಟಿ ಸಮುದಾಯದವರ ಪ್ರಮಾಣ (ರಾಜ್ಯದ ಜನಸಂಖ್ಯೆಯಲ್ಲಿ ಎಸ್‌ಟಿ ಸಮುದಾಯದವರ ಪ್ರಮಾಣ ಶೇ 6.9)

ಕೆಟ್ಟುನಿಂತ 'ಡಬಲ್ ಎಂಜಿನ್'


• ದೇವೇಶ್ ಕುಮಾರ್, ಪ್ರಿಯಾಂಕಾ ಮಿತ್ತಲ್

ಬಿಜೆಪಿ ಹುಟ್ಟುಹಾಕಿದ 'ಡಬಲ್ ಎಂಜಿನ್' ಪರಿಕಲ್ಪನೆಯು ಕರ್ನಾಟಕದ ಮತದಾರರ ಮನವೊಲಿಸುವಲ್ಲಿ ವಿಫಲವಾಗಿದೆ. ಕೇಂದ್ರದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದು, ರಾಜ್ಯದಲ್ಲಿಯೂ ಅದೇ ಸರ್ಕಾರವನ್ನು ಆಯ್ಕೆ ಮಾಡಿದರೆ, ಅಭಿವೃದ್ಧಿಗೆ ವೇಗ ಸಿಗುತ್ತದೆ ಹಾಗೂ ಕೇಂದ್ರ–ರಾಜ್ಯಗಳ ನಡುವಣ ಸಂವಹನಕ್ಕೆ ಅಡೆತಡೆ ಇರುವುದಿಲ್ಲ ಎಂದು ಬಿಜೆಪಿ ಮನವರಿಕೆ ಮಾಡಿಕೊಡಲು ಯತ್ನಿಸಿತ್ತು. 'ಡಬಲ್ ಎಂಜಿನ್' ಮಾಡೆಲ್‌ಗೆ ಹೆಚ್ಚು ಪ್ರಾಶಸ್ತ್ಯ ನೀಡಿ ಚುನಾವಣಾ ಪ್ರಚಾರದಲ್ಲಿ ಬಿಜೆಪಿ ತೊಡಗಿತ್ತು. ಆದರೆ ಮತದಾರ ಇದಕ್ಕೆ ಮಣೆ ಹಾಕಿಲ್ಲ. ಈ ಮಾದರಿಯು ಚೆನ್ನಾಗಿದೆ ಎಂಬ ಭಾವನೆಯು ಬಿಜೆಪಿ ಬೆಂಬಲಿಗರಿಗೆ ಮಾತ್ರ ಸೀಮಿತವಾಗಿತ್ತು.

ಶೇ 50ಕ್ಕಿಂತ ಹೆಚ್ಚು ಜನರು ಡಬಲ್ ಎಂಜಿನ್ ಮಾದರಿಯನ್ನು ಬೆಂಬಲಿಸುವುದಾಗಿ ಹೇಳಿದ್ದರೂ ಅದು ಫಲಿತಾಂಶದಲ್ಲಿ ಪ್ರತಿಫಲನವಾಗಿಲ್ಲ. ಐದನೇ ಒಂದರಷ್ಟು ಜನರು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ ಎಂದು ತಿಳಿಸಿದ್ದಾರೆ. ಬಿಜೆಪಿಯನ್ನು ಬೆಂಬಲಿಸುವವರ ಪೈಕಿ, ಐದನೇ ನಾಲ್ಕರಷ್ಟು ಜನರು ಈ ಮಾದರಿಯ ಪರವಾಗಿದ್ದಾರೆ. ಬಿಜೆಪಿಯೇತರ ಮತದಾರರನ್ನು ಒಪ್ಪಿಸುವಲ್ಲಿ ಇದು ವಿಫಲವಾಗಿದೆ. ಕಾಂಗ್ರೆಸ್‌ನ ಶೇ 57ರಷ್ಟು ಹಾಗೂ ಜೆಡಿಎಸ್‌ನ ಶೇ 47ರಷ್ಟು ಮತದಾರರು ಡಬಲ್ ಎಂಜಿನ್‌ಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ಲೇಖಕರು: ಲೋಕನೀತಿ–ಸಿಎಸ್‌ಡಿಎಸ್‌ನಲ್ಲಿ ಸಂಶೋಧಕರು

ಕೇಂದ್ರ, ರಾಜ್ಯದಲ್ಲಿ ಒಂದೇ ಪಕ್ಷದ ಸರ್ಕಾರವಿರಬೇಕೇ?



ಡಬಲ್ ಎಂಜಿನ್ ಸರ್ಕಾರಕ್ಕೆ ವಿವಿಧ ಪಕ್ಷಗಳ ಮತದಾರರ ಬೆಂಬಲ

	ಸಂಪೂರ್ಣ ಒಪ್ಪಿಗೆ	ಒಪ್ಪಿಗೆ	ಒಪ್ಪುವುದಿಲ್ಲ	ಒಪ್ಪುವುದೇ ಇಲ್ಲ	ಪ್ರತಿಕ್ರಿಯೆ ನೀಡದವರು
ಕಾಂಗ್ರೆಸ್	11%	30%	28%	29%	2%
ಬಿಜೆಪಿ	48%	33%	13%	5%	1%
ಜೆಡಿಎಸ್	13%	40%	20%	27%	
ಇತರೆ ಪಕ್ಷಗಳು	29%	20%	14%	31%	6%

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಪಡೆದಿದ್ದಕ್ಕೆ ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ ಅವರು ಶುಭ ಕೋರಿದ್ದಾರೆ ಎಂದು ಹೇಳಲಾಗುವ ಟ್ವೀಟ್‌ನ ಸ್ಕ್ರೀನ್‌ಶಾಟ್ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. 'ಕಾಂಗ್ರೆಸ್ ಅನ್ನು ಆರಿಸಿದ ಕರ್ನಾಟಕದ ಜನರಿಗೆ ಹೃದಯಪೂರ್ವಕ ಧನ್ಯವಾದಗಳು. ಕಾಂಗ್ರೆಸ್ ಹಾಗೂ ನಮ್ಮ ಎಸ್‌ಡಿಪಿಐ ಜೊತೆಗೂಡಿ ಭಾರತದಲ್ಲಿ ಇಸ್ಲಾಂ ಸದೃಢಗೊಳಿಸಲು ಕೆಲಸ ಮಾಡಲಿವೆ ಹಾಗೂ ಕರ್ನಾಟಕದ ಸಾರ್ವಭೌಮತೆಯನ್ನು ಕಾಪಾಡಲಿವೆ ಎಂಬ ಆಶಾಭಾವ ಇದೆ' ಎಂದು ಮೇ 13ರಂದು ಷರೀಫ್ ಟ್ವೀಟ್ ಮಾಡಿದ್ದಾರೆ ಎಂದು ಹೇಳಲಾಗಿದೆ. ಈ ಸ್ಕ್ರೀನ್‌ಶಾಟ್ ಅನ್ನು ಸಾವಿರಾರು ಜನರು ಹಂಚಿಕೊಂಡಿದ್ದಾರೆ. ಆದರೆ ಇದು ಸುಳ್ಳು ಸುದ್ದಿ.



ಶಹಬಾಜ್ ಷರೀಫ್ ಅವರು ಮೇ 13ರಂದು ಮೂರು ಟ್ವೀಟ್‌ಗಳನ್ನು ಮಾಡಿದ್ದು, ಅವುಗಳಲ್ಲಿ ಕರ್ನಾಟಕದ ಚುನಾವಣೆ ಬಗ್ಗೆ ಯಾವುದೇ ಉಲ್ಲೇಖ ಇಲ್ಲ ಎಂದು 'ಆಲ್ಟ್ ನ್ಯೂಸ್' ವರದಿ ಮಾಡಿದೆ. ಅವರ ಹೆಸರಿನಲ್ಲಿ ಸೃಷ್ಟಿಸಲಾಗಿರುವ ನಕಲಿ ಟ್ವೀಟ್‌ನ ಸ್ಕ್ರೀನ್‌ಶಾಟ್ ಅನ್ನು, @BHKtweets ಹೆಸರಿನ ಟ್ವಿಟರ್ ಖಾತೆಯಲ್ಲಿ ಮೇ 13ರ ಸಂಜೆ 4 ಗಂಟೆಗೆ ಅಪ್‌ಲೋಡ್ ಮಾಡಲಾಗಿತ್ತು. ರಾತ್ರಿ 10 ಗಂಟೆಯ ವೇಳೆಗೆ ಇದನ್ನು ತೆಗೆದುಹಾಕಲಾಗಿತ್ತು. ಷರೀಫ್ ಕುರಿತಂತೆ ಹಲವು ನಕಲಿ ಟ್ವೀಟ್‌ಗಳನ್ನು ಇದೇ ಖಾತೆಯಲ್ಲಿ ಈ ಹಿಂದೆ ಪ್ರಕಟಿಸಲಾಗಿತ್ತು. ಷರೀಫ್ ಅವರು ಶುಭಕೋರಿದ್ದು ನಿಜ ಎಂದು ಭಾವಿಸಿದ ಸಾಮಾಜಿಕ ಜಾಲತಾಣ ಬಳಕೆದಾರರು ಸ್ಕ್ರೀನ್‌ಶಾಟ್ ಅನ್ನು ಹಂಚಿಕೊಳ್ಳುತ್ತಿದ್ದಾರೆ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಪರಮಶಾಂತಿಯ ನೆಲೆ

ಪರಿಪೂರ್ಣಸುಖವನೆಳಸುವನು ತನ್ನೊಳಗಡೆಗೆ|
ತಿರುಗಿಸಲಿ ತನ್ನ ದೃಷ್ಟಿಯನು ನಿರ್ಮಲದಿಂ||
ನಿರತಿಶಯ ಸುಖವಲ್ಲಿ, ವಿಶ್ವಾತ್ಮವೀಕ್ಷೆಯಲಿ|
ಪರಸತ್ತ್ವ ಶಾಂತಿಯಲಿ - ಮಂಕುತಿಮ್ಮ||887||

ಪದ-ಅರ್ಥ: ಪರಿಪೂರ್ಣಸುಖವನೆಳಸುವನು = ಪರಿಪೂರ್ಣ + ಸುಖವನು + ಎಳಸುವನು (ಅಪೇಕ್ಷಿಸುವವನು), ತನ್ನೊಳಗಡೆಗೆ = ತನ್ನ + ಒಳಗಡೆಗೆ, ನಿರ್ಮಲದಿಂ = ನಿರ್ಮಲವಾಗಿ, ನಿರತಿಶಯ = ಅಲೌಕಿಕ, ವಿಶ್ವಾತ್ಮವೀಕ್ಷೆಯಲಿ = ವಿಶ್ವಾತ್ಮ + ವೀಕ್ಷೆಯಲಿ (ನೋಡುವಿಕೆಯಲ್ಲಿ).

ವಾಚ್ಯಾರ್ಥ: ಪರಿಪೂರ್ಣ ಸುಖವನ್ನು ಬಯಸುವವನು ತನ್ನ ನಿರ್ಮಲವಾದ ದೃಷ್ಟಿಯನ್ನು ಒಳಗಡೆಗೆ ತಿರುಗಿಸಬೇಕು. ಅಲ್ಲಿ ವಿಶ್ವಾತ್ಮದ ನೋಡುವಿಕೆಯಲ್ಲಿ, ಪರಸತ್ವದ ಶಾಂತಿಯಲ್ಲಿ ಅಲೌಕಿಕವಾದ ಸುಖವಿದೆ.

ವಿವರಣೆ: ಒಬ್ಬ ಮನುಷ್ಯ ರಾತ್ರಿಯಿಡೀ ಪ್ರಾರ್ಥಿಸುತ್ತಿದ್ದ. ಬೆಳಕು ತನ್ನ ಕೋಣೆಯಲ್ಲಿ ಬರಲಿ ಎಂಬುದು ಪ್ರಾರ್ಥನೆ. ಆಗ ಗುರು ಹೇಳುತ್ತಾನೆ, 'ಯಾಕೆ ರಾತ್ರಿಯಲ್ಲಿ ಬೆಳಕಿಗೆ ಪ್ರಾರ್ಥಿಸುತ್ತೀ? ಪ್ರಾರ್ಥನೆ ನಿಲ್ಲಿಸು. ಕಿಟಕಿಯ ಪರದೆಗಳನ್ನು ಸರಿಸು, ಕಿಟಕಿಯ ಬಾಗಿಲುಗಳನ್ನು ತೆರೆ. ಸುಮ್ಮನೆ ಕುಳಿತುಕೋ. ಸೂರ್ಯ ತಾನೇ ತಾನಾಗಿ ಬಂದು ಕೋಣೆಯಲ್ಲಿ ಬೆಳಕು ಚೆಲ್ಲುತ್ತಾನೆ'. ಹಾಗೆಯೇ ಆಯಿತು. ಅಂತೆಯೇ ಭಗವಂತನ ಕೃಪೆ ದೊರಕಲಿ ಎಂಬ ಪ್ರಾರ್ಥನೆ ಬೇಕಿಲ್ಲ. ಮನಸ್ಸನ್ನು ಸ್ವಚ್ಛಗೊಳಿಸಬೇಕು, ಹೃದಯದ ಬಾಗಿಲುಗಳನ್ನು ವಿಶಾಲವಾಗಿ ತೆರೆಯಬೇಕು. ಆಗ ಮನಸ್ಸಿನ ಮಧ್ಯದಲ್ಲಿ ಭಗವಂತನ ಅವತರಣವಾಗುತ್ತದೆ. ಇದೇ ಅನಿಕೇತನ ದೃಷ್ಟಿ.

ಗುಡಿ ಕಟ್ಟುತ್ತೇವೆ. ಅದರೊಳಗೆ ವಿಗ್ರಹವನ್ನು ಪ್ರತಿಷ್ಠಾಪಿಸುತ್ತೇವೆ. ಅಲ್ಲಿ ಭಗವಂತನಿದ್ದಾನೆಂದು ಭಾವಿಸುತ್ತೇವೆ. ಭಗವಂತನನ್ನು ಒಂದು ಕಲ್ಲಿನ ಕಟ್ಟಡದಲ್ಲಿ ಬಂಧಿಸುವುದು ಸಾಧ್ಯವೆ? ಬೊಗಸೆಯಲ್ಲಿ ಸಮುದ್ರ ಹಿಡಿಯುವದಾದೀತೇ? ವಿಗ್ರಹದಲ್ಲಿ ದೇವರನ್ನು ಕಾಣಬಹುದು. ಆದರೆ ಅಲ್ಲಿ ಮಾತ್ರ ಇದ್ದಾನೆಂಬುದು ಸಮಂಜಸವಲ್ಲ.

ಅದಕ್ಕೇ ಕಗ್ಗ ತಿಳಿ ಹೇಳುತ್ತದೆ, ಪರಿಪೂರ್ಣ ಆನಂದ ಬೇಕು ಎನ್ನುವವನು ಹೊರಪ್ರಪಂಚ ವೀಕ್ಷಣೆಯಿಂದ ಮನಸ್ಸನ್ನು ಒಳಗಡೆ ತಿರುಗಿಸಲಿ. ಯಾಕೆಂದರೆ, ಹೊರಗಿನ ಪ್ರಪಂಚದಲ್ಲಿ ಎಲ್ಲವೂ ಸೊರಗಿ, ಕರಗಿ ವ್ಯಯವಾಗಿ ಹೋಗುತ್ತವೆ. ದೇಹ, ಅಧಿಕಾರ, ಸಂಪತ್ತು, ಸಂಬಂಧಿಕರು, ಸ್ನೇಹಿತರು ಎಲ್ಲವೂ ಮೋಡದಂತೆ ಚದುರಿ ಹೋಗುತ್ತವೆ. ಆದರೆ ಎಂದಿಗೂ ಚದುರದ, ಕರಗದ ಅವ್ಯಯನಾದ ಆತ್ಮನಿದ್ದಾನೆ. ಅವನನ್ನು ಯಾವ ಹೆಸರಿನಿಂದಾದರೂ ಕರೆಯಬಹುದು – ದೇವರು, ಪರಮಾತ್ಮ, ಪರವಸ್ತು, ಬ್ರಹ್ಮ ಇತ್ಯಾದಿ. ಅದು ಇರುವುದು ಹೊರಗಲ್ಲ, ನನ್ನೊಳಗೆಯೇ ಅದು ಇದೆ. ವ್ಯಯವಾಗುವುದನ್ನು ನೋಡುತ್ತ ಅವ್ಯಯವನ್ನು ಧ್ಯಾನಿಸುವುದು ಯೋಗ. ಅದೇ ಜ್ಞಾನ ಮಾರ್ಗ.

ಆ ಅವ್ಯಯವನ್ನು ನಮ್ಮ ಹೃದಯದೊಳಗೇ ಧ್ಯಾನಿಸಲು ಮನಸ್ಸನ್ನು ಅಂತರ್ಮುಖಿಯನ್ನಾಗಿಸಬೇಕು. ಅದಕ್ಕೆ ಮನಸ್ಸು ನಿರ್ಮಲವಾಗಬೇಕು. ಆಗ ನಮಗೆ ದಕ್ಕುವುದು, ಆ ಪರವಸ್ತುವಿನ ನೋಟ. ಅದೊಂದು ಅಲೌಕಿಕವಾದ ಸುಖ. ಪ್ರಪಂಚದಲ್ಲಿ ದೊರಕುವ ಯಾವುದೇ ಸಂತೋಷಕ್ಕಿಂತ ಮಿಗಿಲಾದದ್ದು. ಆ ಪರಸತ್ವದ ಅನುಸಂಧಾನದಲ್ಲಿ ದೊರೆಯುವುದು ಪರಮಶಾಂತಿ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಮೇ 19, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಕೃಷ್ಣ ಅಮಾವಾಸ್ಯೆ ಗಂ. 21-23 **ನಕ್ಷತ್ರ:** ಭರಣಿ ಗಂ. 07-30, **ಯೋಗ:** ಶೋಭನ ಗಂ. 18-16
ಕರಣ: ಚತುಷ್ಪಾದ ಗಂ. 09-30, ವೃಷಭ ಮಾಸದ 04 ನೇ ದಿನ, **ಮಳೆನಕ್ಷತ್ರ:** ಕೃತ್ತಿಕ 3
ರಾಹುಕಾಲ: ಬೆಳಿಗ್ಗೆ 10-30 – 12-00
ಸೂರ್ಯೋದಯ: 06-07 **ಸೂರ್ಯಾಸ್ತ:** 06-47
ಮುಸ್ಲಿಂ ದಿನಾಂಕ: 28 ಶವ್ವಾಲ್ **ದಿನ ವಿಶೇಷ:** ವಟ ಸಾವಿತ್ರಿ ವ್ರತ (ಅಮಾವಾಸ್ಯೆ ಪಕ್ಷ)
ಅದೃಷ್ಟ ಸಂಖ್ಯೆ: 4, 12

ಮೇಷ: ಪುಸ್ತಕಗಳನ್ನು ಓದುವುದರಿಂದಾಗಿ ಮನಸ್ಸು ಶೂನ್ಯದ ಕಡೆಗೆ ವಾಲುತ್ತಿರುವಂತೆ ಭಾಸವಾಗುತ್ತದೆ. ಸಾಮ್ಯತೆಗಳನ್ನೇ ಹುಡುಕಿ ಗೆಳೆತನ ಮಾಡಿದರೂ ಗೆಳೆತನದಲ್ಲಿ ಭಿನ್ನಾಭಿಪ್ರಾಯಗಳೇ ಹೆಚ್ಚಾಗಿ ಕಾಣುವುದು.

ವೃಷಭ: ಎಷ್ಟೇ ದೊಡ್ಡ ಸಮಾರಂಭದಲ್ಲಿ ನೀವು ಭಾಗವಹಿಸುವುದಾದರೂ ನೋಡುವವರ ಕಣ್ಣಿಗೆ ಹೆಚ್ಚೆಂದು ಕಾಣುವಂಥ ನಿಮ್ಮ ನಡವಳಿಕೆಗಿಂತ ನಿಮ್ಮ ಸರಳತೆಗೆ ಸ್ಥಾನಮಾನ ದೊರಕುತ್ತದೆ.

ಮಿಥುನ: ಸುಖ-ದುಃಖದ ಸಮ ಫಲವನ್ನು ಅನುಭವಿಸುವಂತಾಗುವುದು. ನಿಮ್ಮ ಸಹೋದರರ ನಡವಳಿಕೆ ಅನೇಕ ಬಗೆಯ ಚಿಂತೆಗೆ ಹಾಗೂ ಅನುಮಾನಗಳಿಗೆ ಕಾರಣವಾದೀತು. ವ್ಯವಹಾರ ನಿಮಿತ್ತ ವಿದೇಶಯಾನದ ಅವಕಾಶ ಸಿಗಲಿದೆ.

ಕರ್ಕಾಟಕ: ವ್ಯಾಪಾರದಲ್ಲಿ ಅನಿರೀಕ್ಷಿತ ಬದಲಾವಣೆಯನ್ನು ಕಾಣುವ ಸಾಧ್ಯತೆ. ಅಕ್ಕ–ಪಕ್ಕದವರಲ್ಲಿ ಅನುಕಂಪ ಮತ್ತು ಸಹಾಯ ತೋರುವಿರಿ. ಆತ್ಮವಿಶ್ವಾಸ ಹೆಚ್ಚಿಸುವ ಕೆಲಸಗಳಲ್ಲಿ ತೊಡಗುವಿರಿ.

ಸಿಂಹ: ಸಣ್ಣ ಕೈಗಾರಿಕೋದ್ಯಮಿಗಳಿಗೆ ರಫ್ತಿನಿಂದ ಹೇರಳ ಲಾಭ ಪಡೆಯಬಹುದು. ಹೊಸ ಕೆಲಸಗಳ ಬಗ್ಗೆ ಯೋಜನೆಗಳನ್ನು ರೂಪಿಸಿಕೊಳ್ಳುವಿರಿ. ಮಕ್ಕಳೊಂದಿಗೆ ವಿದೇಶ ಪ್ರಯಾಣ ಮಾಡುವ ಸಂದರ್ಭ ಬರಲಿದೆ.

ಕನ್ಯಾ: ನಿಮ್ಮ ಯಶಸ್ಸಿಗೆ ಏಕಾಗ್ರತೆ ಮತ್ತು ಪ್ರಯತ್ನ ಬಹಳ ಮುಖ್ಯವಾಗುತ್ತದೆ. ಅದರಿಂದಾಗಿ ಎಲ್ಲ ಸವಾಲುಗಳನ್ನು ಎದುರಿಸುವ ಆತ್ಮಸ್ಥೈರ್ಯ ನಿಮಗೆ ಬರುವುದು. ರಾಸಾಯನಿಕ ವಸ್ತುಗಳ ಮಾರಾಟಗಾರರಿಗೆ ಲಾಭದಲ್ಲಿ ಏರಿಕೆ.

ತುಲಾ: ಅಧಿಕಾರಿ ವರ್ಗದವರಲ್ಲಿ ಹಾಗೂ ಸಹಚರರಲ್ಲಿ ವೈಮನಸ್ಸನ್ನು ದೂರಪಡಿಸಿಕೊಂಡು ಉತ್ತಮ ಕೆಲಸಗಳನ್ನು ನಿರ್ವಹಿಸುವುದರಲ್ಲಿ ತಲೆತಗ್ಗಿಸುವಂತಾಗಬಹುದು.

ವೃಶ್ಚಿಕ: ಇಂಜಿನಿಯರಿಂಗ್ ಕ್ಷೇತ್ರದವರಿಗೆ ಹೆಚ್ಚಿನ ಅವಕಾಶಗಳ ಜೊತೆಯಲ್ಲಿ ಬಯಸಿದ ಜಾಗ ಹಾಗೂ ಹೆಸರಾಂತ ಕಂಪೆನಿಯಲ್ಲಿ ಕೆಲಸ ಸಿಗುವ ಸಾಧ್ಯತೆ. ಅಧಿಕ ಸುತ್ತಾಟದಿಂದ ಆಯಾಸವಾಗುವುದು.

ಧನು: ನಿಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಂಡು ಪರಿಶ್ರಮದಿಂದ ಪ್ರಗತಿಯ ಹಾದಿಗೆ ಹೋಗುವಿರಿ. ರಕ್ತದೊತ್ತಡವನ್ನು ನಿಯಂತ್ರಣದಲ್ಲಿರಿಸಲು ಯೋಗಾಭ್ಯಾಸ ಅಥವಾ ಧ್ಯಾನ ಮಾಡುವುದನ್ನು ಅಭ್ಯಾಸ ಮಾಡಿ.

ತುಲಾ: ಆರ್ಥಿಕವಾಗಿ ಬೆಳೆಯುವ ಸದವಕಾಶವನ್ನು ಪಡೆಯಲಿದ್ದೀರಿ. ವಿದೇಶಿ ಸಂಪರ್ಕಗಳಿಂದ ಉತ್ತಮ ಪ್ರಯೋಜನ ಆಗಲಿದೆ. ಶಿಸ್ತುಬದ್ಧವಾದ ನಿಯಮದ ಆಹಾರದಿಂದ ಆರೋಗ್ಯ ವೃದ್ಧಿಯಾಗುವುದು.

ಕುಂಭ: ಸಂತಾನ ಪ್ರಾಪ್ತಿಯಾಗಲಿದ್ದು ಸಂಸಾರದಲ್ಲಿ ಸಂತೃಪ್ತ ಜೀವನ ನಡೆಸುವಂತಾಗುತ್ತದೆ. ತಾಳ್ಮೆಯಿಂದ ಸಮಸ್ಯೆ ಬಗೆಹರಿಸಿಕೊಳ್ಳುವಂತೆ ಎಚ್ಚರಿಕೆಯ ಮಾತುಗಳನ್ನು ಹಿರಿಯರಿಂದ ಹೇಳಿದಂತೆಯೇ ನಡೆದುಕೊಳ್ಳಿ.

ಮೀನ: ಹಣ್ಣು ತರಕಾರಿ ವ್ಯಾಪಾರಿಗಳಿಗೆ ಸರಕು ಸಾಗಾಣಿಕೆಯಲ್ಲಿ ತೊಂದರೆ ಆಗಬಹುದು. ವರ್ಗಾವಣೆಯಿಂದಾಗಿ ದೂರದೂರಿನಲ್ಲಿ ವಾಸಿಸುವ ಸಂದರ್ಭ ಬರಲಿದೆ. ಆರೋಗ್ಯದಲ್ಲಿ ಸಣ್ಣ-ಪುಟ್ಟ ಸಮಸ್ಯೆಗಳು ಎದುರಾಗಬಹುದು.

ಪದಬಂಧ 5323

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕನ್ನಡಿಗರ ಹೆಮ್ಮೆಯ ನಾಡು (4)
3.ನೂರು ಹೆಜ್ಜೆ ನಡೆಯುವುದು (4)
5.ಬೆಳಗಿನ ಜಾವವಿದು (3)
6.ಎಳ್ಳು ನೀರು ಬಿಡುವಿಕೆ (4)
8.ಸ್ವಪ್ನವಿಲ್ಲಿ ನಿಜವಾಗಿದೆ (3)
10.ಸಭೆಯಲ್ಲಿ ಕುಳಿತಿರುವವನು (3)
11.ಕೆಟ್ಟಚೇಷ್ಟೆಯಿದು (3)
12.ಮಾತೆ ತೋರಿರುವ ಪ್ರೀತಿ (3)
14.ತುಸುವೇ ಬೀರಿರುವ ಮಂದಹಾಸ (4)
17.ಅನೇಕ ಚಿಕ್ಕ ಚಿಕ್ಕ ಮನೆಗಳುಳ್ಳ ಆವಾರ (3)
18.ಸಾರವಾದ ಭಾಗದೊಂದಿಗಿರುವ ಕ್ಷೀರ (4)
19.ಅತ್ಯಂತ ಪರಾಕ್ರಮಿ (4)

ಮೇಲಿಂದ ಕೆಳಕ್ಕೆ
1.ಬಣ್ಣದ ದಾರದಿಂದ ಬಟ್ಟೆ ಮೇಲೆ ಮಾಡಿದ ಹೆಣಿಗೆ (3)
2.ಕನ್ನ ಹಾಕಿ ಕದ್ದಿರುವ ಚಿನ್ನವೇ ಇದು! (3)
3.ಮುಂದಾಗುವುದನ್ನು ತಿಳಿಸುವುದು (3)
4. ಸೊಂಟಕ್ಕೆ ಸುತ್ತಿಕೊಳ್ಳುವ ಬಟ್ಟೆ (2)
7.ಯಾವ ಉದ್ದೇಶವೂ ಇಲ್ಲದ್ದು (5)
9.ಅಂತಶ್ಶಕ್ತಿಯಿದು (5)
13.ಅತಿಯಾದ ಬಯಕೆ (3)
14.ಪಾಪಿಗಳ ಲೋಕ (3)
15.ನೆಲವನ್ನು ಅಗೆಯುವ ಕಬ್ಬಿಣದ ಸಾಧನ (3)
16.ಬೇಸಿಗೆಯ ತಾಪ (2)

1			2	■	3			4
	■	■	5			■	■	
6	7			■	8		9	■
■		■	■	■	■	■		■
10			■	■	■	11		
■		■	■	■	■	■		■
■	12		13	■	14			15
16	■	■	17			■	■	
18				■	19			

5322ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. ಪಿತಾಮಹ 3. ಹಸನ್ಮುಖ 5. ರಿಪೇರಿ 6. ಸಂವತ್ಸರ 7. ರಿಯಾಯಿತಿ 9. ತರದೂದು 11. ಡಗರ 13. ಚಾಕರ 14. ಜವಾಹಿರಿ 15. ಸದ್ಭಾವನೆ

ಮೇಲಿಂದ ಕೆಳಕ್ಕೆ: 2. ಹರಿಕಾರ 3. ಹರಿದಾರಿ 4. ಖಗ 6. ಸಂಕೇತ 8. ತಿಮಿರ 10. ದುರಾಚಾರಿ 11. ಸಮರಸ 12. ಹುಂಜ

ಸುಡೊಕು 5709

	5		1			4		7
6				5				
	4	2	8				6	
4			5		9	2		1
	2			4			5	
3		5	2		8			6
5	7					8		9
		1	4		5			
	8			7			3	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


5708 ಸುಡೊಕು

5	7	6	8	3	1	9	4	2
9	8	2	4	5	6	7	3	1
3	4	1	2	7	9	8	5	6
4	1	7	5	6	8	3	2	9
6	5	9	3	2	7	1	8	4
8	2	3	9	1	4	5	6	7
1	6	5	7	8	2	4	9	3
7	9	8	6	4	3	2	1	5
2	3	4	1	9	5	6	7	8

ಕುಸಿದ ಗೇಲ್ ಲಾಭ

ನವದೆಹಲಿ (ಪಿಟಿಐ): ಗೇಲ್ ಇಂಡಿಯಾ ಲಿ.ನ ನಿವ್ವಳ ಲಾಭವು 2023ರ ಮಾರ್ಚ್ ತ್ರೈಮಾಸಿಕದಲ್ಲಿ ಶೇ 77.5ರಷ್ಟು ಕುಸಿತ ಕಂಡಿದ್ದು ₹603 ಕೋಟಿಗೆ ತಲುಪಿದೆ. 2022ರ ಇದೇ ಅವಧಿಯಲ್ಲಿ ಲಾಭ ₹2,683 ಕೋಟಿ ಇತ್ತು ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ. ಅನಿಲ ದರ ಗರಿಷ್ಠ ಮಟ್ಟದಲ್ಲಿ ಇರುವುದು ಹಾಗೂ ರಷ್ಯಾದಿಂದ ಪೂರೈಕೆಗೆ ಅಡ್ಡಿಯಾಗಿರುವುದೇ ಲಾಭದಲ್ಲಿ ಕುಸಿತಕ್ಕೆ ಕಾರಣ ಎಂದಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,181
ಇಂದಿನ ಅಂತ್ಯ	18,129
	52
ದಿನದ ಕನಿಷ್ಠ	18,104

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹520
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹525

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1625 (1645)
ಸೋಯಾ (ರಿಫೈನ್ಡ್)	₹917 (925)
ಸೂರ್ಯಕಾಂತಿ (ರಿಫೈನ್ಡ್)	₹950 (955)
ಪಾಮೋಲಿನ್	₹890 (902)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹157
ಆರ್‌ಎಸ್‌ಎಸ್-5	₹151
ಗುಡ್ ಲಾಟ್	₹133

(ಪ್ರತಿ ಕೆ.ಜಿಗೆ)

ಚಿನ್ನದ ದರ ₹480, ಬೆಳ್ಳಿ ₹530 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸತತ ಎರಡನೇ ದಿನವೂ ಚಿನ್ನ, ಬೆಳ್ಳಿ ದರ ಇಳಿಕೆ ಕಂಡಿದೆ. ಗುರುವಾರದ ವಹಿವಾಟಿನಲ್ಲಿ ಚಿನ್ನದ ದರ 10 ಗ್ರಾಂಗೆ ₹480ರಷ್ಟು ಇಳಿಕೆ ಕಂಡು ₹60,070ರಂತೆ ಮಾರಾಟ ಆಯಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಕಂಡಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪರಿಣಾಮ ಉಂಟಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹530 ಇಳಿಕೆಯಾಗಿ ₹72,750ಕ್ಕೆ ತಲುಪಿತು.

₹1.05 ಲಕ್ಷ ಕೋಟಿ ಹೂಡಿಕೆ: ಎಡಬ್ಲ್ಯುಎಸ್

ಮುಂಬೈ (ಪಿಟಿಐ): ಅಮೆಜಾನ್ ವೆಬ್ ಸರ್ವಿಸಸ್ (ಎಡಬ್ಲ್ಯುಎಸ್) 2030ರ ವೇಳೆಗೆ ಭಾರತದಲ್ಲಿ ಡೇಟಾ ಸೆಂಟರ್ ಮೂಲಸೌಕರ್ಯಕ್ಕಾಗಿ ₹1.05 ಲಕ್ಷ ಕೋಟಿ ಹೂಡಿಕೆ ಮಾಡುವುದಾಗಿ ಗುರುವಾರ ಹೇಳಿದೆ.

ಭಾರತದಲ್ಲಿ ಕ್ಲೌಡ್ ಸೇವೆಗಳಿಗೆ ಬೇಡಿಕೆ ಹೆಚ್ಚುತ್ತಿರುವುದನ್ನು ಗಮನಿಸಿ ಈ ನಿರ್ಧಾರಕ್ಕೆ ಬಂದಿರುವುದಾಗಿ ತಿಳಿಸಿದೆ.

ಈ ಹೂಡಿಕೆಯಿಂದ ಭಾರತದ ಉದ್ಯಮಗಳಲ್ಲಿ ಪ್ರತಿ ವರ್ಷವೂ ಸರಾಸರಿ 1.31 ಲಕ್ಷ ಉದ್ಯೋಗ ಸೃಷ್ಟಿಯಾಗುವ ಅಂದಾಜು ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ. 2016 ರಿಂದ 2022ರ ಅವಧಿಯಲ್ಲಿ ₹ 30,900 ಕೋಟಿ ಹೂಡಿಕೆ ಮಾಡಲಾಗಿದೆ. ಹೀಗಾಗಿ 2030ರ ವೇಳೆಗೆ ಒಟ್ಟು ಹೂಡಿಕೆಯು ₹1.36 ಲಕ್ಷ ಕೋಟಿಯಷ್ಟು ಆಗಲಿದೆ.

2022–23ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕ ಫಲಿತಾಂಶ

ಎಸ್‌ಬಿಐ ಲಾಭ ಶೇ 83ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ನಿವ್ವಳ ಲಾಭವು 2022–23ನೇ ಹಣಕಾಸು ವರ್ಷದ ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಶೇ 83ರಷ್ಟು ಹೆಚ್ಚಾಗಿ ₹16,694 ಕೋಟಿಗೆ ಏರಿಕೆ ಕಂಡಿದೆ.

ಬಡ್ಡಿ ವರಮಾನ ಹೆಚ್ಚಾಗಿರುವುದು ಹಾಗೂ ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ಕಡಿಮೆ ಆಗಿರುವುದರಿಂದ ಲಾಭದಲ್ಲಿ ಈ ಪ್ರಮಾಣದ ಹೆಚ್ಚಳ ಕಂಡುಬಂದಿದೆ ಎಂದು ಬ್ಯಾಂಕ್ ಷೇರುಪೇಟೆಗೆ ಗುರುವಾರ ಮಾಹಿತಿ ನೀಡಿದೆ.

2021–22ನೇ ಹಣಕಾಸು ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ನಿವ್ವಳ ಲಾಭ ₹9,113 ಕೋಟಿಯಷ್ಟು ಇತ್ತು.

2022–23ರ ಮಾರ್ಚ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಬಡ್ಡಿ ವರಮಾನವು ಶೇ 31ರಷ್ಟು ಹೆಚ್ಚಾಗಿ ₹92,951 ಕೋಟಿಗೆ ತಲುಪಿದೆ ಎಂದು ತಿಳಿಸಿದೆ.

ಭವಿಷ್ಯದಲ್ಲಿ ಎದುರಾಗುವ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ₹7,237 ಕೋಟಿಯಿಂದ ₹3,315 ಕೋಟಿಗೆ ಇಳಿಕೆ ಕಂಡಿದೆ.

2022–23ನೇ ಹಣಕಾಸು ವರ್ಷಕ್ಕೆ ಬ್ಯಾಂಕ್‌ನ ನಿವ್ವಳ ಲಾಭ ಶೇ 59ರಷ್ಟು ಹೆಚ್ಚಾಗಿ ₹50,232 ಕೋಟಿಗೆ ಏರಿಕೆ ಆಗಿದೆ. 2021–22ರಲ್ಲಿ ನಿವ್ವಳ ಲಾಭ ₹31,675 ಕೋಟಿ ಇತ್ತು.

ಲಾಭಾಂಶ ಘೋಷಣೆ: 2023ರ ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ ಪ್ರತಿ ಷೇರಿಗೆ ₹11.30 ಲಾಭಾಂಶ ನೀಡುವುದಾಗಿ ಬ್ಯಾಂಕ್ ಘೋಷಿಸಿದೆ. ಲಾಭಾಂಶ ಪಾವತಿಸಲು ದಿನಾಂಕವನ್ನು ಜೂನ್ 14ಕ್ಕೆ ನಿಗದಿಪಡಿಸಿರುವುದಾಗಿ ತಿಳಿಸಿದೆ.

₹11,021 ಕೋಟಿ ನಷ್ಟ

ಹೂಡಿಕೆದಾರರು ಲಾಭ ಗಳಿಸಿಕೊಳ್ಳಲು ಮುಂದಾಗಿದ್ದರಿಂದ ಗುರುವಾರದ ವಹಿವಾಟಿನಲ್ಲಿ ಎಸ್‌ಬಿಐ ಷೇರಿನ ಮೌಲ್ಯ ಶೇ 2ರಷ್ಟು ಇಳಿಕೆ ಕಂಡಿತು. ಇದರಿಂದಾಗಿ ಮಾರುಕಟ್ಟೆ ಮೌಲ್ಯ ₹11,021 ಕೋಟಿಯಷ್ಟು ಇಳಿಕೆ ಕಂಡು ಒಟ್ಟಾರೆ ಮೌಲ್ಯ ₹5.12 ಲಕ್ಷ ಕೋಟಿಗೆ ತಲುಪಿತು.

ಬಿಎಸ್‌ಇನಲ್ಲಿ ಷೇರಿನ ಬೆಲೆ ಶೇ 2.11ರಷ್ಟು ಇಳಿಕೆ ಕಂಡು ₹574.15ಕ್ಕೆ ಮತ್ತು ಎನ್‌ಎಸ್‌ಇನಲ್ಲಿ ಶೇ 1.69ರಷ್ಟು ಇಳಿಕೆ ಕಂಡು ₹576.35ಕ್ಕೆ ತಲುಪಿತು.

ಮುಂಬೈ ಧಾರಣೆ

ಶೇಂಗಾ
18–5–2023

ಜಾವಾ 70/80(ಹೊಸ)	11650-11700
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12200-12300

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1635 (1650)
ಒಂದು ವಾರದ ಡೆಲಿವರಿ	1630 (1645)
ಸೋಯಾ ಕಚ್ಚಾ	855 (860)
ಪಾಮ್ ವಾರದ ಡೆಲಿವರಿ	888 (900)
ಸೂರ್ಯಕಾಂತಿ ಎಣ್ಣೆ ಕಚ್ಚಾ	865 (870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60100 (60450)
ಬೆಳ್ಳಿ ಕೆ.ಜಿ 71450 (71900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	- 470

ಅಡಿಕೆ
ಕುಮಟಾ

ಚಿಪ್ಪು	30091-33269
ಕೋಕ	18189-31699
ಹಳೆಚಾಲಿ	36400-39999
ಹೊಸಚಾಲಿ	35701-37799

ಸಾಗರ

ಬಿಳಿಗೋಟು	29009-32199
ಚಾಲಿ	30120-36759
ಕೋಕ	19119-33199
ಕೆಂಪುಗೋಟು	28899-36299
ರಾಶಿ	35211-47899
ಸಿಪ್ಪೆಗೋಟು	4899-21489

ಶಿವಮೊಗ್ಗ

ಬೆಟ್ಟೆ	43599-53452
ಗೊರಬಲು	18009-34786
ರಾಶಿ	34009-48100

ಸಿದ್ದಾಪುರ

ಬಿಳಿಗೋಟು	28908-32299
ಚಾಲಿ	35099-37499
ಕೋಕ	28619-32119
ಕೆಂಪುಗೋಟು	31469-32089
ರಾಶಿ	45599-46319
ತಟ್ಟಿಬೆಟ್ಟೆ	36699-40479

ಶಿರಸಿ

ಬೆಟ್ಟೆ	36869-43899
ಬಿಳಿಗೋಟು	24199-34600
ಚಾಲಿ	34418-38191
ಕೆಂಪುಗೋಟು	31969-33809
ರಾಶಿ	43099-46199

ಯಲ್ಲಾಪುರ

ಬಿಳಿಗೋಟು	26899-34599
ಚಾಲಿ	34399-39201
ಕೋಕ	18499-30899
ಕೆಂಪುಗೋಟು	28029-35699
ರಾಶಿ	40299-50900

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15250	15200	15300	186.80 ಸೆಂಟ್ಸ್
ಎಸಿ	7980	7700	7700	
ಆರ್‌ಪಿ	10400	10775	10550	ಲಂಡನ್
ಆರ್‌ಸಿ	5950	234 on OT	5750	2582 ಡಾಲರ್ಸ್

ಕಾರ್ಯಾಚರಣಾ ವರಮಾನ ಶೇ 7ರಷ್ಟು ಹೆಚ್ಚಳ

ಐಟಿಸಿ ಲಾಭ ಶೇ 23 ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಟಿಸಿ ಲಿಮಿಟೆಡ್‌ನ ನಿವ್ವಳ ಲಾಭವು 2023ರ ಮಾರ್ಚ್‌ಗೆ ಕೊನೆಗೊಂಡ ನಾಲ್ಕನೇ ತ್ರೈಮಾಸಿಕದಲ್ಲಿ ಶೇ 22.66ರಷ್ಟು ಹೆಚ್ಚಾಗಿ ₹5,225 ಕೋಟಿಗೆ ತಲುಪಿದೆ.

2022ರ ಮಾರ್ಚ್‌ಗೆ ಕೊನೆಗೊಂಡ ನಾಲ್ಕನೇ ತ್ರೈಮಾಸಿಕದಲ್ಲಿ ₹4,259 ಕೋಟಿಯಷ್ಟು ಲಾಭ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಕಾರ್ಯಾಚರಣಾ ವರಮಾನ ಶೇ7ರಷ್ಟು ಹೆಚ್ಚಾಗಿ ₹18,799 ಕೋಟಿಗೆ ತಲುಪಿದೆ. ಹಿಂದಿನ ಅವಧಿಯಲ್ಲಿ ₹17,754 ಕೋಟಿ ಇತ್ತು. ಒಟ್ಟು ವೆಚ್ಚವು ಶೇ 2.18ರಷ್ಟು ಹೆಚ್ಚಾಗಿ ₹12,907 ಕೋಟಿಗೆ ತಲುಪಿದೆ. ಒಟ್ಟು ವರಮಾನ ಶೇ 7.75ರಷ್ಟು ಏರಿಕೆ ಕಂಡು ₹19,667 ಕೋಟಿ ಆಗಿದೆ.

ಎಲ್ಲಾ ವಿಭಾಗಗಳಲ್ಲಿಯೂ ಉತ್ತಮ ಬೆಳವಣಿಗೆ ಕಂಡಿರುವುದೇ ಲಾಭದಲ್ಲಿ ಹೆಚ್ಚಳ ಆಗಲು ಕಾರಣ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

2022–23ನೇ ಹಣಕಾಸು ವರ್ಷಕ್ಕೆ ನಿವ್ವಳ ಲಾಭ ಶೇ 25.45ರಷ್ಟು ಹೆಚ್ಚಾಗಿ ₹19,427 ಕೋಟಿಗೆ ತಲುಪಿದೆ. ಕಾರ್ಯಾಚರಣಾ ವರಮಾನ ಶೇ 17.34ರಷ್ಟು ಹೆಚ್ಚಾಗಿ ₹75,826 ಕೋಟಿಯಷ್ಟು ಆಗಿದೆ. ಇದೇ ಮೊದಲ ಬಾರಿಗೆ ಕಂಪನಿಯ ಕಾರ್ಯಾಚರಣಾ ವರಮಾನ ₹75 ಸಾವಿರ ಕೋಟಿಯನ್ನು ದಾಟಿದೆ.

ನೇಮಕ: ಕಂಪನಿಗೆ ಸ್ವತಂತ್ರ ನಿರ್ದೇಶಕರನ್ನಾಗಿ ಅಲ್ಕಾ ಮರೇಜ್ಬಾನ್ ಭರುಚಾ ಅವರನ್ನು 5 ವರ್ಷಗಳ ಅವಧಿಗೆ ಹಾಗೂ ಹೇಮಂತ್ ಮಾಲಿಕ್ ಅವರನ್ನು ಪೂರ್ಣಾವಧಿ ನಿರ್ದೇಶಕರನ್ನಾಗಿ ಮೂರು ವರ್ಷಗಳ ಅವಧಿಗೆ ನೇಮಕ ಮಾಡಲು ಕಂಪನಿಯ ಆಡಳಿತ ಮಂಡಳಿ ಒಪ್ಪಿಗೆ ನೀಡಿದೆ.

ಷೇರಿಗೆ ₹ 6.75 ಲಾಭಾಂಶ

2022–23ನೇ ಹಣಕಾಸು ವರ್ಷಕ್ಕೆ ₹ 1ರ ಮುಖಬೆಲೆಯ ಪ್ರತಿ ಷೇರಿಗೆ ₹6.75ರಷ್ಟು ಅಂತಿಮ ಲಾಭಾಂಶ ಹಾಗೂ ₹2.75 ವಿಶೇಷ ಲಾಭಾಂಶ ನೀಡಲು ಆಡಳಿತ ಮಂಡಳಿಯು ಶಿಫಾರಸು ಮಾಡಿರುವುದಾಗಿ ಕಂಪನಿ ಹೇಳಿದೆ.
ಮಧ್ಯಂತರ ಲಾಭಾಂಶ ₹6 ಘೋಷಿಸಲಾಗಿತ್ತು. ಇದರಿಂದಾಗಿ ಒಟ್ಟು ಲಾಭಾಂಶವು ₹15.50ರಷ್ಟು ಆಗಲಿದೆ.

ಮಾರುಕಟ್ಟೆ ಮೌಲ್ಯ ಇಳಿಕೆ (ಪಿಟಿಐ ವರದಿ): ಲಾಭ ಗಳಿಕೆಗೆ ಒಳಗಾಗಿ ಕಂಪನಿಯ ಷೇರು ಶೇ 2ರಷ್ಟು ಇಳಿಕೆ ಕಂಡಿತು. ಇದರಿಂದಾಗಿ ಕಂಪನಿಯ ಮಾರುಕಟ್ಟೆ ಮೌಲ್ಯ ₹9,942 ಕೋಟಿ ಕಡಿಮೆ ಆಗಿದ್ದು ಒಟ್ಟು ಮೌಲ್ಯವು ₹5.21 ಲಕ್ಷ ಕೋಟಿಗೆ ತಲುಪಿದೆ.

ಕಲಬುರಗಿ ವಿಮಾನ ನಿಲ್ದಾಣದಲ್ಲಿ ‘ನೈಟ್ ಲ್ಯಾಂಡಿಂಗ್’ಗೆ ಅನುಮತಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಕಲಬುರಗಿ ವಿಮಾನ ನಿಲ್ದಾಣದಲ್ಲಿ ರಾತ್ರಿ ವಿಮಾನ ಕಾರ್ಯಾಚರಣೆ ಸೇವೆಗೆ (ನೈಟ್ ಲ್ಯಾಂಡಿಂಗ್) ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ(ಡಿಜಿಸಿಎ) ಅನುಮತಿ ನೀಡಿದೆ.

‘ಉಡಾನ್’ ಯೋಜನೆಯಡಿ 2019ರ ನವೆಂಬರ್ 22ರಂದು ವಿಮಾನ ಕಾರ್ಯಾಚರಣೆ ಆರಂಭ ಆಯಿತು. ಎರಡು ವರ್ಷಗಳಿಂದ ನೈಟ್ ಲ್ಯಾಂಡಿಂಗ್‌ಗೆ ಬೇಡಿಕೆ ಇತ್ತು. ಪ್ರಸ್ತುತ ರನ್‌ವೇ–27(ಪೂರ್ವ) ಮಾರ್ಗದ ಮೂಲಕ ವಿಮಾನ ಹಾರಾಟಕ್ಕೆ ಅನುಮತಿ ಲಭಿಸಿದೆ.

ರನ್‌ವೇ–9(ಪಶ್ಚಿಮ) ಸಮೀಪದ ಬೆಟ್ಟದ ಮೇಲೆ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಇದ್ದು, ಅಲ್ಲಿನ ತಡೆಗೋಡೆ ತೆರವಾದ ಬಳಿಕ ರನ್‌ವೇ ಎರಡೂ ಬದಿಯಿಂದ ವಿಮಾನ ಹಾರಾಟಕ್ಕೆ ಅನುಮೋದನೆ ಸಿಗಲಿದೆ.

‘ವಿಮಾನ ನಿಲ್ದಾಣದಲ್ಲಿ ನೈಟ್ ಲ್ಯಾಂಡಿಂಗ್‌ಗೆ ಏರ್‌ಪೋರ್ಟ್ ಗ್ರೌಂಡ್ ಲೈಟಿಂಗ್ (ಎಜಿಎಲ್) ಜೋಡಣೆ, ರನ್‌ವೇ ಮೂಲ ಸೌಕರ್ಯ, ಉಪಗ್ರಹ ಆಧಾರಿತ ಪೈಲಟ್ ಮತ್ತು ಏರ್ ಟ್ರಾಫಿಕ್ ನಿಯಂತ್ರಣದ ವಾಯು ಮಾರ್ಗ ನಕ್ಷೆ ಸಿದ್ಧಪಡಿಸಲಾಯಿತು. ಈ ಎಲ್ಲಾ ಪ್ರಕ್ರಿಯೆ ಪೂರ್ಣಗೊಳ್ಳಲು ಆರು ತಿಂಗಳು ಬೇಕಾಯಿತು’ ಎಂದು ವಿಮಾನ ನಿಲ್ದಾಣದ ನಿರ್ದೇಶಕ ಡಾ.ಚಿಲಕಾ ಮಹೇಶ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ನೈಟ್ ಲ್ಯಾಂಡಿಂಗ್‌ನಿಂದ ವಾಣಿಜ್ಯ ಮತ್ತು ಕೈಗಾರಿಕಾ ಚಟುವಟಿಕೆಗಳಿಗೆ ಉತ್ತೇಜನ ಸಿಗಲಿದೆ. ಉದ್ಯಮಿಗಳು, ಅಧಿಕಾರಿಗಳಿಗೆ ಬೆಂಗಳೂರು, ಮುಂಬೈ, ಚೆನ್ನೈ, ಗೋವಾ, ದೆಹಲಿಗೆ ಬೆಳಿಗ್ಗೆ ಪ್ರಯಾಣ ಬೆಳೆಸಿ ಅದೇ ದಿನ ರಾತ್ರಿ ಮರಳಬಹುದು’ ಎಂದು ಕಲ್ಯಾಣ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವ ಕಾರ್ಯದರ್ಶಿ ಮಂಜುನಾಥ ಜೇವರ್ಗಿ ತಿಳಿಸಿದರು.

ಭಾರತದ ಪ್ರತಿಮಾ ನ್ಯೂಯಾರ್ಕ್ ಪೊಲೀಸ್ ‘ಕ್ಯಾಪ್ಟನ್‘

ನ್ಯೂಯಾರ್ಕ್ (ಪಿಟಿಐ): ಭಾರತ ಸಂಜಾತೆ ಕ್ಯಾಪ್ಟನ್ ಪ್ರತಿಮಾ ಭುಲ್ಲಾರ್ ಮಲ್ಡೊನಾಡೊ ಅವರು ನ್ಯೂಯಾರ್ಕ್‌ನ ಪೊಲೀಸ್ ಇಲಾಖೆಯಲ್ಲಿ ಉನ್ನತ ಶ್ರೇಣಿಗೇರಿರುವ ದಕ್ಷಿಣ ಏಷ್ಯಾದ ಮೊದಲ ಮಹಿಳಾ ಪೊಲೀಸ್ ಅಧಿಕಾರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಪ್ರತಿಮಾ ಈಚೆಗೆ ಕ್ಯಾಪ್ಟನ್ ಶ್ರೇಣಿಗೆ ಪದೋನ್ನತಿ ಪಡೆದಿದ್ದರು.

ಕ್ವೀನ್ಸ್ ಮತ್ತು ದಕ್ಷಿಣ ರಿಚ್ಮಂಡ್‌ಹಿಲ್ ನಗರಗಳಲ್ಲಿನ ಪೊಲೀಸ್ ಠಾಣೆಗಳು ಇವರ ಅಧೀನಕ್ಕೆ ಬರುತ್ತವೆ ಎಂದು ‘ಸಿಬಿಎಸ್ ನ್ಯೂಸ್’ ವರದಿ ಮಾಡಿದೆ.

ಪಂಜಾಬ್‌ನಲ್ಲಿ ಜನಿಸಿರುವ ಪ್ರತಿಮಾ ಅವರು ತಮ್ಮ 9ನೇ ವಯಸ್ಸಿನಿಂದ ನ್ಯೂಯಾರ್ಕ್‌ನ ಕ್ವೀನ್ಸ್‌ನಲ್ಲಿ ನೆಲೆಸಿದ್ದಾರೆ. ಪ್ರತಿಮಾ ಅವರು ನಾಲ್ಕು ಮಕ್ಕಳ ತಾಯಿಯಾಗಿದ್ದಾರೆ.

‘ಇದು ನನಗೆ ಸಿಕ್ಕಿರುವ ಬಹುದೊಡ್ಡ ಜವಾಬ್ದಾರಿ. ಇದನ್ನು ಉತ್ತಮ ರೀತಿಯಲ್ಲಿ ನಿಭಾಯಿಸುವ ವಿಶ್ವಾಸವಿದೆ. ನನ್ನ ತಂದೆ ಹಲವು ವರ್ಷಗಳ ಕಾಲ ಇಲ್ಲಿ ಟ್ಯಾಕ್ಸಿ ಚಾಲಕರಾಗಿ ದುಡಿದಿದ್ದಾರೆ. ನಾನು ಪೊಲೀಸ್ ಇಲಾಖೆಗೆ ಸೇರುವ ಮುನ್ನವೇ 2006ರಲ್ಲಿ ಅವರು ತೀರಿಕೊಂಡಿದ್ದಾರೆ’ ಎಂದು ಪ್ರತಿಮಾ ಹೇಳಿದ್ದಾರೆ.

ಜಿ–7 ಶೃಂಗ: ಉಕ್ರೇನ್ ಯುದ್ಧವೇ ಚರ್ಚಾ ವಿಷಯ

ಹಿರೋಶಿಮಾ (ಎಪಿ): ಅಮೆರಿಕದ ಮೊದಲ ಅಣುಬಾಂಬ್ ದಾಳಿಗೆ ತತ್ತರಿಸಿ ಹೋದ ಜಪಾನ್‌ನ ನಗರ ಹಿರೋಶಿಮಾದಲ್ಲಿ ಜಿ–7 ರಾಷ್ಟ್ರಗಳ ಶೃಂಗಸಭೆಯು ಶುಕ್ರವಾರದಿಂದ ಮೂರು ದಿನ ನಡೆಯಲಿದ್ದು, ರಷ್ಯಾವು ಉಕ್ರೇನ್ ಮೇಲೆ ನಡೆಸುತ್ತಿರುವ ಯುದ್ಧವೇ ಈ ಸಭೆಯ ಪ್ರಮುಖ ಚರ್ಚಾ ವಿಷಯವಾಗಿರಲಿದೆ.

‘ಉಕ್ರೇನ್ ಯುದ್ಧದ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿದೆ. ಯಾವೆಲ್ಲಾ ರೀತಿಯಲ್ಲಿ ರಷ್ಯಾ ಮೇಲೆ ನಿರ್ಬಂಧ ಹೇರಬೇಕು ಮತ್ತು ಜಿ–7 ರಾಷ್ಟ್ರಗಳು ಯಾವ ಕ್ರಮ ಕೈಗೊಳ್ಳಬೇಕು ಎನ್ನುವುದರ ಕುರಿತೂ ಮಾತುಕತೆ ನಡೆಯಲಿದೆ’ ಎಂದು ಅಮೆರಿಕದ ರಾಷ್ಟ್ರೀಯ ಭದ್ರತಾ ಸಲಹೆಗಾರ ಜ್ಯಾಕ್ ಸುಲ್ಲಿವಾನ್ ಪತ್ರಕರ್ತರಿಗೆ ತಿಳಿಸಿದರು.

ಮುಂಬೈ ಮೇಲಿನ ಭಯೋತ್ಪಾದನಾ ದಾಳಿ ಆರೋಪಿ

ರಾಣಾ ಗಡೀಪಾರಿಗೆ ಕೋರ್ಟ್ ಸಮ್ಮತಿ

ನ್ಯೂಯಾರ್ಕ್ (ಪಿಟಿಐ): 2008ರ ಮುಂಬೈ ಭಯೋತ್ಪಾದನಾ ದಾಳಿಯ ಆರೋಪಿ, ಪಾಕಿಸ್ತಾನಿ ಮೂಲದ ಕೆನಡಾ ಉದ್ಯಮಿ ತಹವ್ವೂರ್ ರಾಣಾ ಗಡೀಪಾರಿಗೆ ಅಮೆರಿಕ ನ್ಯಾಯಾಲಯ ಸಮ್ಮತಿಸಿದ್ದು, ಇದು ಕಾನೂನು ಹೋರಾಟದಲ್ಲಿ ಭಾರತಕ್ಕೆ ದೊರೆತ ಬಹುದೊಡ್ಡ ಜಯ ಎಂದು ವ್ಯಾಖ್ಯಾನಿಸಲಾಗಿದೆ.



ತಹವ್ವೂರ್ ರಾಣಾ

ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರ ಆಹ್ವಾನದ ಮೇರೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕ ಪ್ರವಾಸ ಕೈಗೊಳ್ಳುವುದಕ್ಕೂ ಒಂದು ತಿಂಗಳ ಮೊದಲು ಕ್ಯಾಲಿಫೋರ್ನಿಯಾ ನ್ಯಾಯಾಲಯದಿಂದ ಈ ನಿರ್ಧಾರ ಹೊರಬಿದ್ದಿದೆ. ಅಧ್ಯಕ್ಷ ಬೈಡನ್ ದಂಪತಿ ಜೂನ್ 22ರಂದು ಮೋದಿ ಅವರಿಗೆ ಶ್ವೇತಭವನದಲ್ಲಿ ಔತಣಕೂಟ ಏರ್ಪಡಿಸಿದ್ದಾರೆ.

ಭಾರತ ಮತ್ತು ಅಮೆರಿಕ ನಡುವಿನ ಗಡೀಪಾರು ಒಪ್ಪಂದದ ಪ್ರಕಾರ 62 ವರ್ಷದ ರಾಣಾನನ್ನು ಭಾರತಕ್ಕೆ ಗಡೀಪಾರು ಮಾಡಬೇಕು ಎಂದು ಕ್ಯಾಲಿಫೋರ್ನಿಯಾ ಸೆಂಟ್ರಲ್ ಡಿಸ್ಟ್ರಿಕ್ಟ್‌ನ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶೆ ಜಾಕ್ವೆಲಿನ್ ಚೂಲ್‌ಜಿಯಾನ್ ಅವರು ಬುಧವಾರ 48 ಪುಟಗಳ ಆದೇಶ ಹೊರಡಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಾಧೀಶರು, ವಿಚಾರಣೆ ವೇಳೆ ಸಲ್ಲಿಸಿದ್ದ ಆಕ್ಷೇಪಣೆ ಹಾಗೂ ವಾದಗಳನ್ನು ಪರಿಗಣಿಸಿದ್ದಾರೆ. ಆರೋಪಿ ರಾಣಾನನ್ನು ಭಾರತಕ್ಕೆ ಗಡೀಪಾರು ಮಾಡಲು ವಿದೇಶಾಂಗ ಕಾರ್ಯದರ್ಶಿಗೆ ನಿರ್ದೇಶಿಸಿರುವುದಾಗಿ ಆದೇಶದಲ್ಲಿ ಹೇಳಿದ್ದಾರೆ.

ರಾಣಾನನ್ನು ಬಂಧಿಸುವ ಸಲುವಾಗಿ, ಗಡೀಪಾರು ಮಾಡುವಂತೆ ಭಾರತವು 2020ರ ಜೂನ್ 10ರಂದು ದೂರು ಸಲ್ಲಿಸಿತ್ತು. ಬೈಡನ್ ಆಡಳಿತವು ರಾಣಾನನ್ನು ಭಾರತಕ್ಕೆ ಹಸ್ತಾಂತರಿಸಲು ಒಪ್ಪಿಗೆ ನೀಡಿತ್ತು. ರಾಣಾ ಸದ್ಯ ಲಾಸ್ ಏಂಜಲೀಸ್‌ನ ಡೌನ್‌ಟೌನ್‌ನಲ್ಲಿರುವ ಫೆಡರಲ್ ಜೈಲಿನಲ್ಲಿದ್ದಾನೆ.

ಅಮೆರಿಕದೊಂದಿಗೆ ನಿರಂತರ ಸಂಪರ್ಕ (ನವದೆಹಲಿ ವರದಿ): ರಾಣಾನನ್ನು ಶೀಘ್ರ ಗಡೀಪಾರು ಮಾಡುವುದಕ್ಕಾಗಿ ಭಾರತವು ಅಮೆರಿಕದೊಂದಿಗೆ ನಿರಂತರ ಸಂಪರ್ಕದಲ್ಲಿದೆ ಎಂದು ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾತ್ರಾ ಹೇಳಿದ್ದಾರೆ.

ದೊಡ್ಡ ಯಶಸ್ಸು; ಉಜ್ವಲ್ ನಿಕ್ಕಂ: ರಾಣಾನ ಗಡೀಪಾರಿಗೆ ಅಮೆರಿಕ ನ್ಯಾಯಾಲಯ ಒಪ್ಪಿಗೆ ಸೂಚಿಸಿರುವುದು ಭಾರತಕ್ಕೆ ದೊರೆತ ಬಹುದೊಡ್ಡ ಯಶಸ್ಸು ಎಂದು ಈ ಪ್ರಕರಣದ ವಿಶೇಷ ಸರ್ಕಾರಿ ವಕೀಲ ಉಜ್ವಲ್ ನಿಕ್ಕಂ ಅಭಿಪ್ರಾಯಪಟ್ಟಿದ್ದಾರೆ.

ಮರಣದಂಡನೆಗೆ ಸಂತ್ರಸ್ತರ ಒತ್ತಾಯ

ಮುಂಬೈ (ಪಿಟಿಐ): ರಾಣಾ ಗಡೀಪಾರಿಗೆ ಅಮೆರಿಕ ನ್ಯಾಯಾಲಯ ಸಮ್ಮತಿಸಿರುವುದನ್ನು ಗುರುವಾರ ಸ್ವಾಗತಿಸಿರುವ ಸಂತ್ರಸ್ತರು, ಆರೋಪಿಗೆ ಮರಣ ದಂಡನೆ ಅಥವಾ ಕಠಿಣ ಸಜೆ ವಿಧಿಸಬೇಕು ಎಂದು ಒತ್ತಾಯಿಸಿದ್ದಾರೆ.

2008ರ ನವೆಂಬರ್‌ನಲ್ಲಿ ಛತ್ರಪತಿ ಶಿವಾಜಿ ಮಹಾರಾಜ ಟರ್ಮಿನಸ್‌ನಲ್ಲಿ ನಡೆದ ಭಯೋತ್ಪಾದನಾ ದಾಳಿಯಲ್ಲಿ ಗಾಯಗೊಂಡಿದ್ದ ದೇವಿಕಾ ನಟವರಲಾಲ್, ಈ ಘಟನೆಗೆ ಅತ್ಯಂತ ಕಿರಿಯ ಸಾಕ್ಷಿ ಎನಿಸಿದ್ದರು.

ಘಟನೆ ನಡೆದಾಗ ಆಕೆ ಕೇವಲ ಒಂಬತ್ತು ವರ್ಷದ ಬಾಲಕಿ. ‘ಭಯೋತ್ಪಾದಕರು ನನ್ನ ಬಲ ಕಾಲಿಗೆ ಗುಂಡು ಹಾರಿಸಿದ್ದರು. ನನ್ನ ಮುಂದೆಯೇ ಅನೇಕ ಜನರು ಆ ದಾಳಿಯಲ್ಲಿ ಹತರಾದರು. ಇದಕ್ಕೆ ಕಾರಣನಾದ ರಾಣಾನನ್ನು ಭಾರತಕ್ಕೆ ಗಡೀಪಾರು ಮಾಡುತ್ತಿರುವುದು ಸಂತೋಷ ತಂದಿದೆ. ಆದರೆ, ಅವನನ್ನು ಮರಣದಂಡನೆ ಅಥವಾ ಕಠಿಣ ಶಿಕ್ಷೆಗೆ ಗುರಿಪಡಿಸಿದರೆ ಮಾತ್ರ ನಾನು ಇನ್ನೂ ಸಂತೋಷಪಡುತ್ತೇನೆ’ ಎಂದು, 24 ವರ್ಷದ ದೇವಿಕಾ ಹೇಳಿದ್ದಾರೆ.

ದಾಳಿಯಲ್ಲಿ ಹುತಾತ್ಮರಾದ ರಾಜ್ಯ ಮೀಸಲು ಪೊಲೀಸ್ ಪಡೆಯ ಕಾನ್‌ಸ್ಟೆಬಲ್ ರಾಹುಲ್ ಶಿಂದೆ ಅವರ ತಂದೆ ಸುಭಾಷ್ ಶಿಂದೆ (60) ಅವರು ಮುಂಬೈ ಮೇಲಿನ ದಾಳಿಯ ಹಿಂದೆ ಪಾಕಿಸ್ತಾನದ ಕೈವಾಡ ಇರುವುದು ಈಗಾಗಲೇ ಗೊತ್ತಾಗಿದೆ. ರಾಣಾ ಗಡೀಪಾರಿನಿಂದಾಗಿ, ಭಯೋತ್ಪಾದನಾ ಕೃತ್ಯದಲ್ಲಿ ನೆರೆಯ ದೇಶದ ಪಾತ್ರ ಈಗ ಮತ್ತೊಮ್ಮೆ ಜಗಜ್ಜಾಹೀರಾಗಲಿದೆ ಎಂದು ಹೇಳಿದ್ದಾರೆ.

ಸಮುದ್ರದಲ್ಲಿ ದೋಣಿ ಮೂಲಕ ಬಂದ ಪಾಕಿಸ್ತಾನದ ಎಲ್‌ಇಟಿಯ ಹತ್ತು ಮಂದಿ ಭಯೋತ್ಪಾದಕರು, 2008ರ ನವೆಂಬರ್ 26ರಂದು ನಡೆಸಿದ ದಾಳಿಯಲ್ಲಿ ಅಮೆರಿಕದ ಆರು ಪ್ರಜೆಗಳು ಸೇರಿ 166 ಜನರು ಮೃತಪಟ್ಟಿದ್ದರು.

ನಾಲ್ಕನೇ ಸ್ಥಾನಕ್ಕೇರಿದ ಆರ್‌ಸಿಬಿ • ಪ್ಲೇ ಆಫ್ ಸಾಧ್ಯತೆಗೆ ಬಲ • ಕ್ಲಾಸನ್ ಶತಕ ವ್ಯರ್ಥ

ಕೊಹ್ಲಿ ಶತಕ, ಮಿಂಚಿದ ಡುಪ್ಲೆಸಿ

ಹೈದರಾಬಾದ್ (ಪಿಟಿಐ): ವಿರಾಟ್ ಕೊಹ್ಲಿ ಸೊಗಸಾದ ಶತಕದ ಮೂಲಕ ಮಿಂಚಿದರೆ, ಅಮೋಘ ಆಟ ಮುಂದುವರಿಸಿದ ನಾಯಕ ಫಫ್ ಡುಪ್ಲೆಸಿ ಮತ್ತೊಂದು ಅರ್ಧಶತಕ ಗಳಿಸಿದರು.

ಈ ಆರಂಭಿಕ ಬ್ಯಾಟರ್‌ಗಳಿಬ್ಬರ ಅಬ್ಬರದ ಆಟದ ಬಲದಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎಂಟು ವಿಕೆಟ್‌ಗಳಿಂದ ಮಣಿಸಿತು.

ರಾಜೀವಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಗುರುವಾರ ಮೊದಲು ಬ್ಯಾಟ್ ಮಾಡಿದ ಹೈದರಾಬಾದ್ ತಂಡ, ಹೆನ್ರಿಚ್ ಕ್ಲಾಸನ್ (104; 51ಎ) ಅವರ ಬಿರುಸಿನ ಶತಕದ ನೆರವಿನಿಂದ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 186 ರನ್ ಗಳಿಸಿತು.

ಆರ್‌ಸಿಬಿ ತಂಡ 19.2 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು ಗೆಲುವಿನ ಗಡಿ ದಾಟಿತು. ಕೊಹ್ಲಿ (100 ರನ್, 63 ಎ.) ಮತ್ತು ಡುಪ್ಲೆಸಿ (71 ರನ್, 47 ಎ.) ಅವರು ಮೊದಲ ವಿಕೆಟ್‌ಗೆ 172 ರನ್ ಸೇರಿಸಿ, ಬೆಂಗಳೂರಿನ ತಂಡದ ನಿರಾಯಾಸ ಗೆಲುವಿಗೆ ಕಾರಣರಾದರು. ಇವರಿಬ್ಬರ ಆಟದ ಮುಂದೆ, ಕ್ಲಾಸನ್ ಅವರ ಶತಕಕ್ಕೆ ಬೆಲೆಯಿಲ್ಲದಾಯಿತು.



ಶತಕ ಗಳಿಸಿದ ಸಂಭ್ರಮದಲ್ಲಿ ವಿರಾಟ್ ಕೊಹ್ಲಿ –ಎಎಫ್‌ಪಿ ಚಿತ್ರ

ಪಂದ್ಯವೊಂದರಲ್ಲಿ ಎರಡೂ ತಂಡಗಳ ಆಟಗಾರರು ಶತಕ ಗಳಿಸಿದ್ದು ಐಪಿಎಲ್ ಇತಿಹಾಸದಲ್ಲಿ ಇದೇ ಮೊದಲು.

ಈ ಗೆಲುವಿನ ಮೂಲಕ 14 ಪಾಯಿಂಟ್ಸ್‌ಗಳೊಂದಿಗೆ ಡುಪ್ಲೆಸಿ ಬಳಗ ನಾಲ್ಕನೇ ಸ್ಥಾನಕ್ಕೇರಿತು. ಗುಜರಾತ್ ಟೈಟನ್ಸ್ ವಿರುದ್ಧ ಭಾನುವಾರ ನಡೆಯಲಿರುವ ಅಂತಿಮ ಲೀಗ್ ಪಂದ್ಯವನ್ನು ಗೆದ್ದರೆ, ಆರ್‌ಸಿಬಿಗೆ ಪ್ಲೇ ಆಫ್‌ಗೆ ಅರ್ಹತೆ ಪಡೆಯುವ ಅವಕಾಶವಿದೆ.

ಸವಾಲಿನ ಗುರಿ ಬೆನ್ನಟ್ಟಿದ ಆರ್‌ಸಿಬಿಗೆ ಕೊಹ್ಲಿ ಮತ್ತು ಡುಪ್ಲೆಸಿ ಮೊದಲ ಆರು ಓವರ್‌ಗಳಲ್ಲಿ 64 ರನ್ ಸೇರಿಸಿ ಬಿರುಸಿನ ಆರಂಭ ನೀಡಿದರು. ಇವರು ಎದುರಾಳಿ ತಂಡದ ಸ್ಪಿನ್ ಹಾಗೂ ವೇಗದ ಬೌಲಿಂಗ್ ದಾಳಿಯನ್ನು ಛಲದಿಂದ ಎದುರಿಸಿದರು. ವಿಕೆಟ್ ಕಳೆದುಕೊಳ್ಳದಂತೆ ಎಚ್ಚರಿಕೆಯಿಂದ ಆಡಿದರಲ್ಲದೆ, ಅವಕಾಶ ಸಿಕ್ಕಾಗಲೆಲ್ಲಾ ಬೌಂಡರಿ– ಸಿಕ್ಸರ್‌ಗಳನ್ನು ಹೊಡೆದು ರನ್‌ರೇಟ್ ಹೆಚ್ಚಿಸಿದರು.

ಭುವನೇಶ್ವರ್ ಬೌಲಿಂಗ್‌ನಲ್ಲಿ ಸಿಕ್ಸರ್ ಹೊಡೆದು, ಕೊಹ್ಲಿ ಶತಕ ಪೂರೈಸಿದರು. ಈ ಐಪಿಎಲ್ ಋತುವಿನಲ್ಲಿ ಅತಿದೊಡ್ಡ ಜತೆಯಾಟ ಆಡಿದ ಬಳಿಕ ಕೊಹ್ಲಿ ಮತ್ತು ಡುಪ್ಲೆಸಿ ಔಟಾದರು. ಗ್ಲೆನ್ ಮ್ಯಾಕ್ಸ್‌ವೆಲ್ ಹಾಗೂ ಮಿಚೆಲ್ ಬ್ರೇಸ್‌ವೆಲ್ ತಂಡವನ್ನು ಜಯದತ್ತ ಮುನ್ನಡೆಸಿದರು.

ಕ್ಲಾಸನ್ ಶತಕ: ಟಾಸ್ ಗೆದ್ದ ಬೆಂಗಳೂರು ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸನ್‌ರೈಸರ್ಸ್ ತಂಡವು ಆರಂಭದಲ್ಲಿಯೇ ಆಘಾತ ಅನುಭವಿಸಿತು. ಆರ್‌ಸಿಬಿಯ ಆಫ್‌ಸ್ಪಿನ್ನರ್ ಮಿಚೆಲ್ ಬ್ರೇಸ್‌ವೆಲ್ ಅವರು ಇನಿಂಗ್ಸ್‌ನ ಐದನೇ ಓವರ್‌ನಲ್ಲಿ ಅಭಿಷೇಕ್ ಶರ್ಮಾ ಹಾಗೂ ರಾಹುಲ್ ತ್ರಿಪಾಠಿ ಅವರ ವಿಕೆಟ್ ಗಳಿಸಿದರು.

ಈ ಹಂತದಲ್ಲಿ ಕ್ರೀಸ್‌ನಲ್ಲಿದ್ದ ನಾಯಕ ಏಡನ್ ಮರ್ಕರಂ ಜೊತೆಗೂಡಿದ ದಕ್ಷಿಣ ಆಫ್ರಿಕಾದ ಕ್ಲಾಸನ್ ಬೀಸಾಟವಾಡಿದರು. ಮರ್ಕರಂ 20 ಎಸೆತಗಳಲ್ಲಿ 18 ರನ್ ಮಾತ್ರ ಗಳಿಸಿದರು. ಆದರೆ ಇನ್ನೊಂದು ಬದಿಯಲ್ಲಿ ಕ್ಲಾಸನ್ ಪಟಪಟನೆ ರನ್ ಗಳಿಸಿದರು. ಮೂರನೇ ವಿಕೆಟ್ ಜೊತೆಯಾಟದಲ್ಲಿ 76 ರನ್ ಸೇರಿಸಿದರು. ಇದರಲ್ಲಿ ಕ್ಲಾಸನ್ ಪಾಲು 58 ರನ್‌ಗಳು.

13ನೇ ಓವರ್‌ನಲ್ಲಿ ಮರ್ಕರಂ ಅವರನ್ನು ಶಾಬಾಜ್ ಅಹಮದ್ ಕ್ಲೀನ್‌ಬೌಲ್ಡ್ ಮಾಡಿದರು. ಆದರೆ ಕ್ಲಾಸನ್ ಮಾತ್ರ ತಮ್ಮ ಬಿರುಸಿನ ಆಟ ಮುಂದುವರಿಸಿದರು. ಪುಲ್ ಮತ್ತು ಡ್ರೈವ್‌ಗಳ ಮೂಲಕ ರನ್ ಗಳಿಸಿದರು.

49 ಎಸೆತಗಳಲ್ಲಿ ಶತಕದ ಗಡಿ ಮುಟ್ಟಿದರು. ಅವರು ಬ್ರೂಕ್ ಜೊತೆಗೆ 74 ರನ್‌ಗಳನ್ನು ಸೇರಿಸಿದರು. ಇದರಿಂದಾಗಿ ತಂಡದ ಮೊತ್ತವು ಹೆಚ್ಚಿತು.

ಗೇಲ್ ದಾಖಲೆ ಸರಿಗಟ್ಟಿದ ಕೊಹ್ಲಿ

ವಿರಾಟ್ ಕೊಹ್ಲಿ ಅವರು ಐಪಿಎಲ್‌ನಲ್ಲಿ ಆರನೇ ಶತಕ ಗಳಿಸಿ, ಕ್ರಿಸ್ ಗೇಲ್ ಅವರ ದಾಖಲೆ ಸರಿಗಟ್ಟಿದರು. ಈ ಹಿಂದೆ ಆರ್‌ಸಿಬಿ ತಂಡದಲ್ಲಿದ್ದ ಗೇಲ್ ಆರು ಶತಕ ಹೊಡೆದಿದ್ದಾರೆ. ಕೊಹ್ಲಿ ಅವರು 50 ಅರ್ಧಶತಕಗಳನ್ನೂ ಗಳಿಸಿದ್ದಾರೆ.



ಫಫ್ ಡುಪ್ಲೆಸಿ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	13	9	4	0	18	0.835
ಚೆನ್ನೈ	13	7	5	1	15	0.381
ಲಖನೌ	13	7	5	1	15	0.304
ಬೆಂಗಳೂರು	13	7	6	0	14	0.180
ಮುಂಬೈ	13	7	6	0	14	-0.128
ರಾಜಸ್ಥಾನ	13	6	7	0	12	0.140
ಕೋಲ್ಕತ್ತ	13	6	7	0	12	-0.256
ಪಂಜಾಬ್	13	6	7	0	12	-0.308
ಡೆಲ್ಲಿ	13	5	8	0	10	-0.572
ಹೈದರಾಬಾದ್	13	4	9	0	8	-0.558

ಗುರುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	23

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	702

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್ 5ಕ್ಕೆ186 (20 ಓವರ್‌ಗಳಲ್ಲಿ)

ಅಭಿಷೇಕ್ ಸಿ ಲೊಮ್ರೊರ್ ಬಿ ಬ್ರೇಸ್‌ವೆಲ್ 11 (14ಎ, 4X2).
ತ್ರಿಪಾಠಿ ಸಿ ಹರ್ಷಲ್ ಬಿ ಬ್ರೇಸ್‌ವೆಲ್ 15 (12ಎ, 4X2, 6X1)
ಮರ್ಕರಂ ಬಿ ಶಹಬಾಜ್ 18 (20ಎ)
ಕ್ಲಾಸನ್ ಬಿ ಹರ್ಷಲ್ 104 (51ಎ, 4X8, 6X6)
ಹ್ಯಾರಿ ಔಟಾಗದೆ 27 (19ಎ, 4X2, 6X1)
ಗ್ಲೆನ್ ಸಿ ಪಾರ್ನೆಲ್ ಬಿ ಸಿರಾಜ್ 5 (4ಎ, 4X1) **ಇತರೆ:** 6 (ಬೈ 1, ವೈಡ್ 5)
ವಿಕೆಟ್ ಪತನ: 1–27(ಅಭಿಷೇಕ್ ಶರ್ಮಾ; 4.1), 2–28 (ರಾಹುಲ್ ತ್ರಿಪಾಠಿ; 4.3), 3–104 (ಏಡನ್ ಮರ್ಕರಂ; 12.5), 4–178 (ಹೆನ್ರಿಚ್ ಕ್ಲಾಸನ್; 18.5), 5–186 (ಗ್ಲೆನ್ ಫಿಲಿಪ್ಸ್; 19.6)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–17–1, ವೇಯ್ನ್ ಪಾರ್ನೆಲ್ 4–0–35–0, ಮಿಚೆಲ್ ಬ್ರೇಸ್‌ವೆಲ್ 2–0–13–2, ಶಹಬಾಜ್ ಅಹಮದ್ 3–0–38–1, ಹರ್ಷಲ್ ಪಟೇಲ್ 4–0–37–1, ಕರಣ್ ಶರ್ಮಾ 3–0–45–0

ರಾಯಲ್ ಚಾಲೆಂಜರ್ಸ್ ಬೆಂಗಳೂರು 2ಕ್ಕೆ 187 (19.2 ಓವರ್‌ಗಳಲ್ಲಿ)

ವಿರಾಟ್ ಕೊಹ್ಲಿ ಸಿ ಫಿಲಿಪ್ಸ್ ಬಿ ಭುವನೇಶ್ವರ್ 100 (63 ಎ., 4X12, 6X4)
ಡುಪ್ಲೆಸಿ ಸಿ ತ್ರಿಪಾಠಿ ಬಿ ನಟರಾಜನ್ 71 (47 ಎ., 4X7, 6X2)
ಮ್ಯಾಕ್ಸ್‌ವೆಲ್ ಔಟಾಗದೆ 5 (3 ಎ., 4X1)
ಬ್ರೇಸ್‌ವೆಲ್ ಔಟಾಗದೆ 4 (4 ಎ)
ಇತರೆ: 7 (ಬೈ 2, ನೋಬಾಲ್ 1, ವೈಡ್ 4)
ವಿಕೆಟ್ ಪತನ: 1–172 (ವಿರಾಟ್ ಕೊಹ್ಲಿ; 17.5), 2–177 (ಫಫ್ ಡುಪ್ಲೆಸಿ; 18.2)
ಬೌಲಿಂಗ್: ಭುವನೇಶ್ವರ್ ಕುಮಾರ್ 4–0–48–1, ಅಭಿಷೇಕ್ ಶರ್ಮಾ 3–0–28–0, ಟಿ.ನಟರಾಜನ್ 4–0–34–1, ಕಾರ್ತಿಕ್ ತ್ಯಾಗಿ 1.2–0–21–0, ನಿತೀಶ್ ಕುಮಾರ್ ರೆಡ್ಡಿ 2–0–19–0, ಮಯಂಕ್ ದಾಗರ್ 4–0–25–0, ಗ್ಲೆನ್ ಫಿಲಿಪ್ಸ್ 1–0–10–0

ಒತ್ತಡದಲ್ಲಿ ರಾಯಲ್ಸ್–ಕಿಂಗ್ಸ್

ಸಂಜು ಸ್ಯಾಮ್ಸನ್–ಶಿಖರ್ ಪಡೆಗಳ ಹಣಾಹಣಿ ಇಂದು

ಧರ್ಮಶಾಲಾ (ಪಿಟಿಐ): ಪ್ರತಿಷ್ಠಿತ ಆಟಗಾರರ ದಂಡು ರಾಜಸ್ತಾನ ರಾಯಲ್ಸ್ ತಂಡವು ಶುಕ್ರವಾರ ಪಂಜಾಬ್ ಕಿಂಗ್ಸ್ ಎದುರು ಕಣಕ್ಕಿಳಿಯಲಿದೆ.

ಉಭಯ ತಂಡಗಳಿಗೂ ಈ ಪಂದ್ಯವು ಲೀಗ್ ಹಂತದಲ್ಲಿ ಕೊನೆಯದ್ದಾಗಿದೆ. ಅಲ್ಲದೇ ಜಯಿಸುವ ಒತ್ತಡವೂ ಇದೆ. ಪ್ಲೇಆಫ್ ಪ್ರವೇಶಿಸಲು ಉಭಯ ತಂಡಗಳಿಗೂ ಈ ಜಯ ಅಗತ್ಯ. ಆದರೆ ನಿವ್ವಳ ರನ್ ರೇಟ್‌ನಲ್ಲಿ ಉತ್ತಮವಾಗಿರುವ ರಾಜಸ್ತಾನ ತಂಡವು ಗೆದ್ದರೆ ಪ್ಲೇ ಆಫ್ ಅವಕಾಶ ಹೆಚ್ಚು. ಆದರೂ ಇಬ್ಬರಲ್ಲಿ ಯಾರೇ ಗೆದ್ದರೂ ನಂತರದ ಪಂದ್ಯಗಳಲ್ಲಿ ಬರುವ ಫಲಿತಾಂಶದ ಲೆಕ್ಕಾಚಾರದವರೆಗೂ ಕಾಯುವುದು ಅನಿವಾರ್ಯ.

ಆತಿಥೇಯ ಪಂಜಾಬ್ ತಂಡವು ಜಯಿಸಬೇಕೆಂದರೆ ಈ ಹಿಂದಿನ ಪಂದ್ಯಗಳಲ್ಲಿ ಮಾಡಿರುವ ಲೋಪಗಳನ್ನು ಸುಧಾರಿಸಿಕೊಳ್ಳುವುದು ಅನಿವಾರ್ಯ. ಪ್ರಮುಖವಾಗಿ ವೇಗದ ಬೌಲರ್‌ಗಳು ಪವರ್‌ಪ್ಲೇ ಹಾಗೂ ಅಂತಿಮ ಘಟ್ಟದ ಓವರ್‌ಗಳಲ್ಲಿ ಹೆಚ್ಚು ರನ್‌ಗಳನ್ನು ಬಿಟ್ಟುಕೊಟ್ಟಿರುವುದು ಸೋಲುಗಳಿಗೆ ಕಾರಣವಾಗಿದೆ. ಕಗಿಸೊ ರಬಾಡ, ಸ್ಯಾಮ್ ಕರನ್ ಹಾಗೂ ಅರ್ಷದೀಪ್ ಸಿಂಗ್ ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕ ಬೌಲಿಂಗ್ ಮಾಡುವುದು ಮಹತ್ವದ್ದಾಗಿದೆ.

ಬುಧವಾರ ಇದೇ ಕ್ರೀಡಾಂಗಣದಲ್ಲಿ ನಡೆದಿದ್ದ ಪಂದ್ಯದಲ್ಲಿ ಕಗಿಸೊ ಹಾಗೂ ಅರ್ಷದೀಪ್ ಅವರು ಬಹಳಷ್ಟು ರನ್‌ಗಳನ್ನು ಬಿಟ್ಟುಕೊಟ್ಟಿದ್ದರು. ನಾಯಕ ಶಿಖರ್ ಧವನ್ ಅವರಿಗೆ ಬೌಲಿಂಗ್ ಸಂಯೋಜನೆ ಮಾಡುವುದು ಕೂಡ ಸವಾಲಿನ ಕಾರ್ಯವಾಗಿದೆ.

ರಾಜಸ್ತಾನ ತಂಡದ ಬ್ಯಾಟಿಂಗ್ ಪಡೆ ಶಕ್ತಿಶಾಲಿಯಾಗಿದೆ. ರನ್‌ಗಳ ಹೊಳೆ ಹರಿಸುತ್ತಿರುವ ಯಶಸ್ವಿ ಜೈಸ್ವಾಲ್, ಜೋಸ್ ಬಟ್ಲರ್, ನಾಯಕ ಸಂಜು ಸ್ಯಾಮ್ಸನ್ ಮತ್ತು ಶಿಮ್ರಾನ್ ಹೆಟ್ಮೆಯರ್ ಅವರನ್ನು ಕಟ್ಟಿಹಾಕಿದರೆ ಮುಂದಿನ ಹಾದಿ ಸರಳ. ತಂಡದ ಬೌಲಿಂಗ್ ಕೂಡ ಉತ್ತಮವಾಗಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್


ಹೆತ್ತವರ ಪ್ರೋತ್ಸಾಹವೇ ನನಗೆ ಶಕ್ತಿ: ಸಾನ್ಯಾ

ಬೆಂಗಳೂರು: 'ನಾನಿರುವುದು ಏನೇ ಇದ್ದರೂ ಕುಟುಂಬದ ತ್ಯಾಗದಿಂದ ಮಾತ್ರ. ನನ್ನನ್ನು ತರಬೇತುದಾರರಾಗಿದ್ದರು. ಮನೆಯ ಗ್ಯಾರೇಜ್‌ನ್ನೇ ಜಿಮ್ನಾಷಿಯಂ ಆಗಿ ಪರಿವರ್ತಿಸಿದರು. ನಾನು ವಿಶ್ವದಾಖಲೆ ಮಾಡಬಲ್ಲೆ ಎಂದು ಹೇಳಿದವರು ಅಪ್ಪ. ಅವರ ಪ್ರೋತ್ಸಾಹವೇ ಶಕ್ತಿ ತುಂಬಿದ್ದು ಸುಳ್ಳಲ್ಲ'–

ಒಲಿಂಪಿಕ್ ಪದಕವಿಜೇತ ಅಥ್ಲೀಟ್ ಸಾನ್ಯಾ ರಿಚರ್ಡ್ಸ್–ರಾಸ್ ಅವರು ನೆನಪಿನಂಗಳಕ್ಕೆ ಜಾರಿದ್ದರು. ಭಾನುವಾರ ಉದ್ಯಾನನಗರಿಯಲ್ಲಿ ನಡೆಯಲಿರುವ ಟಿಸಿಎಸ್ ವಿಶ್ವ ಟೆನ್ ಕೆ ಓಟದ ರಾಯಭಾರಿಯಾಗಿರುವ ಅವರು ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದರು. ತಮ್ಮ ಜೀವನದ ಯಶೋಗಾಥೆಯನ್ನು ಬಿಚ್ಚಿಟ್ಟರು. ಜಮೈಕಾದಲ್ಲಿ ಜನಿಸಿ ಅಮೆರಿಕದಲ್ಲಿ ಬೆಳೆದವರು ಸಾನ್ಯಾ. ಮಹಿಳೆಯರ 400 ಮೀಟರ್ಸ್ ಓಟ ಹಾಗೂ 4X400 ಮೀಟರ್ಸ್ ರಿಲೇಯಲ್ಲಿ ಮಿಂಚಿದವರು. ಮೂರು ಒಲಿಂಪಿಕ್ಸ್‌ಗಳಲ್ಲಿ ಚಿನ್ನ ಗೆದ್ದವರು. ಸದ್ಯ 38 ವರ್ಷದ ಸಾನ್ಯಾ ಲೇಖಕಿ ಹಾಗೂ ಉದ್ಯಮಿಯಾಗಿ ಗುರುತಿಸಿಕೊಂಡಿದ್ದಾರೆ.

'ನಾನು ಈ ಹಿಂದೆ 10 ಕೆ ರನ್ ಓಡಿಲ್ಲ. ಆದರೆ ಕಳೆದ ವರ್ಷ ನನ್ನ ಮೊದಲ ಬಾರಿ 5 ಕೆ ಓಟದಲ್ಲಿ ಪಾಲ್ಗೊಂಡಿದ್ದೆ. ನಾನು ನಿಜವಾಗಿಯೂ 800 ಮೀಟರ್ಸ್ ಮೀರಿ ಓಡಬಲ್ಲೆ ಎಂದು ಭಾವಿಸಿರಲಿಲ್ಲ, ಆದರೆ ನಾನು ಭಾಗವಹಿಸಿದಾಗ, ನನ್ನ ಜೀವನದ ಅತ್ಯಂತ ಅದ್ಭುತ ಅನುಭವ ಲಭಿಸಿತು. ಸಮುದಾಯದೊಂದಿಗೆ ಓಡುವುದು ಮತ್ತು ಪರಸ್ಪರ ಪ್ರೋತ್ಸಾಹಿಸುವುದರಲ್ಲಿ ವಿಶೇಷ ಅನುಭವವಿದೆ' ಎಂದರು.

'ಭಾರತದಲ್ಲಿ ಓಟದ ಬೆಳವಣಿಗೆಯನ್ನು ನೋಡಲು, ಟಿಸಿಎಸ್ ವರ್ಲ್ಡ್ 10 ಕೆ ಬೆಂಗಳೂರು ಸ್ಪರ್ಧೆಯಲ್ಲಿ 27 ಸಾವಿರಕ್ಕೂ ಹೆಚ್ಚು ಸ್ಪರ್ಧಿಗಳು ನೋಂದಾಯಿಸಿರುವುದನ್ನು ಕೇಳಲು ಹಿತವೆನಿಸಿತು' ಎಂದರು.



ಸಾನ್ಯಾ ರಿಚರ್ಡ್ಸ್

ಬಿಟಿಸಿಯಲ್ಲಿ ನಾಳೆಯಿಂದ ಬೇಸಿಗೆ ರೇಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಬೆಂಗಳೂರು ಟರ್ಫ್ ಕ್ಲಬ್ ಆಶ್ರಯದಲ್ಲಿ ಇದೇ 20ರಿಂದ ಆಗಸ್ಟ್ 4ರವರೆಗೆ ಬೇಸಿಗೆ ರೇಸ್‌ಗಳು ಆಯೋಜನೆಗೊಳ್ಳಲಿವೆ. ಪ್ರತಿಷ್ಠಿತ ಬೇಸಿಗೆ ಡರ್ಬಿ ರೇಸ್ ಜುಲೈ 16ರಂದು ನಡೆಯಲಿದೆ.

ಈ ಋತುವಿನಲ್ಲಿ ಒಟ್ಟು 24 ರೇಸ್ ದಿನಗಳನ್ನು ಏರ್ಪಡಿಸಲಾಗಿದೆ. 2022ನೇ ಸಾಲಿನ ಬೆಂಗಳೂರು ಬೇಸಿಗೆ ರೇಸ್‌ಗಳಲ್ಲಿ ಒಟ್ಟು ₹ 14.41 ಕೋಟಿಗಳನ್ನು ವಿನಿಯೋಗಿಸಲಾಗಿತ್ತು. ಪ್ರಸಕ್ತ ಋತುವಿನಲ್ಲಿ ಬಹುಮಾನದ ಮೊತ್ತವು ₹ 18.4 ಕೋಟಿಗೆ ಏರಿಕೆಯಾಗಲಿದೆ ಎಂದು ಬೆಂಗಳೂರು ಟರ್ಫ್ ಕ್ಲಬ್ ಲಿಮಿಟೆಡ್ ಚೇರ್ಮನ್ ಮತ್ತು ಸೀನಿಯರ್ ಸ್ಟಿವರ್ಡ್ ಶಿವಕುಮಾರ್ ಖೇಣಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಬೆಂಗಳೂರು ಬೇಸಿಗೆ ಡರ್ಬಿ ಗ್ರೇಡ್‌–1 ರೇಸ್ ಆಗಿದೆ. ಈ ರೇಸ್‌ಗೆ ಒಟ್ಟು ₹ 2 ಕೋಟಿ ಬಹುಮಾನ ಮೊತ್ತವನ್ನು ನೀಡುವ ಭರವಸೆ ನೀಡಿದ್ದಾರೆ. ಫಿಲ್ಲೀಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್ ಮತ್ತು ಕೋಲ್ಟ್ಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್‌ಗಳ ರೇಸ್‌ಗಳ ಒಟ್ಟು ಬಹುಮಾನ ಮೊತ್ತವು ತಲಾ ₹ 50 ಲಕ್ಷಗಳಾಗಿವೆ' ಎಂದು ತಿಳಿಸಿದರು.

ಸುಮಾರು 50 ಟ್ರೈನರ್‌ಗಳು ಹಾಗೂ 100 ಜಾಕಿಗಳು ಭಾಗವಹಿಸುವ ನಿರೀಕ್ಷೆ ಇದೆ.

ಒಟ್ಟು 742 ಕುದುರೆಗಳು ಸ್ಪರ್ಧಿಸುವ ನಿರೀಕ್ಷೆ ಇದೆ. ಇದರಲ್ಲಿ 165 ಕುದುರೆಗಳು ಮುಂಬೈ, ಹೈದರಾಬಾದ್, ಕೋಲ್ಕತ್ತ ಮತ್ತು ಚೆನ್ನೈನಿಂದ ಬಂದಿವೆ. ಹೋದ ವರ್ಷದ ಬೇಸಿಗೆ ರೇಸ್‌ನಲ್ಲಿ 562 ಕುದುರೆಗಳು ಸ್ಪರ್ಧಿಸಿದ್ದವು.

ಚಲನಚಿತ್ರ ಪ್ರದರ್ಶನ ನಿಷೇಧಿಸಿದ್ದ ಮಮತಾ ಬ್ಯಾನರ್ಜಿ ನೇತೃತ್ವದ ಪಶ್ಚಿಮ ಬಂಗಾಳ ಸರ್ಕಾರ

'ದಿ ಕೇರಳ ಸ್ಟೋರಿ': ನಿಷೇಧ ತೆರವುಗೊಳಿಸಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ಬಂಗಾಳ ಸರ್ಕಾರವು 'ದಿ ಕೇರಳ ಸ್ಟೋರಿ' ಚಲನಚಿತ್ರ ಪ್ರದರ್ಶನದ ಮೇಲೆ ಹೇರಿದ್ದ ನಿಷೇಧವನ್ನು ಸುಪ್ರೀಂ ಕೋರ್ಟ್ ಗುರುವಾರ ತೆರವುಗೊಳಿಸಿದೆ.

ಇದೇ ವೇಳೆ, 'ಚಿತ್ರ ಪ್ರದರ್ಶನವನ್ನು ನಿರ್ಬಂಧಿಸುವ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳಬೇಡಿ ಎಂದು ತಮಿಳುನಾಡು ಸರ್ಕಾರಕ್ಕೆ ನಿರ್ದೇಶಿಸಿದ ನ್ಯಾಯಪೀಠ, 'ಸಿನಿ ಪ್ರಿಯರ ಸುರಕ್ಷತೆಯ ದೃಷ್ಟಿಯಿಂದ ರಾಜ್ಯದ ಎಲ್ಲಾ ಚಿತ್ರಮಂದಿರಗಳಲ್ಲಿಯೂ ಅಗತ್ಯ ಭದ್ರತೆ ಕಲ್ಪಿಸಿ' ಎಂದೂ ತಾಕೀತು ಮಾಡಿದೆ.

ಪಶ್ಚಿಮ ಬಂಗಾಳ ಸರ್ಕಾರದ ಆದೇಶ ಹಾಗೂ ಭದ್ರತೆಯ ಕಾರಣ ನೀಡಿ ಚಿತ್ರ ಪ್ರದರ್ಶನ ಸ್ಥಗಿತಗೊಳಿಸಲು ಮುಂದಾಗಿದ್ದ ತಮಿಳುನಾಡಿನ ಚಲನಚಿತ್ರ ಮಂದಿರಗಳ ಮಾಲೀಕರ ನಿಲುವನ್ನು ಪ್ರಶ್ನಿಸಿ ಚಿತ್ರ ನಿರ್ಮಾಣ ಸಂಸ್ಥೆ 'ಸನ್‌ಸೈನ್ ಪಿಕ್ಚರ್ಸ್' ಪ್ರೈವೇಟ್ ಲಿಮಿಟೆಡ್ ಅರ್ಜಿ ಸಲ್ಲಿಸಿತ್ತು.



ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಜೆ.ಬಿ.ಪಾರ್ದಿವಾಲಾ ಅವರಿದ್ದ ನ್ಯಾಯಪೀಠವು ಇವುಗಳ ವಿಚಾರಣೆ ನಡೆಸಿತು.

'ಕಾರ್ಟೂನ್ ಅಥವಾ ಕ್ರೀಡೆಗಳನ್ನು ಹೊರತುಪಡಿಸಿ ಎಲ್ಲಾ ಚಲನಚಿತ್ರಗಳನ್ನು ನಿರ್ದಿಷ್ಟ ವರ್ಗದ ಜನ ವಿರೋಧಿಸುತ್ತಾರೆ. ರಾಜ್ಯದಲ್ಲಿ ಚಿತ್ರ ಪ್ರದರ್ಶನ ನಿಷೇಧಿಸಿರುವುದಕ್ಕೆ ಸಮರ್ಪಕ ಕಾರಣಗಳಿಲ್ಲ. ಚಿತ್ರವು ದೇಶದಾದ್ಯಂತ ಪ್ರದರ್ಶನ ಕಾಣುತ್ತಿದೆ. ಹೀಗಿರುವಾಗ ನೀವು ಮಾತ್ರ ರಾಜ್ಯದೆಲ್ಲೆಡೆ ಚಿತ್ರ ಪ್ರದರ್ಶನದ ಮೇಲೆ ನಿಷೇಧ ಹೇರಿದ್ದು ಹೇಗೆ' ಎಂದು ನ್ಯಾಯಪೀಠವು ಪಶ್ಚಿಮ ಬಂಗಾಳ ಸರ್ಕಾರವನ್ನು ಪ್ರಶ್ನಿಸಿತು.

'ಹಿಂದೂ ಮತ್ತು ಕ್ರಿಶ್ಚಿಯನ್ ಸಮುದಾಯಗಳಿಗೆ ಸೇರಿದ 32 ಸಾವಿರ ಮಂದಿ ಯುವತಿಯರು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡಿದ್ದಾರೆ ಎಂದು ಚಿತ್ರದಲ್ಲಿ ಬಿಂಬಿಸಲಾಗಿದೆ. ವಿವಾದವನ್ನು ತಣ್ಣಗಾಗಿಸುವ ಉದ್ದೇಶದಿಂದ ನೀವು ಇದೇ 20ರ ಸಂಜೆ 5 ಗಂಟೆಯೊಳಗೆ ಚಿತ್ರದಲ್ಲಿ ಸೂಚನೆಯೊಂದನ್ನು ಸೇರಿಸಬೇಕು. ಮತಾಂತರಗೊಂಡವರ ಸಂಖ್ಯೆಯನ್ನು ದೃಢೀಕರಿಸುವುದಕ್ಕೆ ಯಾವುದೇ ಅಧಿಕೃತ ದತ್ತಾಂಶಗಳಿಲ್ಲ. ಈ ಚಿತ್ರವು ಕೇವಲ ಕಾಲ್ಪನಿಕ ಎಂಬುದನ್ನು ಅದು ಒಳಗೊಂಡಿರಬೇಕು' ಎಂದು ಚಿತ್ರ ನಿರ್ಮಾಣ ಸಂಸ್ಥೆಗೆ ನಿರ್ದೇಶಿಸಿತು. ಸಂಸ್ಥೆಯ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ಹರೀಶ್ ಸಾಳ್ವೆ ಇದಕ್ಕೆ ಒಪ್ಪಿಗೆ ಸೂಚಿಸಿದರು.

'ಚಿತ್ರವು ಜನರ ಮುಂದೆ ಪ್ರದರ್ಶಿಸಲು ಯೋಗ್ಯವಾಗಿದೆ ಎಂದು ಚಲನಚಿತ್ರ ಪ್ರಮಾಣೀಕರಣ ಮಂಡಳಿ (ಸಿಬಿಎಫ್‌ಸಿ) ಪ್ರಮಾಣ ಪತ್ರ ನೀಡಿದೆ. ಸಿಬಿಎಫ್‌ಸಿಯ ನಿಲುವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ಕುರಿತು ತೀರ್ಮಾನ ಕೈಗೊಳ್ಳುವ ಮುನ್ನ ನಾವು ಚಿತ್ರ ವೀಕ್ಷಿಸುತ್ತೇವೆ. ಜುಲೈ ಎರಡನೇ ವಾರ ಈ ಕುರಿತ ಅರ್ಜಿಗಳ ವಿಚಾರಣೆ ನಡೆಸುತ್ತೇವೆ' ಎಂದು ಪೀಠ ಹೇಳಿತು.

'13 ಮಂದಿ ನೀಡಿರುವ ಮಾಹಿತಿಯ ಆಧಾರದಲ್ಲಿ ಚಿತ್ರ ಪ್ರದರ್ಶನಕ್ಕೆ ನಿಷೇಧ ಹೇರಿರುವುದಾಗಿ ನೀವು ಹೇಳುತ್ತಿದ್ದೀರಿ. ಕಾರ್ಟೂನ್ ಅಥವಾ ಕ್ರೀಡೆ ಬಿಟ್ಟು ಸಿನಿಮಾಗಳ ಬಗ್ಗೆ ಮತ್ತೆ 13 ಮಂದಿಯ ಅಭಿಪ್ರಾಯ ಕೇಳಿದರೂ ಅವರೂ ಕೂಡ ಸಿನಿಮಾಗಳನ್ನು ನಿಷೇಧಿಸಿ ಎಂದೇ ಹೇಳುತ್ತಾರೆ' ಎಂದು ನ್ಯಾಯಪೀಠವು ಪಶ್ಚಿಮ ಬಂಗಾಳ ಪರ ವಕೀಲರಿಗೆ ಹೇಳಿತು.

'ಮಹಾರಾಷ್ಟ್ರದ ಅಕೋಲದಲ್ಲಿ ನಡೆದಿದ್ದ ಹಿಂಸಾಚಾರವನ್ನೇ ಮುಂದಿಟ್ಟುಕೊಂಡು ಪಶ್ಚಿಮ ಬಂಗಾಳ ಸರ್ಕಾರವು ಚಿತ್ರ ಪ್ರದರ್ಶನದ ಮೇಲೆ ನಿಷೇಧ ಹೇರಿದೆ. ಆದರೆ ಮಹಾರಾಷ್ಟ್ರ ಸರ್ಕಾರವು ಚಿತ್ರ ಪ್ರದರ್ಶನದ ಮೇಲೆ ಈವರೆಗೂ ಯಾವುದೇ ನಿರ್ಬಂಧ ವಿಧಿಸಿಲ್ಲ' ಎಂದು ಸಾಳ್ವೆ ಅವರು ವಾದಿಸಿದರು.

ಇದಕ್ಕೆ ಪಶ್ಚಿಮ ಬಂಗಾಳ ಪರ ವಕೀಲ, 'ಚಿತ್ರವು ಪ್ರಚಾರದ ಉದ್ದೇಶವನ್ನು ಒಳಗೊಂಡಿದೆ. ಇದರ ಪ್ರದರ್ಶನಕ್ಕೆ ಅವಕಾಶ ನೀಡಿದರೆ ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆಯ ಸಮಸ್ಯೆ ತಲೆದೋರಬಹುದು' ಎಂದರು.

'ಕೆಟ್ಟ ಸಿನಿಮಾಗಳೇ ಗಲ್ಲಾ ಪೆಟ್ಟಿಗೆಯಲ್ಲಿ ದೊಡ್ಡ ಮಟ್ಟದಲ್ಲಿ ಯಶಸ್ಸು ಗಳಿಸುತ್ತವೆ. ಸಾರ್ವಜನಿಕ ಅಸಹಿಷ್ಣುತೆ ಇದೆ ಎಂಬ ಕಾರಣಕ್ಕೆ ನಾವು ಪ್ರತಿಯೊಂದು ವಿಚಾರದಲ್ಲೂ ಕಾನೂನಿನಡಿ ಕ್ರಮ ಕೈಗೊಳ್ಳಲು ಆಗುವುದಿಲ್ಲ' ಎಂದು ನ್ಯಾಯಪೀಠ ತಿಳಿಸಿತು. ಕೇಂದ್ರ ಸರ್ಕಾರದ ಪರವಾಗಿ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಚಿತ್ರವು ದೇಶದೆಲ್ಲೆಡೆ ಪ್ರದರ್ಶನ ಕಾಣುತ್ತಿದೆ. ಯಾರಿಗೆ ಇಷ್ಟವಿಲ್ಲವೊ ಅಂತಹವರು ಚಿತ್ರ ವೀಕ್ಷಿಸುವುದೇ ಬೇಡ' ಎಂದರು.

'ಸಮಸ್ಯೆಯಾದರೆ ನಮ್ಮನ್ನು ದೂರದಿರಿ'

ಕೋಲ್ಕತ್ತ (ಪಿಟಿಐ): 'ದಿ ಕೇರಳ ಸ್ಟೋರಿ' ಚಲನಚಿತ್ರ ಪ್ರದರ್ಶನದ ನಂತರ ರಾಜ್ಯದಲ್ಲಿ ಸಮಸ್ಯೆಗಳು ತಲೆದೋರಿದರೆ ಅದಕ್ಕಾಗಿ ವಿರೋಧ ಪಕ್ಷಗಳು ಮಮತಾ ಬ್ಯಾನರ್ಜಿ ನೇತೃತ್ವದ ಆಡಳಿತಾರೂಢ ಸರ್ಕಾರವನ್ನು ದೂರಬಾರದು' ಎಂದು ತೃಣಮೂಲ ಕಾಂಗ್ರೆಸ್ (ಟಿಎಂಸಿ) ಗುರುವಾರ ಹೇಳಿದೆ.

'ಸಮುದಾಯಗಳ ನಡುವೆ ಸಂಘರ್ಷ ಏರ್ಪಡುವುದನ್ನು ತಡೆಯುವ ಉದ್ದೇಶದಿಂದ ಚಿತ್ರ ಪ್ರದರ್ಶನದ ಮೇಲೆ ನಿಷೇಧ ಹೇರಲಾಗಿತ್ತು' ಎಂದು ಟಿಎಂಸಿ ಮತ್ತೊಮ್ಮೆ ಪ್ರತಿಪಾದಿಸಿದೆ. 'ಸುಪ್ರೀಂ ಕೋರ್ಟ್ ತೀರ್ಪಿಗೆ ರಾಜ್ಯ ಸರ್ಕಾರ ತಲೆಬಾಗಲಿದೆ. ಇದು ತಮಗೆ ದೊರೆತ ಜಯ ಅಥವಾ ರಾಜ್ಯ ಸರ್ಕಾರಕ್ಕೆ ಆದ ಹಿನ್ನಡೆ ಎಂದು ಬಿಂಬಿಸಲು ವಿರೋಧ ಪಕ್ಷಗಳು ಮುಂದಾಗಬಾರದು' ಎಂದು ಸಚಿವ ಶಶಿ ಪಂಜಾ ಹೇಳಿದ್ದಾರೆ.

ಜೈನ್ ಜಾಮೀನು ಅರ್ಜಿ: ಪ್ರತಿಕ್ರಿಯೆ ಕೇಳಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಡಿ ಬಂಧನಕ್ಕೊಳಗಾಗಿ ಜೈಲು ಸೇರಿರುವ ದೆಹಲಿಯ ಮಾಜಿ ಸಚಿವ ಸತ್ಯೇಂದರ್ ಜೈನ್ ಅವರ ಜಾಮೀನು ಅರ್ಜಿಯ ಸಂಬಂಧ ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಗುರುವಾರ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಸೂಚಿಸಿದೆ.

ನ್ಯಾಯಮೂರ್ತಿಗಳಾದ ಎ.ಎಸ್.ಬೋಪಣ್ಣ ಹಾಗೂ ಹಿಮಾ ಕೊಹ್ಲಿ ಅವರಿದ್ದ ದ್ವಿಸದಸ್ಯ ನ್ಯಾಯಪೀಠವು ಈ ಸಂಬಂಧ ಇ.ಡಿ ಗೆ ನೋಟಿಸ್ ಜಾರಿಗೊಳಿಸಿದೆ.

'ಜೈನ್ ಅವರು ಪರಿಹಾರ ಕೋರಿ ಸುಪ್ರೀಂ ಕೋರ್ಟ್‌ನ ರಜಾಕಾಲದ ಪೀಠದ ಮೊರೆ ಹೋಗಬಹುದು. ಅದಕ್ಕೆ ಅವರು ಸ್ವತಂತ್ರರಿದ್ದಾರೆ' ಎಂದು ನ್ಯಾಯಪೀಠ ಹೇಳಿತು.

ಜೈನ್ ಪರ ವಾದ ಮಂಡಿಸಿದ ವಕೀಲ ಅಭಿಷೇಕ್ ಮನು ಸಿಂಘ್ವಿ, 'ಜೈನ್ ಅವರು ವಿವಿಧ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಈಗಾಗಲೇ 35 ಕೆ.ಜಿ.ದೇಹ ತೂಕ ಕಳೆದುಕೊಂಡಿರುವ ಅವರು ಅಸ್ಥಿಪಂಜರದಂತೆ ಕಾಣುತ್ತಿದ್ದಾರೆ' ಎಂದು ತಿಳಿಸಿದರು.

ಇ.ಡಿ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು ಜಾಮೀನು ಅರ್ಜಿಗೆ ಆಕ್ಷೇಪ ವ್ಯಕ್ತಪಡಿಸಿದರು. 'ಪ್ರಕರಣದಲ್ಲಿ ಈಗಾಗಲೇ ಕೇವಿಯಟ್ ಸಲ್ಲಿಸಲಾಗಿದೆ' ಎಂದರು.

ಈ ವರ್ಷದ ಏಪ್ರಿಲ್ 6ರಂದು ದೆಹಲಿ ಹೈಕೋರ್ಟ್, ಜೈನ್ ಅವರ ಜಾಮೀನು ಅರ್ಜಿ ವಜಾಗೊಳಿಸಿತ್ತು.

ಖಾಲಿದ್ ಜಾಮೀನು ಅರ್ಜಿ: ಅಭಿಪ್ರಾಯ ತಿಳಿಸಲು ಪೊಲೀಸರಿಗೆ ಸೂಚನೆ

ನವದೆಹಲಿ(ಪಿಟಿಐ): 2020ರ ಫೆಬ್ರುವರಿಯಲ್ಲಿ ನಡೆದ ದೆಹಲಿ ಗಲಭೆಗೆ ಸಂಬಂಧಿಸಿದಂತೆ ಜೆಎನ್‌ಯು ಮಾಜಿ ವಿದ್ಯಾರ್ಥಿ ಉಮರ್ ಖಾಲಿದ್ ಸಲ್ಲಿಸಿರುವ ಜಾಮೀನು ಅರ್ಜಿಯ ಬಗ್ಗೆ ಸುಪ್ರೀಂ ಕೋರ್ಟ್, ದೆಹಲಿ ಪೊಲೀಸರ ಅಭಿಪ್ರಾಯ ಕೇಳಿದೆ.

ಗಲಭೆಗೆ ಸಂಚು ರೂಪಿಸಿದ ಆರೋಪದ ಮೇಲೆ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆಯಡಿ ಖಾಲಿದ್ ಅವರನ್ನು ಬಂಧಿಸಲಾಗಿದ್ದು, ಎರಡು ವರ್ಷಗಳಿಂದಲೂ ಆತ ಜೈಲಿನಲ್ಲಿದ್ದಾರೆ.

ಅರ್ಜಿಯ ವಿಚಾರಣೆ ನಡೆಸಿದ ವಿಭಾಗೀಯ ಪೀಠವು, ಆರು ವಾರದೊಳಗೆ ಅಭಿಪ್ರಾಯ ಸಲ್ಲಿಸುವಂತೆ ದೆಹಲಿ ಸರ್ಕಾರಕ್ಕೆ ನೋಟಿಸ್ ನೀಡಿತು. ಖಾಲಿದ್ ಪರ ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್, 'ಗಲಭೆ ನಡೆದ ದಿನದಂದು ಖಾಲಿದ್ ಸ್ಥಳದಲ್ಲಿ ಇರಲಿಲ್ಲ' ಎಂದು ವಾದಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠವು, 'ಈಗ ಪೊಲೀಸರ ಅಭಿಪ್ರಾಯ ಕೇಳಿ ನೋಟಿಸ್ ನೀಡಲಾಗಿದೆ. ರಜೆ ಕಾಲದ ಪೀಠದ ಮುಂದೆಯೂ ಈ ಅರ್ಜಿಯ ವಿಚಾರಣೆಗೆ ಅವಕಾಶ ನೀಡಲಾಗುವುದು' ಎಂದಿತು.

ಇದಕ್ಕೆ ಪ್ರತಿಕ್ರಿಯಿಸಿದ ಸಿಬಲ್, 'ನ್ಯಾಯಾಲಯದ ಬೇಸಿಗೆ ರಜೆ ಅವಧಿಯು ಪೂರ್ಣಗೊಂಡ ಬಳಿಕವೇ ವಿಚಾರಣೆ ಕೈಗೆತ್ತಿಕೊಳ್ಳಬೇಕು' ಎಂದು ಕೋರಿದರು.

ಪೀಠವು ಮೇ 22ರಿಂದ ಜುಲೈ 2ರ ವರೆಗೆ ಸುಪ್ರೀಂ ಕೋರ್ಟ್‌ಗೆ ರಜೆಯಿದ್ದು, ಆ ಬಳಿಕ ಅರ್ಜಿಯ ವಿಚಾರಣೆ ನಡೆಸುವುದಾಗಿ ಹೇಳಿ ಮುಂದೂಡಿತು.

ಜಾತಿ ಸಮೀಕ್ಷೆ: ಆದೇಶಕ್ಕೆ ತಡೆ ನೀಡಲು ನಕಾರ

ನವದೆಹಲಿ (ಪಿಟಿಐ): ಬಿಹಾರ ಸರ್ಕಾರ ನಡೆಸುತ್ತಿರುವ ಜಾತಿ ಸಮೀಕ್ಷೆಯನ್ನು ಸ್ಥಗಿತಗೊಳಿಸಿ ಎಂದ ಪಟ್ನಾ ಹೈಕೋರ್ಟ್ ಆದೇಶಕ್ಕೆ ತಡೆ ನೀಡಲು ಸುಪ್ರೀಂ ಕೋರ್ಟ್ ಗುರುವಾರ ನಿರಾಕರಿಸಿದೆ.

'ಸಮೀಕ್ಷೆಯ ಹೆಸರಿನಲ್ಲಿ ಗಣತಿ ನಡೆಯುತ್ತಿದೆಯೇ ಇಲ್ಲವೇ ಎನ್ನುವುದನ್ನು ಪರೀಕ್ಷಿಸಬೇಕಿದೆ. ಆದ್ದರಿಂದ ಹೈಕೋರ್ಟ್ ನೀಡಿರುವ ಆದೇಶಕ್ಕೆ ಮಧ್ಯಂತರ ತಡೆ ನೀಡುವುದಿಲ್ಲ' ಎಂದು ನ್ಯಾಯಪೀಠವು ಹೇಳಿದೆ.

'ಗೌರವಯುತ ಅಂತ್ಯಸಂಸ್ಕಾರ: ಏಕರೂಪ ನೀತಿ ಅಗತ್ಯ'

ನವದೆಹಲಿ (ಪಿಟಿಐ): ಪಿಡುಗು ಇದ್ದಾಗ ಅಥವಾ ಇಲ್ಲದಿದ್ದಾಗ, ಮೃತದೇಹಗಳ ಅಂತ್ಯಸಂಸ್ಕಾರ ಗೌರವಯುತವಾಗಿ ನೆರವೇರಬೇಕು. ಇದಕ್ಕಾಗಿ, ಏಕರೂಪ ರಾಷ್ಟ್ರೀಯ ನೀತಿಯನ್ನು ರೂಪಿಸುವ ಅಗತ್ಯ ಇದೆ ಎಂದು ಸುಪ್ರೀಂಕೋರ್ಟ್ ಗುರುವಾರ ಹೇಳಿದೆ.

ಅರ್ಜಿ ವಿಚಾರಣೆ ವೇಳೆ ಈ ಅಭಿಪ್ರಾಯ ವ್ಯಕ್ತಪಡಿಸಿದ ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ, ವಿಚಾರಣೆಯನ್ನು ಆಗಸ್ಟ್‌ಗೆ ಮುಂದೂಡಿತು.

ಜ್ಞಾನವಾಪಿ: ಮಸೀದಿ ಪರ ಅರ್ಜಿ ವಿಚಾರಣೆಗೆ ಒಪ್ಪಿಗೆ

ನವದೆಹಲಿ (ಪಿಟಿಐ): ವಾರಾಣಸಿಯ ಜ್ಞಾನವಾಪಿ ಮಸೀದಿ ಸಂಕೀರ್ಣದಲ್ಲಿ ದೊರೆತಿದೆ ಎಂದು ಹೇಳಲಾಗಿರುವ ಶಿವಲಿಂಗವನ್ನು ಕಾರ್ಬನ್ ಡೇಟಿಂಗ್ ಪರೀಕ್ಷೆಗೆ ಒಳಪಡಿಸಲು ಹಾಗೂ ಈ ಕುರಿತು ವೈಜ್ಞಾನಿಕ ಪರಿಶೀಲನೆ ನಡೆಸಲು ಅನುಮತಿ ನೀಡಿರುವ ಅಲಹಾಬಾದ್ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಗುರುವಾರ ಒಪ್ಪಿಗೆ ಸೂಚಿಸಿದೆ.

ಜ್ಞಾನವಾಪಿ ಮಸೀದಿಯ ಆಡಳಿತ ಮಂಡಳಿ ಸಲ್ಲಿಸಿರುವ ಮೇಲ್ಮನವಿಯನ್ನು ಶುಕ್ರವಾರ ವಿಚಾರಣೆಗೆ ಕೈಗೆತ್ತಿಕೊಳ್ಳುವುದಾಗಿ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಜೆ.ಬಿ.ಪಾರ್ದೀವಾಲಾ ಅವರ ತ್ರಿಸದಸ್ಯ ನ್ಯಾಯಪೀಠ ಹೇಳಿದೆ.

ಮಸೀದಿಯ ಆಡಳಿತ ಮಂಡಳಿ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ಹುಜೇಫಾ ಅಹ್ಮದಿ, 'ಮೇಲ್ಮನವಿಯ ವಿಚಾರಣೆ ಬಾಕಿ ಇರುವಾಗಲೇ ಅಲಹಾಬಾದ್ ಹೈಕೋರ್ಟ್ ವೈಜ್ಞಾನಿಕ ಪರಿಶೀಲನೆಗೆ ಆದೇಶಿಸಿದೆ' ಎಂದು ಹೇಳಿದರು.

'ಶಿವಲಿಂಗ'ದ ಕಾಲ ನಿರ್ಣಯಕ್ಕಾಗಿ ಅದನ್ನು ವೈಜ್ಞಾನಿಕ ಪರೀಕ್ಷೆಗೆ ಒಳಪಡಿಸುವಂತೆ ಹೈಕೋರ್ಟ್ ಇದೇ 12ರಂದು ಆದೇಶ ನೀಡಿತ್ತು.

'ಚೀತಾಗಳ ಸ್ಥಳಾಂತರ: ಪರಿಶೀಲಿಸಿ'

ನವದೆಹಲಿ (ಪಿಟಿಐ): ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಎರಡು ತಿಂಗಳೊಳಗೆ ಮೂರು ಚೀತಾಗಳು ಮೃತಪಟ್ಟಿರುವುದರ ಕುರಿತು ಸುಪ್ರೀಂ ಕೋರ್ಟ್ ಗುರುವಾರ ಕಳವಳ ವ್ಯಕ್ತಪಡಿಸಿದೆ.

'ಇಷ್ಟೊಂದು ಚೀತಾಗಳನ್ನು ಕುನೊದಲ್ಲಿ ಇರಿಸುವುದು ಸೂಕ್ತವಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಅವುಗಳ ಹಿತದೃಷ್ಟಿಯಿಂದ ರಾಜಸ್ಥಾನ ಸೇರಿದಂತೆ ಇತರೆ ರಾಷ್ಟ್ರೀಯ ಉದ್ಯಾನಗಳಿಗೆ ಸ್ಥಳಾಂತರಿಸುವ ಬಗ್ಗೆ ಪರಿಶೀಲಿಸಿ. ಈ ವಿಚಾರದಲ್ಲಿ ರಾಜಕಾರಣವನ್ನು ಬದಿಗೊತ್ತಿ' ಎಂದು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಹಾಗೂ ಸಂಜಯ್ ಕರೋಲ್ ಅವರಿದ್ದ ನ್ಯಾಯಪೀಠವು ಕೇಂದ್ರ ಸರ್ಕಾರಕ್ಕೆ ತಿಳಿಸಿದೆ.

ಮಕ್ಕಳ ಹಿತ: ಎನ್‌ಸಿಪಿಸಿಆರ್‌ನಿಂದ ಹೊಸ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಟಿ.ವಿ, ರೇಡಿಯೊ ಕಾರ್ಯಕ್ರಮಗಳು, ಇನ್‌ಸ್ಟಾಗ್ರಾಂ ರೀಲ್ ಅಥವಾ ಕ್ರೀಡಾ ಸ್ಪರ್ಧೆಗಳಲ್ಲಿ ಪಾಲ್ಗೊಳ್ಳುವ ಮಕ್ಕಳು ಅನಗತ್ಯವಾಗಿ ಮಾನಸಿಕ ಅಥವಾ ದೈಹಿಕವಾಗಿ ಬಳಲುವಂತೆ ಮಾಡಿದಲ್ಲಿ, ಈ ಕಾರ್ಯಕ್ರಮ/ಸ್ಪರ್ಧೆ ಆಯೋಜಕರಿಗೆ ಗರಿಷ್ಠ ಮೂರು ವರ್ಷ ಜೈಲು ವಿಧಿಸಲು ಅವಕಾಶ ಇದೆ.

ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವು (ಎನ್‌ಸಿಪಿಸಿಆರ್) ಇದಕ್ಕೆ ಸಂಬಂಧಿಸಿದ ಹೊಸ ಮಾರ್ಗಸೂಚಿಗಳಿಗೆ ಗುರುವಾರ ಅನುಮೋದಿಸಿದೆ. ಚಲನಚಿತ್ರಗಳು, ಟಿ.ವಿ, ರಿಯಾಲಿಟಿ ಶೋಗಳು, ಒಟಿಟಿ ವೇದಿಕೆಗಳು, ಸುದ್ದಿ, ಸಾಮಾಜಿಕ ಮಾಧ್ಯಮಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಭಾಗವಹಿಸುವ ಮಕ್ಕಳ ಹಿತರಕ್ಷಣೆಗಾಗಿ ಈ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರವಾಗುವ ಯಾವುದೇ ಕಾರ್ಯಕ್ರಮವನ್ನು, ಅದರಲ್ಲಿ ಪಾಲ್ಗೊಳ್ಳುವ ಮಕ್ಕಳ ಅನುಮತಿ ಇಲ್ಲದೇ ಸಿದ್ಧಪಡಿಸುವಂತಿಲ್ಲ. ಪ್ರತಿ 3 ಗಂಟೆಗೊಮ್ಮೆ ಭಾಗವಹಿಸುವ ಮಕ್ಕಳಿಗೆ ವಿಶ್ರಾಂತಿ ನೀಡಬೇಕು. 6 ಗಂಟೆಗಳಿಗಿಂತ ಹೆಚ್ಚು ಅವಧಿಗೆ ಅಥವಾ ರಾತ್ರಿ 7ರಿಂದ ಬೆಳಿಗ್ಗೆ 8ರ ವರೆಗಿನ ಅವಧಿಯಲ್ಲಿ ಅವರನ್ನು ಕಾರ್ಯ ನಿರ್ವಹಿಸುವಂತೆ ಮಾಡಬಾರದು ಎಂಬ ಹೊಸ ಮಾರ್ಗಸೂಚಿಗಳನ್ನೂ ಅನುಮೋದಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಚೀನಾ ಹಡಗು ಶೋಧ: ಭಾರತದ 'ಪಿ–8ಐ' ನಿಯೋಜನೆ

ನವದೆಹಲಿ (ಪಿಟಿಐ): ಹಿಂದೂ ಮಹಾಸಾಗರದಲ್ಲಿ ಮಂಗಳವಾರ ಮುಳುಗಿದ್ದ ಚೀನಾದ ಮೀನುಗಾರಿಕಾ ಹಡಗಿನ ಶೋಧ ಮತ್ತು ರಕ್ಷಣಾ ಕಾರ್ಯಾಚರಣೆಗೆ ಭಾರತೀಯ ನೌಕಾಪಡೆಯು ಪಿ–8ಐ ಕಡಲ ಪ್ರದೇಶ ಗಸ್ತು ಯುದ್ಧವಿಮಾನವನ್ನು ನಿಯೋಜಿಸಿದೆ.

ಈ ಕುರಿತು ನೌಕಾಪಡೆಯು ಮಾಹಿತಿ ನೀಡಿದೆ. ಹಿಂದೂ ಮಹಾಸಾಗರದ ದಕ್ಷಿಣ ಭಾಗದಲ್ಲಿ ಮುಳುಗಿರುವ ಚೀನಾದ ಮೀನುಗಾರಿಕಾ ಹಡಗಿನ ಶೋಧ ಕಾರ್ಯಾಚರಣೆಗಾಗಿ ಭಾರತೀಯ ನೌಕಾಪಡೆಯು ಮಾನವೀಯ ನೆಲೆಗಟ್ಟಿನಲ್ಲಿ ಪಿ–8ಐ ಯುದ್ಧವಿಮಾನವನ್ನು ನಿಯೋಜಿಸಿದೆ ಎಂದಿದೆ.

ಶ್ರೀನಗರ: ಜಿ20 ಸಭೆಗೆ ಚೀನಾ, ಟರ್ಕಿ ಬಹಿಷ್ಕಾರ?

ಶ್ರೀನಗರ: ಇಲ್ಲಿ ಮೇ 22ರಿಂದ 25ರ ವರೆಗೆ ನಡೆಯಲಿರುವ ಜಿ20 ಪ್ರವಾಸಿ ಕಾರ್ಯಕಾರಿ ಗುಂಪಿನ ಸಭೆಯಿಂದ ಚೀನಾ ಮತ್ತು ಟರ್ಕಿ ದೂರ ಉಳಿಯುವ ಸಾಧ್ಯತೆ ದಟ್ಟವಾಗಿದೆ.

ಮಾರ್ಚ್‌ನಲ್ಲಿ ಅರುಣಾಚಲ ಪ್ರದೇಶದಲ್ಲಿ ನಡೆದ ಜಿ20 ಸಭೆಯಿಂದಲೂ ಚೀನಾ ಹಿಂದೆ ಸರಿದಿತ್ತು. ಈ ಎರಡು ದೇಶಗಳ ಜೊತೆಗೆ ಒಕ್ಕೂಟದಲ್ಲಿರುವ ಕೆಲವು ರಾಷ್ಟ್ರಗಳು, ಅತಿಥಿ ರಾಷ್ಟ್ರಗಳೂ ಶ್ರೀನಗರದಲ್ಲಿ ನಡೆಯುವ ಸಭೆಯಿಂದ ಹಿಂದೆ ಸರಿಯುವ ಸಾಧ್ಯತೆ ಇದೆ ಎಂದು 'ಪ್ರಜಾವಾಣಿ'ಗೆ ಮೂಲಗಳು ತಿಳಿಸಿವೆ.

ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಮೋದಿ ಚಾಲನೆ

ಪುರಿ/ಹೌರಾ (ಪಿಟಿಐ): ಒಡಿಶಾದ ಮೊದಲ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಆನ್‌ಲೈನ್ ಮೂಲಕ ಗುರುವಾರ ಚಾಲನೆ ನೀಡಿದರು

ಈ ರೈಲು ಒಡಿಶಾದ ಪುರಿ ಮತ್ತು ಪಶ್ಚಿಮ ಬಂಗಾಳದ ಹೌರಾ ನಡುವೆ ಸಂಚರಿಸಲಿದೆ. 500 ಕಿ.ಮೀ ಮಾರ್ಗವನ್ನು ಈ ರೈಲು ಸುಮಾರು 6.5 ತಾಸಿನಲ್ಲಿ ತಲುಪಲಿದೆ. ಇದೇ 20ರಿಂದ ಸೇವೆ ಆರಂಭವಾಗಲಿದೆ.

ಅಂತರರಾಷ್ಟ್ರೀಯ ಸಂಗ್ರಹಾಲಯ ಎಕ್ಸ್‌ಪೊಗೆ ಚಾಲನೆ

ನವದೆಹಲಿ (ಪಿಟಿಐ): ಇಲ್ಲಿಯ ಪ್ರಗತಿ ಮೈದಾನದಲ್ಲಿ ಆಯೋಜಿಸಲಾಗಿರುವ ಮೂರು ದಿನಗಳ 'ಅಂತರರಾಷ್ಟ್ರೀಯ ಸಂಗ್ರಹಾಲಯ ಎಕ್ಸ್‌ಪೊ– 2023'ಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಚಾಲನೆ ನೀಡಿದರು. 'ಕೇಂದ್ರ ಸರ್ಕಾರವು ದೇಶದ ಪರಂಪರೆಯನ್ನು ಸಂರಕ್ಷಿಸಲು ಬದ್ಧವಾಗಿದೆ' ಎಂದು ಹೇಳಿದರು.

ಕರ್ತವ್ಯ ಪಥ, ನಕಾಶೆ ಬಿಡುಗಡೆ: ಇದೇ ವೇಳೆ ಮೋದಿ ಅವರು ಕರ್ತವ್ಯ ಪಥದ ಕುರಿತಾದ ಚಿಕ್ಕ ನಕಾಶೆಯನ್ನು (ಪ್ಯಾಕೆಟ್ ಮ್ಯಾಪ್) ಬಿಡುಗಡೆ ಮಾಡಿದರು.

ಇಂಡಿಯಾ ಗೇಟ್ ಸಂಕೀರ್ಣದಲ್ಲಿ ಇರುವ ವಿವಿಧ ರಾಜ್ಯಗಳಿಗೆ ಸಂಬಂಧಿಸಿದ ಭವನಗಳು ಹಾಗೂ ಐತಿಹಾಸಿಕ ಹಿನ್ನೆಲೆಯುಳ್ಳ ಸಾಂಸ್ಕೃತಿಕ ಸಂಸ್ಥೆಗಳ ಕುರಿತಾದ ಮಾಹಿತಿಯನ್ನು ಇದು ಒಳಗೊಂಡಿರಲಿದೆ.

ವಿಶ್ವಕಪ್ ಆರ್ಚರಿ: ರಿಕರ್ವ್ ವಿಭಾಗದಲ್ಲಿ ಭಾರತಕ್ಕೆ ನಿರಾಸೆ

ಸೆಮಿಫೈನಲ್‌ಗೆ ಅವನೀತ್

ಶಾಂಘೈ (ಪಿಟಿಐ): ಭಾರತ ತಂಡಗಳು ವಿಶ್ವಕಪ್ ಸ್ಟೇಜ್ 2 ಆರ್ಚರಿ ರಿಕರ್ವ್ ವಿಭಾಗದಿಂದಲೂ ನಿರ್ಗಮಿಸಿದವು. ಎಂಟನೇ ಶ್ರೇಯಾಂಕದ ಭಾರತ ಪುರುಷರ ತಂಡ ಕ್ವಾರ್ಟರ್‌ಫೈನಲ್‌ನಲ್ಲಿ ಗುರುವಾರ ಅಗ್ರ ಶ್ರೇಯಾಂಕದ ದಕ್ಷಿಣ ಕೊರಿಯಾ ತಂಡಕ್ಕೆ ಮಣಿಯಿತು.

ಆದರೆ ಕಾಂಪೌಂಡ್ ವೈಯಕ್ತಿಕ ವಿಭಾಗದಲ್ಲಿ ಕೊರಿಯದ ಪ್ರಬಲ ಸ್ಪರ್ಧಿಗಳೆದುರು ಅಮೋಘ ಪ್ರದರ್ಶನ ನೀಡಿದ ಭಾರತದ ಪ್ರಥಮೇಶ್ ಜಾವಕರ್ ಮತ್ತು ಅವನೀತ್ ಕೌರ್ ಸೆಮಿಫೈನಲ್‌ಗೆ ಮುನ್ನಡೆದರು.

19 ವರ್ಷದ ಜಾವಕರ್ 149–148 ರಲ್ಲಿ ಎಂಟನೇ ಶ್ರೇಯಾಂಕದ ಯೋಂಗಿ ಚೊಯ್ (ದಕ್ಷಿಣ ಕೊರಿಯಾ) ಅವರನ್ನು 149–148 ರಿಂದ ಸೋಲಿಸಿದರು. ಅವರ ಮುಂದಿನ ಎದುರಾಳಿ ಎಸ್ಟೋನಿಯಾದ ರಾಬಿಮ್ ಜಾತ್ಮ.



ಅವನೀತ್ ಕೌರ್ –ಎಸ್‌ಎಐ ಮೀಡಿಯಾ ಟ್ವಿಟರ್ ಚಿತ್ರ

18 ವರ್ಷದ ಅವನೀತ್ ಮಹಿಳೆಯರ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ 147–144ರಲ್ಲಿ ಡ್ಯಾಫ್ನೆ ಕ್ವಿಂಟೆರೊ (ಮೆಕ್ಸಿಕೊ) ಮೇಲೆ ಜಯಗಳಿಸಿದರು. ಅವರ ಸೆಮಿಫೈನಲ್ ಎದುರಾಳಿ ಎದುರಾಳಿ ಇಂಗ್ಲೆಂಡ್‌ನ ಇಲ್ಲಾ ಗಿಬ್ಸನ್. .

ಟೀಮ್ ವಿಭಾಗದಲ್ಲಿ ನಿರಾಶೆ: ರಿಕರ್ವ್ ಟೀಮ್ ವಿಭಾಗದಲ್ಲಿ ಧೀರಜ್ ಬೊಮ್ಮದೇವರ, ಅತನು ದಾಸ್ ಮತ್ತು ನೀರಜ್ ಚೌಹಾಣ್ ಅವರನ್ನೊಳಗೊಂಡ ತಂಡ 0–6 (54–55, 56–57, 54–59) ರಿಂದ ಕೊರಿಯಾ ತಂಡದೆದುರು ಸೋಲನುಭವಿಸಿತು. ಭಾರತ ಮೊದಲ ಸುತ್ತಿನಲ್ಲಿ ಚೀನಾ ತೈಪಿ ಮೇಲೆ 5–3ರಲ್ಲಿ ಪ್ರಯಾಸದ ಗೆಲುವು ಪಡೆದಿತ್ತು.

ಸಿಮ್ರನ್‌ಜಿತ್ ಕೌರ್, ಅವನೀತ್ ಕೌರ್ ಮತ್ತು ಅಂಕಿತಾ ಭಕತ್ ಅವರನ್ನು ಒಳಗೊಂಡ ನಾಲ್ಕನೇ ಶ್ರೇಯಾಂಕದ ಭಾರತ ತಂಡ, ಇಂಡೋನೇಷಿಯಾ ವಿರುದ್ಧ ಮೊದಲ ಸುತ್ತಿನಲ್ಲೇ 1–5 ಅಂತರದ ಸೋಲನುಭವಿಸಿತು.

ಪಿಇಎಸ್‌ಸಿಎಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಇಎಸ್‌ಸಿ ತಂಡದವರು ಟೈಗರ್ ಕಪ್ ಕ್ರಿಕೆಟ್ ಟೂರ್ನಿಯ 16 ವರ್ಷದೊಳಗಿನವರ ವಿಭಾಗದ ಪಂದ್ಯದಲ್ಲಿ 61 ರನ್‌ಗಳಿಂದ ಯಂಗ್ ಲಯನ್ಸ್ ತಂಡವನ್ನು ಮಣಿಸಿದರು.

ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಪಿಇಎಸ್‌ಸಿಎ ನಿಗದಿತ 30 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 205 ರನ್ ಗಳಿಸಿತು. ಯಂಗ್ ಲಯನ್ಸ್ 7 ವಿಕೆಟ್‌ಗಳಿಗೆ 144 ರನ್ ಮಾತ್ರ ಕಲೆಹಾಕಿತು.

ಇನ್ನೊಂದು ಪಂದ್ಯದಲ್ಲಿ ಕ್ರೀಡಾಕ್ಷೇತ್ರ ತಂಡ 20 ರನ್‌ಗಳಿಂದ ಇಐಎಸ್‌ಬಿ ಎದುರು ಗೆದ್ದಿತು.

ಸಂಕ್ಷಿಪ್ತ ಸ್ಕೋರ್: ಪಿಇಎಸ್‌ಸಿಎ ಸಿಬಿಟಿ: 30 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 205 (ಆರ್.ಕೆ.ಆದ್ರಿತ್ 92, ಧ್ರುವ್ 49, ದೇವಾಂಶ್ ಜೋಷಿ 24, ಅರ್ಜುನ್ 33ಕ್ಕೆ 2) ಯಂಗ್ ಲಯನ್ಸ್ 30 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 144 (ಕರಣ್ ರಾಘವೇಂದ್ರ 54, ಅರ್ಜುನ್ 31, ಚಿನ್ಮಯ್ 23, ದೇವಾಂಶ್ ಜೋಷಿ 30ಕ್ಕೆ 2) ಫಲಿತಾಂಶ: ಪಿಇಎಸ್‌ಸಿಎಗೆ 61 ರನ್ ಗೆಲುವು


ಕ್ರೀಡಾಕ್ಷೇತ್ರ: 29.2 ಓವರ್‌ಗಳಲ್ಲಿ 198 (ಅಮೋಘ್ ಆರ್.ಶೆಟ್ಟಿ 36, ತೇಜಸ್ ರೆಡ್ಡಿ 36, ರೋನೆಲ್ 32, ಅಶ್ವತ್ 22, ಸರ್ವೇಶ್ 14ಕ್ಕೆ 3, ಅಶ್ವಿನ್ 34ಕ್ಕೆ 2) ಇಐಎಸ್‌ಬಿ 27.2 ಓವರ್‌ಗಳಲ್ಲಿ 178 (ಬಿಲಾಲ್ 69, ಜಯಂತ್ ಶ್ರೀನಿವಾಸ್ 27, ರಿಷಭ್ ಅಡಿಗ 21ಕ್ಕೆ 4, ಯೋಗೇಶ್ 26ಕ್ಕೆ 2, ಆರುಷ್ ಜೈನ್ 34ಕ್ಕೆ 2)

ಫ್ರೆಂಚ್ ಓಪನ್: ಹಿಂದೆ ಸರಿದ ನಡಾಲ್

ಪ್ಯಾರಿಸ್ (ರಾಯಿಟರ್ಸ್): ಹಾಲಿ ಚಾಂಪಿಯನ್ ರಫೆಲ್ ನಡಾಲ್ ಅವರು ಫ್ರೆಂಚ್ ಓಪನ್ ಟೂರ್ನಿಯಿಂದ ಹಿಂದೆಸರಿದಿದ್ದಾರೆ. ಪ್ರಷ್ಠದ ನೋವಿನಿಂದ ಸಂಪೂರ್ಣವಾಗಿ ಗುಣಮುಖರಾಗದ ಕಾರಣ ಸ್ಪೇನ್‌ನ ಆಟಗಾರ ಗುರುವಾರ ಈ ನಿರ್ಧಾರಕ್ಕೆ ಬಂದಿದ್ದಾರೆ. ವೃತ್ತಿಪರ ಟೆನಿಸ್‌ನಲ್ಲಿ 2024 ತಮ್ಮ ಕೊನೆಯ ವರ್ಷವಾಗಬಹುದು ಎಂಬ ಸುಳಿವನ್ನೂ ನೀಡಿದ್ದಾರೆ.

ಪ್ಯಾರಿಸ್‌ನಲ್ಲಿ 2005ರಲ್ಲಿ ಮೊದಲ ಬಾರಿ ಫ್ರೆಂಚ್ ಓಪನ್ ಚಾಂಪಿಯನ್ ಆಗಿದ್ದ ನಡಾಲ್, ನಂತರದ ವರ್ಷಗಳಲ್ಲಿ ಕ್ಲೇ ಕೋರ್ಟ್‌ನಲ್ಲಿ ರಾಜನಾಗಿ ಮೆರೆದಿದ್ದಾರೆ. ದಾಖಲೆ 22 ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಪ್ರಶಸ್ತಿಗಳನ್ನು ಅವರು ಗೆದ್ದುಕೊಂಡಿದ್ದಾರೆ. ಇದರಲ್ಲಿ 14 ಫ್ರೆಂಚ್ ಓಪನ್ ಪ್ರಶಸ್ತಿಗಳು ಸೇರಿವೆ.

‘ಮುಂದಿನ ವರ್ಷದ ವೇಳೆಗೆ ಸಂಪೂರ್ಣ ಗುಣಮುಖನಾಗಿ ಪುನರಾಗಮನ ಮಾಡಲು ಕಾತರನಾಗಿದ್ದೇನೆ. ಆ ವರ್ಷ ವೃತ್ತಿಪರ ಜೀವನದ ಕೊನೆಯ ವರ್ಷವೂ



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಡಾಲ್ –ಎಎಫ್‌ಪಿ ಚಿತ್ರ

ಆಗಬಹುದು ಎಂದುಕೊಂಡಿದ್ದೇನೆ’ ಎಂದು ನಡಾಲ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಈ ವರ್ಷದ ಆರಂಭದಲ್ಲಿ, ಆಸ್ಟ್ರೇಲಿಯನ್ ಓಪನ್ ಟೂರ್ನಿಯ ವೇಳೆ ಅವರು ಗಾಯಾಳಾಗಿದ್ದರು. ನಂತರ ಯಾವುದೇ ಟೂರ್ನಿಯಲ್ಲಿ ಆಡಲಿರಲಿಲ್ಲ.

‘ನನ್ನ ಪುನರಾಗಮನಕ್ಕೆ ದಿನಾಂಕ ನಿರ್ಧರಿಸಿಲ್ಲ. ನನ್ನ ದೇಹ ಹೇಗೆ ಸ್ಪಂದಿಸಲಿದೆ ಎಂದು ನೋಡಬೇಕಿದೆ. ವರ್ಷದ ಕೊನೆಗೆ ಡೇವಿಸ್ ಕಪ್‌ನಲ್ಲಿ ಆಡಲು ಆಗುವುದೇ ಎಂದು ನೋಡುತ್ತೇನೆ’ ಎಂದು ಹೇಳಿದರು.

‘ಆಸ್ಟ್ರೇಲಿಯಾದಲ್ಲಿ ಆದ ಗಾಯದಿಂದ ನಾನು ಎಣಿಸಿದ ರೀತಿಯಲ್ಲಿ ಚೇತರಿಸಿಕೊಂಡಿಲ್ಲ. ನನ್ನ ಗುರಿಗಳನ್ನು ತಲುಪಲಾಗಲಿಲ್ಲ. ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಆಡುವುದು ಈಗ ಅಸಾಧ್ಯ’ ಎಂದರು. ಫ್ರೆಂಚ್ ಓಪನ್ ಮೇ 28ರಂದು ಆರಂಭವಾಗಲಿದೆ.

ಅಥ್ಲೆಟಿಕ್ಸ್: ಯಶಸ್‌ಗೆ ಚಿನ್ನ, ಬೆಳ್ಳಿ ಗೆದ್ದ ಮನು

ರಾಂಚಿ (ಪಿಟಿಐ): ಅಂತರರಾಷ್ಟ್ರೀಯ ಸ್ಪರ್ಧಿ ರೋಹಿತ್ ಯಾದವ್, ಫೆಡರೇಷನ್ ಕಪ್ ಅಥ್ಲೆಟಿಕ್ಸ್‌ನ ಜಾವೆಲಿನ್ ಸ್ಪರ್ಧೆಯಲ್ಲಿ ಸ್ಫೂರ್ತಿಯುತ ಪ್ರದರ್ಶನ ನೀಡಿ ವೈಯಕ್ತಿಕ ಶ್ರೇಷ್ಠ ಸಾಧನೆಯೊಡನೆ ಚಿನ್ನ ಗೆದ್ದುಕೊಂಡರು. ಕರ್ನಾಟಕದ ಮನು ಡಿ.ಪಿ. ಕೂಡ ಉತ್ತಮ ಸಾಧನೆ ತೋರಿ ಬೆಳ್ಳಿಯ ಪದಕ ಗೆದ್ದುಕೊಂಡರು. ಕೊನೆಯ ದಿನವಾದ ಗುರುವಾರ ರಾಜ್ಯದ ಪಿ.ಯಶಸ್ 400 ಮೀ. ಹರ್ಡಲ್ಸ್ ಓಟದಲ್ಲಿ ಚಿನ್ನದ ಪದಕ ಕೊರಳಿಗೆ ಹಾಕಿಕೊಂಡರು.

ಉತ್ತರ ಪ್ರದೇಶದ ರೋಹಿತ್ ಎರಡನೇ ಯತ್ನದಲ್ಲಿ 83.40 ಮೀ. ಸಾಧನೆಯೊಡನೆ ಮೊದಲ ಸ್ಥಾನ ಖಚಿತಪಡಿಸಿಕೊಂಡರು. ಅವರ ಹಿಂದಿನ ಉತ್ತಮ ಸಾಧನೆ 82.54 ಮೀ. ಆಗಿತ್ತು. ಮನು ಕೂಡ ಎರಡನೇ ಯತ್ನದಲ್ಲೇ 82.95 ಮೀ. ದೂರ ಎಸೆದು ಬೆಳ್ಳಿಯ ಪದಕ ಗೆದ್ದುಕೊಂಡರೆ, ಉತ್ತರ ಪ್ರದೇಶದ ಸಚಿನ್ ಯಾದವ್ (80.27 ಮೀ.) ಮೂರನೇ ಸ್ಥಾನ ಪಡೆದು ಅರ್ಹತಾ ಮಾನದಂಡ ದಾಟಿದರು. ಏಷ್ಯನ್ ಚಾಂಪಿಯನ್‌ಷಿಪ್‌ಗೆ 78.23 ಅರ್ಹತಾ ಮಟ್ಟವಾಗಿದೆ.

400 ಮೀ. ಹರ್ಡಲ್ಸ್ ಓಟವನ್ನು ಕರ್ನಾಟಕದ ಯಶಸ್ ಪಿ. 49.40 ಸೆ.ಗಳಲ್ಲಿ ಕ್ರಮಿಸಿ ಅಗ್ರಸ್ಥಾನ ಪಡೆದರು. ಅವರಿಗೆ ಪೈಪೋಟಿ ನೀಡಿದ ತಮಿಳುನಾಡಿನ ಟಿ.ಸಂತೋಷ್ 49.51 ಸೆ. ತೆಗೆದುಕೊಂಡರು. ಇವರಿಬ್ಬರಿಂದಲೂ ಅರ್ಹತಾ ಮಾನದಂಡ (49.75 ಸೆ.) ಮೀರಿದರು.

ಹರ್ಡಲ್ಸ್ ಓಟಗಾರ್ತಿ, ಆಂಧ್ರಪ್ರದೇಶದ ಜ್ಯೋತಿ ಯೆರ್ರಾಜಿ 200 ಮೀ. ಓಟದ ಸ್ಪರ್ಧೆಯನ್ನು 23.42 ಸೆ.ಗಳಲ್ಲಿ ಗೆಲ್ಲುವ ಮೂಲಕ ಎರಡನೇ ಚಿನ್ನ ಗೆದ್ದುಕೊಂಡರು. ಬುಧವಾರ ಅವರು 100 ಮೀ. ಹರ್ಡಲ್ಸ್ ಓಟದಲ್ಲಿ ಅಗ್ರಸ್ಥಾನ ಪಡೆದಿದ್ದರು.

ಧನುಷ್ಕಾ ವಿರುದ್ಧ 3 ದೂರುಗಳು ವಜಾ

ಸಿಡ್ನಿ (ಪಿಟಿಐ): ಶ್ರೀಲಂಕಾದ ಕ್ರಿಕೆಟಿಗ ಧನುಷ್ಕಾ ಗುಣತಿಲಕ ಅವರ ವಿರುದ್ಧ ದಾಖಲಾಗಿದ್ದ ನಾಲ್ಕು ಲೈಂಗಿಕ ದೌರ್ಜನ್ಯ ಪ್ರಕರಣಗಳ ಪೈಕಿ ಮೂರು ದೂರುಗಳನ್ನು ಕೈಬಿಡಲಾಗಿದೆ.

ಹೋದ ವರ್ಷ ಆಸ್ಟ್ರೇಲಿಯಾದಲ್ಲಿ ಟಿ20 ವಿಶ್ವಕಪ್ ಟೂರ್ನಿ ನಡೆದ ಸಂದರ್ಭದಲ್ಲಿ ಶ್ರೀಲಂಕಾ ತಂಡ ಉಳಿದುಕೊಂಡಿದ್ದ ಹೋಟೆಲ್‌ನಿಂದ ಧನುಷ್ಕಾ ಅವರನ್ನು ಪೊಲೀಸರು ಬಂಧಿಸಿದ್ದರು.

‘ಧನುಷ್ಕಾ ಅವರು ಡೇಟಿಂಗ್ ಆ್ಯಪ್ ಮೂಲಕ 29 ವರ್ಷದ ಮಹಿಳೆಯೊಬ್ಬರನ್ನು ಪರಿಚಯಿಸಿಕೊಂಡಿದ್ದರು. ಹೋಟೆಲ್‌ನಲ್ಲಿ ಅವರು ಜೊತೆಗೂಡಿದ್ದರು. ನಂತರ ಮಹಿಳೆಯೊಂದಿಗೆ ಆಕೆಯ ಮನೆಗೂ ಧನುಷ್ಕಾ ತೆರಳಿದ್ದರು. ಆ ಸಂದರ್ಭದಲ್ಲಿ ಬಲಾತ್ಕಾರ ಮಾಡಿರುವುದಾಗಿ ಧನುಷ್ಕಾ ವಿರುದ್ಧ ಮಹಿಳೆ ದೂರು ದಾಖಲಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದರು. ತಮ್ಮ ಮೇಲೆ ನಾಲ್ಕು ಬಾರಿ ಬಲಾತ್ಕಾರ ಎಸಗಿದ್ದಾರೆಂದು ಮಹಿಳೆ ಆರೋಪಿಸಿದ್ದರು.

ವಿಟಿಯು ಅಂತರ ಕಾಲೇಜು ಅಥ್ಲೆಟಿಕ್ 21ರಿಂದ

ಬೆಳಗಾವಿ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ದ ಮೈದಾನದಲ್ಲಿ ಮೇ 21ರಿಂದ 24ರವರೆಗೆ 24ನೇ ಅಂತರ ಎಂಜಿನಿಯರಿಂಗ್ ಕಾಲೇಜು ಅಥ್ಲೆಟಿಕ್ ಕೂಟ ನಡೆಯಲಿದೆ’ ಎಂದು ಕುಲಪತಿ ಪ್ರೊ.ಎಸ್. ವಿದ್ಯಾಶಂಕರ ಹೇಳಿದರು.

ಇಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 21ರಂದು ಬೆಳಿಗ್ಗೆ 9 ಗಂಟೆಗೆ ಉದ್ಘಾಟನೆ ನಡೆಯಲಿದೆ. ಅಂತರರಾಷ್ಟ್ರೀಯ ಕ್ರೀಡಾಪಟುಗಳಾದ ಸಹನಾ ಕುಮಾರಿ, ನಾಗರಾಜ ಬಿ.ಜಿ. ಅತಿಥಿಗಳಾಗಿದ್ದಾರೆ.

ಟ್ರ್ಯಾಕ್ ಮತ್ತು ಫೀಲ್ಡ್‌ನ ಒಟ್ಟು 25 ಸ್ಪರ್ಧೆಗಳಲ್ಲಿ ವಿಟಿಯು ವ್ಯಾಪ್ತಿಗೆ ಒಳಪಟ್ಟ ಎಂಜಿನಿಯರಿಂಗ್ ಕಾಲೇಜುಗಳ 2,000 ಕ್ರೀಡಾಪಟುಗಳು ಭಾಗವಹಿಸುವರು.